ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 19 ಬುಧವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 4 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಕೆ.ಆರ್.ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್ ನಾಮಪತ್ರ ಸಲ್ಲಿಕೆ



ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ನಾಮಪತ್ರ ಸಲ್ಲಿಸಲು ಮೆರವಣಿಗೆಯಲ್ಲಿ ಸಾಗುತ್ತಿರುವ ಅಭ್ಯರ್ಥಿ ಕೆ.ವಿ.ಮಲ್ಲೇಶ್.

ಮೈಸೂರು,ಏ.18(ಎಂಟಿವೈ)– ಕೆ.ಆರ್. ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್ ಬೆಂಬಲಿಗರೊಂದಿಗೆ ಮೆರವಣಿಗೆ ನಡೆಸಿ, ಮಂಗಳವಾರ ಉಮೇದುವಾರಿಕೆ ಸಲ್ಲಿಸಿದರು.

ಮೈಸೂರಿನ ಅಗ್ರಹಾರದಲ್ಲಿರುವ ನೂರೊಂದು ಗಣಪತಿ ದೇವಾಲಯದ ಮುಂಭಾಗದಿಂದ ಪಕ್ಷದ ಕಾರ್ಯಕರ್ತರು, ಹಿತೈಷಿಗಳು ಹಾಗೂ ವಿವಿಧ ಜಾನಪದ ಕಲಾತಂಡಗಳೊಂದಿಗೆ ಸಯ್ಯಾಜಿರಾವ್ ರಸ್ತೆ ಮೂಲಕ ಮೈಸೂರು ನಗರ ಪಾಲಿಕೆ ಕಚೇರಿಗೆ ಆಗಮಿಸಿದ ಅಭ್ಯರ್ಥಿ ಕೆ.ವಿ.ಮಲ್ಲೇಶ್, ನಾಮಪತ್ರ ಸಲ್ಲಿಸಿದರು.

ಕೆ.ಆರ್.ಕ್ಷೇತ್ರದಲ್ಲಿ ಎರಡನೇ ಬಾರಿ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಿದ್ದಾರೆ ಕೆ.ವಿ.ಮಲ್ಲೇಶ್.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಉಪಮೇಯರ್ ಕೃಷ್ಣ, ಮುಖಂಡರಾದ ಹೆಚ್.ಕೆ.ರಾಮು, ರಾಮು, ಮುದ್ದುರಾಜು ಸೇರಿದಂತೆ ಇನ್ನಿತರರು ಸಾಥ್ ನೀಡಿದರು.

ಕಳೆಗಟ್ಟಿದ ಜಾನಪದ ಕಲಾತಂಡ: ಕೆ.ಆರ್. ವಿಧಾನಸಭಾ ಕ್ಷೇತ್ರದಲ್ಲಿ ಬಲವರ್ಧನೆಗಾಗಿ ಜೆಡಿಎಸ್ ಯತ್ನಿಸುತ್ತಿದ್ದು, ಮಂಗಳವಾರ ನಡೆದ ನಾಮಪತ್ರ ಸಲ್ಲಿಕೆ ವೇಳೆ ಜೆಡಿಎಸ್ ಶಕ್ತಿ ಪ್ರದರ್ಶನಕ್ಕೆ ಪ್ರಯತ್ನಿಸಿತು. ನೂರೊಂದು ಗಣಪತಿ ದೇವಾಲಯದ ಮುಂಭಾಗದಿಂದ ಹೊರಟ ಮೆರವಣಿಗೆಯಲ್ಲಿ ನೂರಾರು ಮಂದಿ ಕಾರ್ಯಕರ್ತರು ಪಕ್ಷದ ಬಾವುಟ ಹಿಡಿದು ಹೆಜ್ಜೆ ಹಾಕಿದರು. ಈ ವೇಳೆ ವೀರಗಾಸೆ ಹಾಗೂ ಡೊಳ್ಳು ಕುಣಿತದ ತಂಡ ಮೆರವಣಿಗೆಯ ಮೆರಗು ಹೆಚ್ಚಿಸಿದವು.



ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ರಮ್ಮನಹಳ್ಳಿ ಗ್ರಾಮದ ಕಾಂಗ್ರೆಸ್ ಯುವ ಮುಖಂಡರಾದ ಫಿಶ್ ಆನಂದ್, ಮಾದೇಶ್, ಸಂತೋಷ್, ಸ್ವಾಮಿ, ರಾಜು, ನಾಗೇಂದ್ರ, ನಾಗಣ್ಣ, ಪಾಪ, ಚೆಲುವಯ್ಯ, ಸಣ್ಣ ಬೋರಯ್ಯ, ಬಸವರಾಜು, ರಾಜಣ್ಣ ಶೇಖರ್, ಪ್ರಸಾದ್, ದೇವರಾಜ್, ಮಹೇಶ್ ವೆಂಕಟೇಶ್, ಜವರಪ್ಪ, ಚೌಕ, ಪ್ರವೀಣ್‌ಕುಮಾರ್, ಚೆಂಡು, ಮಂಜು, ಮಣಿಕಂಠ, ಜೋಗಿ, ಶೇಟು, ಚೇತನ್, ಚಂದ್ರ, ನಾಗೇಂದ್ರ, ಲಕ್ಷ್ಮಣ, ಶಿವು, ಮಂಚಪ್ಪ, ಮನೋಜ್, ಪ್ರವೀಣ್, ಕಿರಣ್, ಜವರ, ರವಿ ಇನ್ನಿತರರು ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಶ್ರೀಕಾಂತ್ ಅರಸು, ಮಾದೇಶ್, ರಾಜು, ದಳಪತಿ ಕುಮಾರ್ ಉಪಸ್ಥಿತರಿದ್ದರು.



ಮೈಸೂರಿನ ಕುವೆಂಪುನಗರ ಗಗನಚುಂಬಿ ಜೋಡಿ ರಸ್ತೆಯಲ್ಲಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ 132ನೇ ಜಯಂತಿ ಆಚರಿಸಲಾಯಿತು. ಈ ವೇಳೆ ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಕಾಂಗ್ರೆಸ್ ಯುವ ಮುಖಂಡ ಪ್ರದೀಪ್‌ಕುಮಾರ್ ಅಭಿಮಾನಿಗಳ ಸಭೆ



ಮೈಸೂರು, ಏ.18–ಮೈಸೂರು ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಕಾರ್ಪೊರೇಟರ್ ಹಾಗೂ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್ ಅವರು ನಾಳೆ (ಬುಧವಾರ) ಸಂಜೆ 5 ಗಂಟೆಗೆ ಮೈಸೂರಿನ ಅರವಿಂದ ನಗರದ ದಾರಿದೀಪ ಜನಸೇವಾ ಕೇಂದ್ರದಲ್ಲಿ ಅಭಿಮಾನಿಗಳು ಹಾಗೂ ಕಾರ್ಯಕರ್ತರ ಸಭೆ ಕರೆದಿದ್ದಾರೆ. ಸಭೆಯಲ್ಲಿ ತಮ್ಮ ರಾಜಕೀಯ ನಡೆ ಸಂಬಂಧ ವಿಚಾರ ವಿನಿಮಯ ನಡೆಸಲಿದ್ದಾರೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಡುಗೆ ಅಪಾರ

ಮೈಸೂರು, ಏ.18(ಎಂಟಿವೈ)– ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ವೇಳೆ ಕೊಟ್ಟ ಭರವಸೆಯನ್ನೆಲ್ಲಾ ಈಡೇರಿಸಿ ಹಲವು ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೈ ಬಲಪಡಿಸಲು ಈ ಬಾರಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡರನ್ನು ಗೆಲ್ಲಿಸಬೇಕು ಎಂದು ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮನವಿ ಮಾಡಿದ್ದಾರೆ.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಾಮುಂಡಿಬೆಟ್ಟ, ತಾವರೆಕಟ್ಟೆ, ನಾಡನಹಳ್ಳಿ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಸ್.ಸಿದ್ದೇಗೌಡ ಅವರೊಂದಿಗೆ ಮನೆ ಮನೆಗೆ ತೆರಳಿ ಬಿರುಸಿನ ಪ್ರಚಾರ ನಡೆಸಿದರು.

2013ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸಿ ನುಡಿದಂತೆ ನಡೆಯುವ ಏಕೈಕ ನಾಯಕರಾಗಿ ಹೆಸರು ಗಳಿಸಿದ್ದಾರೆ. ಅವರ ಕೈ ಬಲಪಡಿಸಬೇಕಾದರೆ ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಜನ ಬೆಂಬಲ ನೀಡಬೇಕು. ಅಲ್ಲದೇ, ಚಾಮುಂಡೇಶ್ವರಿ ಕ್ಷೇತ್ರ ಸಿದ್ದರಾಮಯ್ಯ ಅವರ ಅಚ್ಚುಮೆಚ್ಚಿನ ಕ್ಷೇತ್ರವಾಗಿದೆ.



ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡರನ್ನು ಗೆಲ್ಲಿಸುವ ಮೂಲಕ ಸಿದ್ದರಾಮಯ್ಯಗೆ ಕ್ಷೇತ್ರದ ಜನತೆ ಕೊಡುಗೆ ನೀಡಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷ ಜಾತ್ಯತೀತ ಪಕ್ಷವಾಗಿದ್ದು, ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವ ಪಕ್ಷವಾಗಿ ಸರ್ವರ ಹಿತ ಕಾಯುತ್ತಿದೆ. ಸಿದ್ದರಾಮಯ್ಯ, ಚಾಮುಂಡೇಶ್ವರಿ ಕ್ಷೇತ್ರದ ಎಲ್ಲಾ ಗ್ರಾಮಗಳಿಗೆ 1983ರಿಂದಲೂ ಮೂಲ ಸೌಲಭ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸಿದ್ದಾರೆ. ಜೆಡಿಎಸ್ ಮತ್ತು ಬಿಜೆಪಿ ಹಣ ಇರುವವರಿಗೆ ಮಣೆ ಹಾಕುವ ಪಕ್ಷಗಳಾಗಿವೆ ಎಂದು ಮರೀಗೌಡರು ಕಿಡಿಕಾರಿದರು.

ಈ ಸಂದರ್ಭದಲ್ಲಿ ಮುಖಂಡರಾದ ಮಾದೇಗೌಡ, ಕೃಷ್ಣಕುಮಾರ ಸಾಗರ್, ಗ್ರಾಪಂ ಮಾಜಿ ಅಧ್ಯಕ್ಷ ಭರತ್ ಕಾಳಯ್ಯ, ಶ್ರೀನಿವಾಸ್, ರವಿಕುಮಾರ್, ನಾರಾಯಣ್, ಶಿವರಾಮ ನಾಯ್ಕ, ದೊರೆಸ್ವಾಮಿ, ಶ್ರೀನಿವಾಸ, ಶಿವಕುಮಾರ, ನಾಡನಹಳ್ಳಿ ರವಿ, ಗೋಪಾಲರಾಜ್, ಜೆ.ಸತೀಶ್‌ಕುಮಾರ್, ರವಿ, ರಾಣಿ ಶಿವಣ್ಣ, ಪ್ರಸಾದ್, ಎಂ.ಬಿ.ನಾಯಕ್, ಶೋಭಾ ಮಂಜುಳ, ಮಹೇಶ್, ಶಿವು, ಕುಮಾರ, ರಾಜಶೇಖರ್, ಫ್ರಾನ್ಸಿಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವರುಣಾ ಕ್ಷೇತ್ರದಲ್ಲಿ ಸಿದ್ದರಾಮಯ್ಯಗೆ ಕುಂಬಾರ ಸಮುದಾಯದವರ ಬೆಂಬಲ

ಮೈಸೂರು,ಏ.18 (ಪಿಎಂ)–ಮಾಜಿ ಸಿಎಂ, ವರುಣಾ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯಗೆ ಈ ಬಾರಿ ಚುನಾವಣೆಯಲ್ಲಿ ಬೆಂಬಲ ನೀಡಲಿದ್ದೇವೆ ಎಂದು ಕ್ಷೇತ್ರದ ಕುಂಬಾರ ಸಮುದಾಯದ ಮುಖಂಡರು ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಮುದಾಯದ ಮುಖಂಡ ಮತ್ತು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿ ಎಂ.ಮಾರಶೆಟ್ಟಿ, ವರುಣಾ ಕ್ಷೇತ್ರದಲ್ಲಿ ಕುಂಬಾರ ಸಮುದಾಯದ 5,500 ಮತದಾರರು ಇದ್ದಾರೆ. ಪ್ರತಿ ಹಳ್ಳಿಗಳಲ್ಲೂ ನಮ್ಮ ಜನಾಂಗ ಸಭೆ ನಡೆಸಿ, ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಲು ತೀರ್ಮಾನಿಸಿದೆ ಎಂದರು. ಕ್ಷೇತ್ರದ ಪ್ರತಿ ಹಳ್ಳಿಗಳಲ್ಲೂ ಸಿದ್ದರಾಮಯ್ಯ ಮತ್ತು ಅವರ ಪುತ್ರ ಡಾ.ಯತೀಂದ್ರ ತಮ್ಮ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದು, ಸಮುದಾಯದ ಶ್ರೇಯೋಭಿವೃದ್ಧಿಗೂ ಶ್ರಮಿಸಿದ್ದಾರೆ ಎಂದರು. ಕುಂಬೇಶ್ವರ ಕುಂಬಾರರ ಕೈಗಾರಿಕಾ ಸಹಕಾರ ಸಂಘದ ಉಪಾಧ್ಯಕ್ಷ ಎಂ.ಕುಮಾರ್, ಎಸ್.ಕುಮಾರ್, ಪ್ರಕಾಶ್, ಕೃಷ್ಣಪ್ಪ, ತಿಮ್ಮಶೆಟ್ಟಿ, ರಂಗಸ್ವಾಮಿ ಸುದ್ದಿಗೋಷ್ಠಿಯಲ್ಲಿದ್ದರು.



ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ.


ವಿಧಾನಸಭಾ ಚುನಾವಣೆ - 2023
ವರುಣ ವಿಧಾನಸಭಾ ಕ್ಷೇತ್ರ
ನಾಮಪತ್ರ ಸಲ್ಲಿಕೆ
ನಾಮಪತ್ರ ಸಲ್ಲಿಕೆಗೆ
ಸಹಸ್ರ ಸಂಖ್ಯೆಯಲ್ಲಿ ಕಾಂಗ್ರೆಸ್
ಪಕ್ಷದ ಕಾರ್ಯಕರ್ತರು,
ಹಿತೈಷಿಗಳು, ಅಭಿಮಾನಿಗಳು
ಭಾಗವಹಿಸಿ ಸನ್ಮಾನ್ಯ
ಶ್ರೀ ಸಿದ್ದರಾಮಯ್ಯ
ರವರನ್ನು
ಆಶೀರ್ವದಿಸಿ, ಬೆಂಬಲಿಸಿ ಗೆಲ್ಲಿಸಿ
ದಿನಾಂಕ : 19-04-2023, ಬುಧವಾರ
ಮಧ್ಯಾಹ್ನ 1.00 ಗಂಟೆಗೆ
ನಂಜನಗೂಡಿನ ತಾಲ್ಲೂಕು ಪಂಚಾಯಿತಿ ಕಛೇರಿ
ಗುರುಪಾದಸ್ವಾಮಿ
ಕಾರ್ಯದರ್ಶಿಗಳು ಕೆ.ಪಿ.ಸಿ.ಸಿ.,
ವೀರಶೈವ ಲಿಂಗಾಯತ್ ಹಿರಿಯ ಕಾಂಗ್ರೆಸ್ ಮುಖಂಡರು
ಮೊ : 9448293548

ನಕ್ಕರೆ ಅದೇ ಸ್ವರ್ಗ

ಓರ್ವರು : (ಬರಹಗಾರರೋರ್ವರಿಗೆ) ಏನ್ರೀ ನೀವು ಬರೆದುದನ್ನು ಎಷ್ಟು ಜನ ಓದುತ್ತಾರೆ?
ಬರಹಗಾರ : ಕೇವಲ ಒಬ್ಬರೇ ಕಣ್ರೀ
ಅವರು : ಅದು ಯಾರು?
ಬರಹಗಾರ : ನನ್ನ ಟೈಪಿಸ್ಟ್ !

ಮೈಸೂರು ಮಿತ್ರ

ಬುಧವಾರ, 19 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಹಳೆಯ ಕಷ್ಟಗಳಿಗೋಸ್ಕರ ಹೊಸ ಕಣ್ಣೀರು ಸುರಿಸಬೇಡ.

– ಸಾಪೋಕ್ಲೀಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡುಗೆ ಆಗೋದಕ್ಕೆ ಮುಂಚೆ ಎಲೆ ಹಾಕಿದಾಗೆ

ನಿಮ್ಮ ಪತ್ರಗಳು

ಸಿದ್ಧಾಂತಕ್ಕೆ ಬೈ, ಗೆಲ್ಲುವ ಕುದುರೆಗೆ ಜೈ!

ಮಾನ್ಯರೆ,

ಟಿಕೆಟ್ ಹಂಚಿಕೆಯಲ್ಲಿ ಎಲ್ಲಾ ಪಕ್ಷಗಳದ್ದು ಒಂದೇ ಮಾನದಂಡ. ಸಿದ್ಧಾಂತಗಳಿಗೆ ಎಳ್ಳುನೀರು ಬಿಟ್ಟು ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ನೀಡುವುದು. ಒಂದೇ ಕ್ಷೇತ್ರದಲ್ಲಿ ಹಲವಾರು ಬಾರಿ ಶಾಸಕರಾಗಿ, ಮಂತ್ರಿಗಳಾಗಿ ಹಲವು ಹುದ್ದೆಗಳನ್ನು ಅನುಭವಿಸಿದವರಿಗೂ ಟಿಕೆಟ್ ಕೊಡದಿದ್ದರೆ ಮತ್ತೊಂದು ಪಕ್ಷಕ್ಕೆ ಹಾರಿ ಆ ಪಕ್ಷದ ಚಿನ್ಹೆಯಲ್ಲಿ ನಿಲ್ಲುವುದು. ನಿಷ್ಠಾವಂತ ಹಾಗೂ ಶುದ್ಧಹಸ್ತರಿಗೆ ಚುನಾವಣೆ ನಿಲುಕದ ಮಾಯೆ. ಒಂದು ಕ್ಷೇತ್ರದಲ್ಲಿ ಚುನಾವಣೆಗೆ ನಿಂತವರೆಲ್ಲರೂ ಜಂಪಿಂಗ್ ಸ್ಟಾರ್‌ಗಳೇ ಆದಾಗ ಮತದಾರ ಯಾರಿಗೆ ಮತದಾನ ಮಾಡಬೇಕೆಂಬ ಸಂದಿಗ್ಧ ಪರಿಸ್ಥಿತಿಯಲ್ಲಿ!, ಎರಡು ಕ್ಷೇತ್ರದಲ್ಲಿ ನಿಂತು ಗೆದ್ದಲ್ಲಿ ಒಂದು ಕ್ಷೇತ್ರಕ್ಕೆ ಮತ್ತೇ ಉಪಚುನಾವಣೆ. ಕಡೆಗೆ ಫಲಿತಾಂಶ ಮತ್ತದೇ ಅತಂತ್ರ ಸ್ಥಿತಿ. ಆಪರೇಷನ್‌ಗಾಗಿ ರೆಸಾರ್ಟ್ ರಾಜಕೀಯ, ಸರ್ಕಾರ ರಚನೆಯಲ್ಲಿ ಮತದಾರನಿಗೆ ಕುತೂಹಲ, ಅರಳಿಕಟ್ಟೆ ಹರಟೆಗೆ ಮಸ್ತು ಮಸ್ತು ವಿಷಯ. ಸಮಾಧಾನವೆಂದರೆ ಕೂಡಿಟ್ಟ ಕಪ್ಪು ಹಣ ಚಲಾವಣೆಗೆ ಬರುವುದು. ಪ್ರತೀ ಚುನಾವಣೆಯಲ್ಲೂ ಹಣದ ಆರ್ಭಟದಿಂದ ಪ್ರಜಾಪ್ರಭುತ್ವದಲ್ಲಿ ಜನಸಾಮಾನ್ಯನು ಜನಪ್ರತಿನಿಧಿ ಆಗುವುದು ಕನಸಾಗಿದೆ. ಮತದಾರನಿಗೆ ಅನಿಸುವುದಿಲ್ಲವೇ ಒಬ್ಬ ಮನುಷ್ಯ ಎಷ್ಟು ಬಾರಿ ಶಾಸಕನಾಗುವುದೆಂದು?!, ಅಂದರೆ ಕ್ಷೇತ್ರದಲ್ಲಿ ಬೇರೆ ಸಮರ್ಥರು ಇಲ್ಲವೆಂದೆ? ಇನ್ನಾದರೂ ಐದು ವರ್ಷಗಳ ಅವಧಿಗೆ ಸುಭದ್ರ ಸರ್ಕಾರ ರಚನೆ ಆಗುವ ನಿಟ್ಟಿನಲ್ಲಿ ನಿಯಮದಲ್ಲಿ ಕಠಿಣ ತಿದ್ದುಪಡಿಗಳನ್ನು ತರದಿದ್ದರೆ ಹೊರೆ ಮತದಾರನ ಮೇಲೆಯೇ!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು

ಎಲ್ಲೆಡೆ ಕಾಂಚಾಣದ ಗಾಳಿ ಬೀಸಿದಾಗ

ಮಾನ್ಯರೆ,

ಇಂದಿನ 2023ರ ಸಾರ್ವತ್ರಿಕ ವಿಧಾನಸಭಾ ಚುನಾವಣೆ ಅಬ್ಬರದ ಪ್ರಚಾರ ಗಮನಿಸಿದರೆ ಎಲ್ಲೆಲ್ಲೂ ಕಾಂಚಾಣದ ಬಿರುಸಿನ ಸ್ಪರ್ಧೆ ನಡೆಯುತ್ತಿದೆ ಎನಿಸುತ್ತದೆ. ಕೊರೊನಾ ಸಂದರ್ಭದಲ್ಲಿ ಜನರ ಕಷ್ಟಕ್ಕೆ ಆಗದ ಚುನಾವಣೆ ಸ್ಪರ್ಧಿಗಳು ಈಗ ಎಲ್ಲೆಡೆ ಬೀದಿ ಬೀದಿಯಲ್ಲಿ ಸಹಾಯಹಸ್ತ ಚಾಚುವ ಭರವಸೆ ನೀಡುತ್ತಿದ್ದಾರೆ. ಎಲ್ಲೆಲ್ಲೂ ಹಣದ ಹೊಳೆ ಹರಿದಾಡುತ್ತಿದೆ. ಇದನ್ನು ನೋಡಿದರೆ ಜನರ ಮನಸ್ಥಿತಿಯ ಬಗ್ಗೆ ಬೇಸರವೆನಿಸುತ್ತದೆ. ಚುನಾವಣೆಯಲ್ಲಿ ಹಣ ಬಲದಿಂದ ಗೆದ್ದು ಬಂದ ಅಭ್ಯರ್ಥಿ ತನ್ನ ಸ್ಥಾನ ಬಲ ಪಡೆದ ನಂತರ ಸಾರ್ವಜನಿಕರ ಕಷ್ಟಕ್ಕೆ ಆಗುತ್ತಾರೆಯೇ ಎಂಬ ಅನುಮಾನ ಮೂಡುತ್ತದೆ. ಕಾಂಚಾಣದ ಮುಂದೆ ಅರ್ಹ ಅಭ್ಯರ್ಥಿಯು ನ್ಯಾಯ ಸಿಗುತ್ತದೆ ಎಂಬ ನಂಬಿಕೆ ಹುಸಿಯಾಗುತ್ತಿದೆ. ನಮ್ಮ ದೇಶ ಬಲಪಡಿಸಬೇಕಾದರೆ ನಮ್ಮ ಮತದಾನವು ಅತ್ಯಮೂಲ್ಯ ಆಗಿರಬೇಕು. ಯಾವ ಆಮಿಷಗಳಿಗೆ ಬಲಿಯಾಗಬಾರದು.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಇಂತಹ ಮರಗಳಿಂದ ಆಗುವಂತಹ ಅನಾಹುತಗಳಿಗೆ ಹೊಣೆ ಯಾರು?





ಮಾನ್ಯರೆ,

ಮೈಸೂರು ನಗರದ ಲಲಿತಮಹಲ್ ವೃತ್ತದಿಂದ ಜಾಕೀ ಕ್ವಾಟ್ರಸ್ ಮತ್ತು ರೇಸ್‌ಕೋರ್ಸ್ ವೃತ್ತದವರೆಗೆ ಹಲವಾರು ಮರಗಳ ರೆಂಬೆಗಳು ಒಣಗಿದ್ದು, ರಸ್ತೆಯಲ್ಲಿ ಓಡಾಡುವವರ ಮೇಲೆ ಯಾವಾಗ ಬೇಕಾದರೂ ಬೀಳುವ ಸ್ಥಿತಿಯಲ್ಲಿವೆ.

ಪ್ರವಾಸಿಗರು, ಸಾರ್ವಜನಿಕರು ಮತ್ತು ಚಾಮುಂಡಿಬೆಟ್ಟಕ್ಕೆ ಹೋಗುವ ಭಕ್ತಾದಿಗಳು ಸಹ ಇದೇ ರಸ್ತೆಯಲ್ಲಿ ಸಂಚರಿಸುವುದರಿಂದ ಮುಂದಾಗುವ ಅನಾಹುತಗಳನ್ನು ತಪ್ಪಿಸಲು ಈಗಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಈ ಮನವಿಗೆ ಸ್ಪಂದಿಸಿ ತೆರವುಗೊಳಿಸುವ ಕಾರ್ಯವನ್ನು ಮಾಡಬೇಕು. ಇಲ್ಲವಾದಲ್ಲಿ ಮುಂದೆ ಆಗುವ ಅನಾಹುತಗಳಿಗೆ ಹೊಣೆ ಯಾರು?

–ಜೀವನ್.ಎಸ್, ಜೆಎಸ್‌ಎಸ್ ನಗರ, ಮೈಸೂರು

ಬೀಜಾಂಕುರ!

ಮಾನ್ಯರೆ,

'ಆದದ್ದೆಲ್ಲಾ ಒಳ್ಳೆಯದಕ್ಕೆ...!' (ಡಾ. ವಿ. ರಂಗನಾಥ್ ಅವರ ಅಂಕಣ ಬರಹ, 'ಮಿತ್ರ', ಏ. 7).

"ಆದದ್ದೆಲ್ಲಾ ಒಳಿತೇ ಆಯಿತು" ಎಂಬುದು ಪುರಂದರದಾಸರ ಒಂದು ಉಕ್ತಿ ಮುಕ್ತಕ. ಅದು ಎಲ್ಲ ಸಂದರ್ಭಗಳಲ್ಲೂ ಸಮಾಧಾನ ಕೊಡದಿರಬಹುದು; ಆದರೆ ಕೆಲವು ಸಂದರ್ಭಗಳಲ್ಲಾದರೂ ಸತ್ಯಸ್ಯ ಸತ್ಯ!

ನನ್ನ ವೈಯಕ್ತಿಕ ಜೀವನದ ಒಂದು ನಿದರ್ಶನ ಕೊಡಬಯಸುತ್ತೇನೆ. ನಾನು (ಆಗಿನ) ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ (1956) ಒಂದೇ ಸಲಕ್ಕೆ ಉತ್ತೀರ್ಣನಾಗಲಿಲ್ಲ; ಐಚ್ಛಿಕ ವಿಷಯಗಳಲ್ಲಿ ಪರೀಕ್ಷೆ ತೆಗೆದುಕೊಳ್ಳದೆ ಅನುತ್ತೀರ್ಣನಾದೆ! ಆದರೆ ಅದರಿಂದ ಮುಂದಕ್ಕೆ ಬಹಳ ಒಳ್ಳೆಯದೇ ಆಯಿತು. ಏನು! ಪರೀಕ್ಷೆಯಲ್ಲಿ ಪಾಸಾಗದೆ ಫೇಲಾಗುವುದೂ ಅಪೇಕ್ಷಣೀಯವೆ? ಹೌದು! ನನ್ನ ವಿಷಯದಲ್ಲಿ ಅದು ಹೇಗೆಂಬುದರ ವಿವರಗಳು ಇಲ್ಲಿ ಬೇಡ. ಅದು ದೊಡ್ಡಕತೆ.

ಅಂತೂ ಈ ಹೊತ್ತು ನಾನು ಏನೇನಾಗಿದ್ದೇನೊ ಅದಕ್ಕೆಲ್ಲ ಬೀಜಾಂಕುರವಾಯಿತು. ಅಂದಿನ ಅನುತ್ತೀರ್ಣತೆ ಎಂದರೆ ತಪ್ಪಾಗದು! (ಒಂದು ವರ್ಷ ವ್ಯರ್ಥವಾಗಲಿಲ್ಲ, ಸಾರ್ಥಕವೇ ಆಯಿತು).

ಬದುಕು ವಿಚಿತ್ರವಾದದ್ದಲ್ಲವೆ? ವಿಧಿಲೀಲೆ ವಿಸ್ಮಯಕರವಾದದ್ದಲ್ಲವೆ?

– ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ವಿಕಾಸ

(ನೂರು ವರ್ಷಗಳ ರೋಚಕ ಇತಿಹಾಸ)

ತತ್ತ್ವಶಾಸ್ತ್ರ ಸಾಗರದಷ್ಟು ವಿಶಾಲ, ಗಂಭೀರ. ಒಬ್ಬೊಬ್ಬ ತತ್ತ್ವಶಾಸ್ತ್ರೀಯ ಅಥವಾ ದಾರ್ಶನಿಕನ ವಿಚಾರಗಳ ಆಳ-ಅಗಲಗಳನ್ನು ತಿಳಿದುಕೊಳ್ಳುವುದೇ ಸಾಹಸವೆನಿಸುತ್ತದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರವನ್ನು ಬೋಧಿಸಿದ ಪ್ರಾಧ್ಯಾಪಕರು ಪೌರಸ್ತ್ಯ ಮತ್ತು ಪಾಶ್ಚಾತ್ಯ ದರ್ಶನಕಾರರ ಸಿದ್ಧಾಂತಗಳನ್ನೆಲ್ಲಾ ಅರೆದು ಕುಡಿದಿದ್ದವರು. ಏ.ಆರ್.ವಾಡಿಯಾ 1917ರಲ್ಲಿ ಜನವರಿ ಒಂದನೆಯ ತಾರೀಖು ಹೊಸ ವರ್ಷದ ಕೊಡುಗೆಯಂತೆ ವಿಶ್ವವಿದ್ಯಾನಿಲಯಕ್ಕೆ ಬಂದರು. ತತ್ತ್ವಶಾಸ್ತ್ರದ ಅಧ್ಯಯನಕ್ಕೆ ಭದ್ರವಾದ ಬುನಾದಿಯನ್ನು ಹಾಕಿದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ಸಂಸ್ಥಾನಕ್ಕೆ ಸಲ್ಲಿಸಿದ ಸೇವೆಗಳು ಅನುಪಮ ಮತ್ತು ಶಾಶ್ವತ. ಜ್ಞಾನ ಕ್ಷೇತ್ರಕ್ಕೆ ಅವರು ಕೊಟ್ಟ ದೊಡ್ಡ ಕೊಡುಗೆ ಮೈಸೂರು ವಿಶ್ವವಿದ್ಯಾನಿಲಯ. ಇದರಲ್ಲಿ ಜ್ಞಾನ, ವಿಜ್ಞಾನ, ಗಣಿತ, ತತ್ತ್ವಶಾಸ್ತ್ರ–ಯಾವುದನ್ನು ತೆಗೆದುಕೊಂಡರೂ ಶ್ರೇಷ್ಠಾತಿಶ್ರೇಷ್ಠ ಸಾಧಕರನ್ನು ಕಾಣಬಹುದು. ಅದರಲ್ಲೂ ತತ್ತ್ವಶಾಸ್ತ್ರ (Philosophy) ವಿಭಾಗವನ್ನು ನೋಡಿದರೆ ಅಲ್ಲಿ ನಾವು ಕಾಣುವುದು ಜ್ಞಾನಾಕಾಶದ ಉಜ್ವಲತಮ ನಕ್ಷತ್ರಗಳನ್ನು. ನೂರು ವರ್ಷಗಳ ತತ್ತ್ವಶಾಸ್ತ್ರ ವಿಭಾಗದ ಶ್ರೇಷ್ಠರನ್ನೂ ಜ್ಯೇಷ್ಠರನ್ನೂ ವರಿಷ್ಠರನ್ನೂ ಅವರ ಸಾಧನೆ–ಸಿದ್ಧಿಗಳನ್ನು ಬೆಳಕಿಗೆ ತರುವ ಉತ್ತಮ ಗ್ರಂಥ Hundred years of philosophy in Mysore University - An overview 2018ರಲ್ಲಿ ನಡೆದ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಪ್ರಸ್ತುತಪಡಿಸಲಾದ ಐವತ್ತು ಪ್ರಬಂಧಗಳ ಸಂಕಲನರೂಪವಾಗಿದೆ ಈ ಗ್ರಂಥ.

ತತ್ತ್ವಶಾಸ್ತ್ರ ಸಾಗರದಷ್ಟು ವಿಶಾಲ, ಗಂಭೀರ. ಒಬ್ಬೊಬ್ಬ ತತ್ತ್ವಶಾಸ್ತ್ರೀಯ ಅಥವಾ ದಾರ್ಶನಿಕನ ವಿಚಾರಗಳ ಆಳ–ಅಗಲಗಳನ್ನು ತಿಳಿದುಕೊಳ್ಳುವುದೇ ಸಾಹಸವೆನಿಸುತ್ತದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರವನ್ನು ಬೋಧಿಸಿದ ಪ್ರಾಧ್ಯಾಪಕರು ಪೌರಸ್ತ್ಯ ಮತ್ತು ಪಾಶ್ಚಾತ್ಯ ದರ್ಶನಕಾರರ ಸಿದ್ಧಾಂತಗಳನ್ನೆಲ್ಲಾ ಅರೆದು ಕುಡಿದಿದ್ದವರು. ಏ.ಆರ್. ವಾಡಿಯಾ 1917 ರಲ್ಲಿ ಜನವರಿ ಒಂದನೆಯ ತಾರೀಖು ಹೊಸ ವರ್ಷದ ಕೊಡುಗೆಯಂತೆ ವಿಶ್ವವಿದ್ಯಾನಿಲಯಕ್ಕೆ ಬಂದರು. ತತ್ತ್ವಶಾಸ್ತ್ರದ ಅಧ್ಯಯನಕ್ಕೆ ಭದ್ರವಾದ ಬುನಾದಿಯನ್ನು ಹಾಕಿದರು. 1918ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಬಂದ ಡಾ. ಎಸ್. ರಾಧಾಕೃಷ್ಣನ್ ಪ್ರಪಂಚವೇ ಗೌರವಿಸಿದ ಭಾಷಣಕಾರ – ಗ್ರಂಥಕಾರ–ಪ್ರಾಧ್ಯಾಪಕ. ಮುಂದೆ ಸ್ವತಂತ್ರ ಭಾರತದಲ್ಲಿ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದವರು. ಇವರು ಇಂಗ್ಲೀಷಿನಲ್ಲಿ ಬರೆದಿರುವ ಒಂದೊಂದು ಗ್ರಂಥದ ಬಗೆಗೂ ಒಂದೊಂದು ಲೇಖನವನ್ನು ಬರೆಯಬೇಕು. ಇಪ್ಪತ್ತನೆಯ ಶತಮಾನದಲ್ಲಿ ಭಾರತ ದೇಶವು ತತ್ತ್ವಶಾಸ್ತ್ರಕ್ಕೆ ಕೊಟ್ಟ ಅತ್ಯಂತ ದೊಡ್ಡ ಕಾಣಿಕೆ ಡಾ. ರಾಧಾಕೃಷ್ಣನ್, ಪ್ರೊ. ವಿ.ಎನ್. ಶೇಷಗಿರಿರಾವ್ ತಮ್ಮ ಲೇಖನದಲ್ಲಿ ಇದನ್ನು ವಿಶದಪಡಿಸಿದ್ದಾರೆ.

ಜಗತ್ತಿನ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಇಂದು ಕೂಡ ಭಾರತೀಯ ದರ್ಶನ ಪರಿಚಯಕ್ಕಾಗಿ ಅವಲಂಬಿಸಲಾಗುವ ಗ್ರಂಥಗಳನ್ನು ಬರೆದವರು ಪ್ರೊ. ಎಂ. ಹಿರಿಯಣ್ಣ. ಶಿಬನಾಥ ಶರ್ಮರು ಹಿರಿಯಣ್ಣನವರ ಹಿರಿಮೆ ಗರಿಮೆಗಳನ್ನು ತಮ್ಮ ಪ್ರಬಂಧದಲ್ಲಿ ಚಿತ್ರಿಸಿದ್ದಾರೆ. ಆಚಾರ್ಯ ಬ್ರಜೇಂದ್ರನಾಥ ಸೀಲ್ ಕೃಷ್ಣರಾಜ ಒಡೆಯರ್ ಅವರಿಂದ ಕುಲಪತಿ ಸ್ಥಾನವನ್ನು ಅಲಂಕರಿಸಲು ಆಹ್ವಾನಿಸಲ್ಪಟ್ಟ ಮಹಾಮೇಧಾವಿ. ತತ್ತ್ವಶಾಸ್ತ್ರವೇ ಅಲ್ಲದೆ ಇತರ ವಿಚಾರ ಕ್ಷೇತ್ರಗಳಲ್ಲೂ ಇವರ ಲೇಖನಗಳು ಮತ್ತು ಗ್ರಂಥಗಳು ಪ್ರಸಿದ್ಧವಾಗಿವೆ. ಭೂಪೇಂದ್ರ ಚಂದ್ರಹಾಸ್ ಇವರ ಕೊಡುಗೆಯ ಮಹತ್ತ್ವವನ್ನು ವಿವರಿಸಿದ್ದಾರೆ. ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಸಂಸ್ಕೃತದಲ್ಲಿ ದರ್ಶನೋದಯ ಮತ್ತು ಮಾನಮೇಯ ರಹಸ್ಯ ಶ್ಲೋಕ ವಾರ್ತಿಕ ಎಂಬ ಗ್ರಂಥಮಣಿಗಳನ್ನು ರಚಿಸಿದವರು. ಇವರ ಪರಿಚಯವೂ ಈ ಪುಸ್ತಕದಲ್ಲಿದೆ. ಮೌಲ್ಯಗಳ ಬಗೆಗೆ ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಅವರ ಚಿಂತನೆಗಳ ಮಹತ್ತ್ವವನ್ನು ಕೆ.ಎಸ್. ಯದುರಾಜನ್ ತಿಳಿಸಿದ್ದಾರೆ.

ಪ್ರೊ. ಜಿ. ಹನುಮಂತರಾವ್ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾಗಿ, ಪ್ರಸಾರಾಂಗದ ನಿರ್ದೇಶಕರಾಗಿ ಮಾಡಿದ ಸೇವೆ ಸ್ಮರಣೀಯ. ಸಾಧಾರಣೀಕರಣವೆಂಬ ಪರಿಕಲ್ಪನೆಯನ್ನು ಅವರು ವಿಶದಪಡಿಸಿದ್ದಾರೆ. ಇವರ ಬಗ್ಗೆ ಡಿ. ಕೃಷ್ಣಮೂರ್ತಿಯವರ ಲೇಖನ ಪಠನಾರ್ಹವಾಗಿದೆ. ಹಾಗೆಯೇ ಜಿ.ಎಚ್. ಕೃಷ್ಣಮೂರ್ತಿ, ಜಿ.ಆರ್. ಶೈಲಜ ಮತ್ತು ಭಾರತೀ ಕಾಸರಗೋಡು ಅವರು ಜಿ. ಹನುಮಂತರಾವ್ ಬಗೆಗೆ ಉತ್ತಮ ಲೇಖನಗಳನ್ನು ಇಲ್ಲಿ ಬರೆದಿದ್ದಾರೆ. ಇಂಗ್ಲೀಷ್‌ನಲ್ಲಿ ಮತ್ತು ಕನ್ನಡದಲ್ಲಿ ಜಿ.ಎಚ್. ಅವರು ಬರೆದ ಲೇಖನಗಳ ಪರಿಚಯ ಇಲ್ಲಿ ಸಿಕ್ಕುತ್ತದೆ.

ನ್ಯಾಯಾಮೃತ, ಅದ್ವೈತ ಸಿದ್ಧಿಗಳಂತಹ ಭಾರತೀಯ ಕೃತಿಗಳನ್ನು ಪ್ರೀತಿಸಿದಷ್ಟೇ ಬ್ರಾಡ್ಲೆ, ಬೊಸಾಂಕೆ ಮುಂತಾದ ಪಾಶ್ಚಾತ್ಯ ದಾರ್ಶನಿಕರ ಕೃತಿಗಳನ್ನೂ ಪ್ರೀತಿಸುತ್ತಿದ್ದ, ಕಾಲದ ವಿಷಯದಲ್ಲಿ ಅಪಾರ ಚಿಂತನೆಯನ್ನು ಮಾಡಿದ್ದ ಪ್ರೊ. ಎಂ.ಎ. ವೆಂಕಟರಾವ್ ಎಂಬ ಪ್ರಾಧ್ಯಾಪಕರ ಬಗೆಗೆ ವಿ.ಎನ್. ಶೇಷಗಿರಿರಾವ್ ಬೆಳಕನ್ನು ಚೆಲ್ಲಿದ್ದಾರೆ. ಪ್ರೊ. ಹೆಚ್.ಎನ್. ರಾಘವೇಂದ್ರ ರಾವ್ ಅವರನ್ನು ಅವರ ಸುಪುತ್ರ ಹೆಚ್. ಆರ್. ರಾಮಚಂದ್ರರು ಪರಿಚಯಿಸಿದ್ದಾರೆ. ದ್ವೈತ ವೇದಾಂತದಲ್ಲಿ ಶ್ರೀಯುತರು ಎಷ್ಟು ಆಳವಾಗಿ ಅಧ್ಯಯನ ಮಾಡಿದ್ದರು ಎಂದು ಈ ಲೇಖನದಿಂದ ತಿಳಿದುಕೊಳ್ಳಬಹುದು. ಪ್ರೊ. ಕೆ.ಬಿ. ಪ್ರಭುಪ್ರಸಾದ್ ಅವರು ಪ್ರೊ. ಟಿ.ಪಿ. ಪುರುಷೋತ್ತಮರ ವೈಶಿಷ್ಟ್ಯಗಳನ್ನು ವಿವರಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಪ್ರೊ. ಎನ್.ಎ. ನಿಕ್ಕಂ ಅವರೂ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅವರ ಮಗಳು ಶೈಲಜಾ ನಿಕ್ಕಂ ತಂದೆಯ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಪ್ರೊ. ವಿ.ಕೆ. ನಟರಾಜ್ ಅವರೂ ತಾವು ಕಂಡಂತೆ ನಿಕ್ಕಂ ಅವರ ವ್ಯಕ್ತಿತ್ವವನ್ನು ಬಣ್ಣಿಸಿದ್ದಾರೆ. ಎಂ. ಎಸ್.ಅಯ್ಯಂಗಾರ್, ಪ್ರೊ. ಎಂ.ಯಾಮುನಾಚಾರ್ಯರ ಜೀವನವನ್ನು ಚಿತ್ರಿಸಿ ಅವರ ಗುಣಗಳನ್ನು ಹೇಳಿದ್ದರೆ, ವಿ.ಎನ್. ಶೇಷಗಿರಿರಾವ್ ಬದುಕಿನ ವಿವರಣೆಯ ಜೊತೆಗೆ ಯಾಮುನಾಚಾರ್ಯರ ಕೃತಿಗಳ ಪರಿಚಯವನ್ನು ಮಾಡಿಸಿ ತತ್ತ್ವಶಾಸ್ತ್ರಕ್ಕೆ ಅವರ ಕೊಡುಗೆಯನ್ನು ತಿಳಿಸಿಕೊಟ್ಟಿದ್ದಾರೆ.

ಎಂ. ಗೋವಿಂದಪ್ರಸಾದ್, ಡಿ. ಕುಮಾರ್, ಆರ್. ವಿಶ್ವೇಶ್ವರನ್ ಅವರೂ ಅದರಲ್ಲಿ ಕೈಜೋಡಿಸಿದ್ದಾರೆ. ಪ್ರೊ. ಸಿ.ವಿ. ಶ್ರೀನಿವಾಸ ಮೂರ್ತಿಯವರ ಪರಿಚಯವನ್ನು ಅವರ ಸುಪುತ್ರಿ ಸಿ.ಎಸ್. ಕಮಲಾ ಮಾಡಿಕೊಟ್ಟಿದ್ದಾರೆ. ಹಾಗೆಯೇ ಹೆಚ್.ಕೆ. ರಾಜಾರಾಯರನ್ನು ಕೆ.ಬಿ. ಪ್ರಭುಪ್ರಸಾದ್, ಎಸ್. ರಂಗಾಚಾರ್ಯರನ್ನು ಮತ್ತು ವೈ.ಜೆ. ಪದ್ಮರಾಜಯ್ಯನವರನ್ನು ವಿ.ಎನ್.ಶೇಷಗಿರಿರಾವ್, ವಿ. ಮುದ್ದಲಿಂಗಣ್ಣನವರನ್ನು ಬಿ.ಕೆ.ಶಿವಣ್ಣ ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ.

ಎನ್.ಜಿ. ಮಹಾದೇವಪ್ಪನವರು ಪ್ರೊ. ಎಸ್. ಎಸ್. ರಾಘವಾಚಾರ್ಯರು ತತ್ತ್ವಶಾಸ್ತ್ರಕ್ಕೆ ನೀಡಿದ ಕೊಡುಗೆ ಎಂಬ ಲೇಖನದಲ್ಲಿ ಆಚಾರ್ಯರು ದ್ವೈತ–ಅದ್ವೈತ–ವಿಶಿಷ್ಟಾದ್ವೈತಗಳಲ್ಲಿ ಸಮ ದೃಷ್ಟಿಯನ್ನಿಟ್ಟುಕೊಂಡು ಮಧ್ವರ ವಿಷ್ಣು ತತ್ತ್ವ ವಿನಿರ್ಣಯವನ್ನೂ, ಸುರೇಶ್ವರರ ನೈಷ್ಕರ್ಮ್ಯ ಸಿದ್ಧಿಯನ್ನೂ ರಾಮಾನುಜರ ವೇದಾರ್ಥ ಸಂಗ್ರಹವನ್ನೂ ಇಂಗ್ಲೀಷಿಗೆ ಅನುವಾದಿಸಿರುವುದನ್ನು ಪ್ರತಿಪಾದಿಸಿದ್ದಾರೆ. ಇಷ್ಟೇ ಅಲ್ಲದೆ ಅನೇಕ ಸ್ವತಂತ್ರ ಗ್ರಂಥಗಳನ್ನೂ ರಚಿಸಿದ್ದಾರೆ – ಎಂದು ಹೇಳಿ ಎಸ್.ಎಸ್.ಆರ್. ಅವರ ಉನ್ನತ ವ್ಯಕ್ತಿತ್ವವನ್ನು ನಿರೂಪಿಸಿದ್ದಾರೆ.

ಏ.ಎನ್. ವೈಟ್‌ಹೆಡ್ ಪಾಶ್ಚಾತ್ಯ ದಾರ್ಶನಿಕರಲ್ಲಿ ದೊಡ್ಡ ಹೆಸರನ್ನು ಗಳಿಸಿದವರು. ಅವರ ಚಿಂತನೆಗಳನ್ನು ಕುರಿತು ಬರೆದವರು ಎಲ್.ವಿ. ರಾಜಗೋಪಾಲ್. ಈ ವಿಚಾರವನ್ನು ಪಾಂಡಿತ್ಯ ಪೂರ್ಣವಾಗಿ ತಿಳಿಸಿಕೊಟ್ಟಿದ್ದಾರೆ. ಎಂ.ಎ. ಜಾಲಿಹಾಳ್, ಎಂ.ವಿ. ಶ್ರೀಧರ್ ಅವರೂ ವೈಟ್‌ಹೆಡ್ ತತ್ತ್ವಶಾಸ್ತ್ರದಲ್ಲಿ ಮಾಡಿದ ಅನ್ವೇಷಣೆಗಳ ಬಗೆಗೆ ತಮ್ಮ ಲೇಖನದಲ್ಲಿ ನಿರೂಪಿಸಿದ್ದಾರೆ. ಶ್ರೀಮತಿ ಶುಭದಾ ಅವರು ಪ್ರೊ. ಎಚ್.ಟಿ. ಶಾಂತಾ ಅವರ ಜೀವನಕಾಂತಿಯನ್ನು ಮನಮುಟ್ಟುವಂತೆ ಹೇಳಿದ್ದಾರೆ.

Skeptisism (ಸಂದೇಹವಾದ) ಬಗೆಗೆ ಆರ್.ಐ. ಇಂಗಲ್ಲಿ ಅವರು ಬರೆದಿರುವ ಲೇಖನ ಮತ್ತು Metaphysical statements ಬಗೆಗೆ ಪಿ.ಆರ್. ಭಟ್ ಅವರ ಲೇಖನ ವಿಚಾರ ಪ್ರಚೋದಕರಾಗಿದ್ದು ಅತ್ಯಂತ ಅಮೂಲ್ಯವಾಗಿವೆ. ಪ್ರೊ. ಎಂ.ಎನ್. ನರಸಿಂಹನ್ ಅವರ ವಿಷಯದಲ್ಲಿ ಎಂ.ಕೆ. ಕೃಷ್ಣ ಮತ್ತು ಎಚ್.ಎಂ. ಮಲ್ಲಿಕಾರ್ಜುನಸ್ವಾಮಿ ಪರಿಚಯಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಪ್ರೊ. ಕೆ.ಬಿ. ರಾಮಕೃಷ್ಣರಾವ್ ಅವರನ್ನು ಕುರಿತು ಅವರ ಸುಪುತ್ರಿ ಕೆ.ಆರ್. ವಿಜಯಲಕ್ಷ್ಮಿ ಆತ್ಮೀಯವಾಗಿ ಬರೆದಿದ್ದಾರೆ. ರಾಮಕೃಷ್ಣರಾವ್ ಅವರನ್ನು ಆದರ್ಶಗಳ ಆರಾಧಕ ಎಂದು ಕರೆದಿರುವ ಡಾ. ಪ್ರಧಾನ್ ಗುರುದತ್ತರು 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂಬುದಕ್ಕೆ ಅವರು ಉದಾಹರಣೆಯಾಗಿದ್ದರೆಂಬುದನ್ನು ಸೋದಾಹರಣವಾಗಿ ಪ್ರತಿಪಾದಿಸಿದ್ದಾರೆ. ಈ ಪ್ರಾಧ್ಯಾಪಕರ ಬಗೆಗೆ ಯು.ಎ. ವಿನಯ ಕುಮಾರ್, ಕೆ.ವಿ. ಶಿವಸ್ವಾಮಿ, ಅವರ ಲೇಖನಗಳೂ ಈ ಪುಸ್ತಕದಲ್ಲಿವೆ. ಪ್ರೊ. ಎ.ಎಲ್. ಶಿವರುದ್ರಪ್ಪನವರ ಬೋಧನಾವಿಧಾನವನ್ನು ಒಂದು ಲೇಖನದಲ್ಲಿ ಎಚ್.ಆರ್. ಶಂಕರ ನಾರಾಯಣ ವಿವರಿಸಿದ್ದಾರೆ.

ಡಾ. ಸಿ. ಪಾರ್ವತಮ್ಮ ಅವರನ್ನು ಕುರಿತು ಸತ್ಯನಾರಾಯಣ ಅವರೂ ಪ್ರೊ. ಏ.ಡಿ. ಮನ್ದೊನ್‌ಸಾ ಅವರ ಬಗೆಗೆ ಕೆ.ಎಂ. ಪೂಣಚ್ಚ ಅವರೂ ಹೃದಯಸ್ಪರ್ಶಿ ಲೇಖನಗಳನ್ನು ಬರೆದಿದ್ದಾರೆ. ಡಾ. ಜಿ. ಶ್ರೀನಿವಾಸನ್ ಅವರ ಬಗೆಗೆ ಕೆ.ಎಲ್. ಪದ್ಮಿನಿಯವರು ಬರೆದಿರುವ ಲೇಖನದಲ್ಲಿ ಆ ಪ್ರಾಧ್ಯಾಪಕರು ಇಂಗ್ಲೀಷಿ ನಲ್ಲೂ ಕನ್ನಡದಲ್ಲೂ ಬರೆದ ಗ್ರಂಥ ಸಂಪತ್ತು ಗೋಚರವಾಗುತ್ತದೆ. ಭಾರತೀಯ ದರ್ಶನಗಳು Philosophy ಎನಿಸಿಕೊಳ್ಳಲು ಅರ್ಹವಲ್ಲ ಎಂಬ ಕೆಲವರು ಪಾಶ್ಚಾತ್ಯರ ಹೇಳಿಕೆಗಳನ್ನು ಪ್ರೊ. ಶ್ರೀನಿವಾಸನ್ ಸಕಾರಣವಾಗಿ ಖಂಡಿಸಿರುವುದನ್ನು ಪದ್ಮಿನಿಯವರು ಉಲ್ಲೇಖಿಸಿ ಅವರ ಗೌರವವನ್ನು ಹೆಚ್ಚಿಸಿದ್ದಾರೆ.

ಪ್ರೊ. ಡಿ.ಎಲ್. ಪಾಟೀಲರ ಬಗೆಗೆ ಸಿ.ಪಿ. ರಾಮಶೇಷ ಭಕ್ತಿಭರಿತವೂ ಭಾವನಾಮಯವೂ ಆದ ಲೇಖನವನ್ನು ಬರೆದಿದ್ದಾರೆ. ಜಿ.ಇ. ಮೂರ್ ಎಂಬ ಪಾಶ್ಚಾತ್ಯ ದಾರ್ಶನಿಕನನ್ನು ಕುರಿತು ಪಾಟೀಲರ ಸಂಶೋಧನೆ, ಅವರ ಚಿಂತನೆಗಳ ವಿಶ್ಲೇಷಣೆ ಪ್ರಸಿದ್ಧವಾಗಿದೆ. ಪ್ರೊ. ಶ್ರೀನಿವಾಸರಾವ್ ಅವರನ್ನು ಕುರಿತು ಜಿ.ಆರ್. ನಂದನ್ ಅವರು ಬರೆದಿರುವ ಲೇಖನದಲ್ಲಿ ಸ್ವತಂತ್ರ ಚಿಂತನೆಯ ಹೊಳಹುಗಳಿವೆ. ಭಾರತದಲ್ಲಿ Philosophy ಏಕೆ ಮೃತಪ್ರಾಯವಾಗಿದೆ ಎಂಬುದನ್ನು ಅವರು ಹೇಳುತ್ತಾರೆ–So philosophy became brain dead. ಮತ ಧರ್ಮಗಳ ಶೃಂಖಲೆ ಯಿಂದ ದಾರ್ಶನಿಕ ಚಿಂತನೆಯನ್ನು ಮುಕ್ತಗೊಳಿಸಬೇಕು (it needs her-culean efforts to purge philo-sopy of shakles or religion). ಈ ಲೇಖನದಲ್ಲಿರುವ ಧೀರೋಕ್ತಿಗಳು ಮುಕ್ತ ಚಿಂತನೆಗೆ ಅರ್ಹವಾಗಿವೆ ಎಂಬುದರಲ್ಲಿ ಸಂಶಯವಿಲ್ಲ.

ಕೊನೆಯ ಲೇಖನ 'ನಾ ಕಂಡಂತೆ ನನ್ನ ಗುರುಗಳು'. ಪ್ರೊ. ವಿ.ಎನ್. ಶೇಷಗಿರಿರಾವ್ ಅವರನ್ನು ಕುರಿತು ಪ್ರೊ. ಎಸ್. ವೆಂಕಟೇಶ್ ಬರೆದಿರುವ ಈ ಲೇಖನದಲ್ಲಿ ಶೇಷಗಿರಿರಾಯರ ಪಾಂಡಿತ್ಯ, ಬೋಧನ ಕೌಶಲ, ಶಿಷ್ಯ ಪ್ರೀತಿ ಮುಂತಾದುವನ್ನು ವಿವರಿಸಲಾಗಿದೆ. ಶೇಷಗಿರಿರಾಯರು ಶಂಕರಾಚಾರ್ಯರ ಶಾರೀರಕ ಭಾಷ್ಯಕ್ಕೆ ವಾಚಸ್ಪತಿ ಮಿಶ್ರರು ರಚಿಸಿದ 'ಭಾಮತೀ' ಎಂಬ ವ್ಯಾಖ್ಯಾನವನ್ನು ಕುರಿತು ಮಹಾಪ್ರಬಂಧವನ್ನು ಬರೆದಿದ್ದಾರೆ. ಈ ಗುರು ಶಿಷ್ಯರಿಬ್ಬರೂ ಪ್ರಸ್ತುತ ಗ್ರಂಥದ ಸಂಪಾದಕರಾಗಿರುವುದೊಂದು ವಿಶೇಷ.

ಆರಂಭದಲ್ಲಿ ಡಾ. ಎಸ್.ಎಲ್. ಭೈರಪ್ಪನವರ ಉದ್ಘಾಟನಾ ಭಾಷಣವೂ ಕೊನೆಯಲ್ಲಿ ಡಾ. ಬಿ. ಷೇಕ್ ಅಲಿಯವರ ಸಮಾರೋಪ ಭಾಷಣದ ವರದಿಯೂ ಇವೆ. ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ವಿಭಾಗವು ಹೇಗೆ ಅಂಕುರಿಸಿ ವಿಕಾಸವನ್ನು ಹೊಂದಿ ಬೆಳೆಯಿತೆಂಬುದರ ವಿಹಂಗಮ ನೋಟ ಈ ಗ್ರಂಥದಲ್ಲಿದೆ. ಇಲ್ಲಿದ್ದ ಘನವಿದ್ವಾಂಸರು, ಬಹುಶ್ರುತ ಪ್ರಾಧ್ಯಾಪಕರು ಮತ್ತು ಜಿಜ್ಞಾಸು ವಿದ್ಯಾರ್ಥಿಗಳ ಪರಿಚಯವೂ ಇಲ್ಲಿ ಲಭ್ಯ. ತತ್ತ್ವಶಾಸ್ತ್ರದ ಮೂಲಭೂತ ಪ್ರಶ್ನೆಗಳು ಹೇಗೆ ಜ್ಞಾನಾಭಿವೃದ್ಧಿಗೆ ಮತ್ತು ಜೀವನಸಮೃದ್ಧಿಗೆ ಕಾರಣವಾಗುತ್ತವೆ ಎಂಬ ಚಿಂತನೆಯನ್ನು ಇಲ್ಲಿರುವ ಕೆಲವು ಲೇಖನಗಳು ಪ್ರಚೋದಿಸುತ್ತವೆ. ಇಂತಹ ಉಪಯೋಗಾರ್ಹ ಗ್ರಂಥವನ್ನು ಕೊಟ್ಟಿರುವ ಸಂಪಾದಕರಿಗೂ ಎಲ್ಲ ಲೇಖಕರಿಗೂ ಅಭಿನಂದನೆಗಳು.

ಚುನಾವಣಾ ಪೂರ್ವ ಸಮೀಕ್ಷೆಯಲ್ಲಿ ಕಾಂಗ್ರೆಸ್‌ಗೆ ಮೇಲುಗೈ ಖಚಿತ

ಮೈಸೂರು,ಏ.18(ಎಂಟಿವೈ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಜಯದೇವ, ಜಿಲ್ಲಾಸ್ಪತ್ರೆ, ಟ್ರಾಮಕೇರ್ ಸೆಂಟರ್, ಮಹಾರಾಣಿ ಕಾಲೇಜು ಸೇರಿದಂತೆ ಅನೇಕ ಕೊಡುಗೆ ನೀಡಿದ್ದು, ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡರನ್ನು ಗೆಲ್ಲಿಸಿ ಮತ್ತಷ್ಟು ಅಭಿವೃದ್ಧಿ ಕಾಮಗಾರಿ ನಡೆಸಲು ಕ್ಷೇತ್ರದ ಜನತೆ ಸಹಕಾರ ನೀಡಬೇಕು ಎಂದು ಮುಡಾ ಮಾಜಿ ಅಧ್ಯಕ್ಷ ಡಿ.ಧ್ರುವ ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಚಾಮರಾಜ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಈ ಚುನಾವಣೆ ರಾಜ್ಯದ ಹಿತದೃಷ್ಟಿಯಿಂದ ಮಹತ್ತರ ಚುನಾವಣೆಯಾಗಿದೆ. ವಿವಿಧ ಸಂಸ್ಥೆಗಳು ನಡೆಸಿದ ಚುನಾವಣಾ ಪೂರ್ವ ಸಮೀಕ್ಷೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಖಚಿತವಾಗಿ. ಇದರೊಂದಿಗೆ ಮಾಜಿ ಸಿಎಂ ಜಗದೀಶ್ ಶೆಟ್ಟರ್, ಮಾಜಿ ಸಚಿವ ಲಕ್ಷ್ಮಣ್ ಸವದಿ ಸೇರಿದಂತೆ ಅನೇಕ ಬಿಜೆಪಿ ನಾಯಕರು ಕಾಂಗ್ರೆಸ್ ಸೇರುತ್ತಿದ್ದಾರೆ. ಇದರಿಂದ ಕಾಂಗ್ರೆಸ್ ಇನ್ನಷ್ಟು ಗಟ್ಟಿಯಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಜನರಿಗೆ ಏನೇನು ಅನುಕೂಲ ಮಾಡಿದ್ದಾರೆ. ಎಷ್ಟು ಜನಪ್ರಿಯ ಯೋಜನೆಯನ್ನು ಜಾರಿಗೊಳಿಸಿದ್ದಾರೆ ಎಂಬ ಮಾಹಿತಿಯನ್ನು ಮನೆ ಮನೆಗೆ ತಿಳಿಸಬೇಕು. ಸಿದ್ದರಾಮಯ್ಯ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಲಿದ್ದಾರೆ. ಈ ಹಿನ್ನೆಲೆಯಲ್ಲಿ ಚಾಮರಾಜ ಕ್ಷೇತ್ರದಲ್ಲಿ ಕೆ.ಹರೀಶ್‌ಗೌಡರನ್ನು ಗೆಲ್ಲಿಸಲು ಎಲ್ಲರೂ ಒಟ್ಟಾಗಿ ಶ್ರಮಿಸಬೇಕು. ನಾಮಪತ್ರ ಸಲ್ಲಿಕೆ ವೇಳೆ ಕೆ.ಹರೀಶ್‌ಗೌಡ ಗೆಲುವನ್ನು ಮುನ್ಸೂಚನೆಯಾಗಿ ತೋರಿಸುವ ಕೆಲಸ ಆಗಬೇಕು ಎಂದು ಸಲಹೆ ನೀಡಿದರು.

ಮಾಜಿ ಮೇಯರ್ ಅನಂತ್ ಮಾತನಾಡಿ, ಬಿಜೆಪಿ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತಿದೆ. ಜಾತಿ ಜಾತಿಗಳ ನಡುವೆ ಎತ್ತಿಕಟ್ಟಿ ಕೋಮು ಸೌಹಾರ್ದತೆ ಕದಡುತ್ತಿದೆ. ಈ ಮೂಲಕ ರಾಜಕೀಯ ಲಾಭ ಮಾಡಿಕೊಳ್ಳಲು ಬಿಜೆಪಿ ನಾಯಕರು ಸಂಚು ನಡೆಸುತ್ತಿದ್ದಾರೆ. ಸುಳ್ಳು ಹೇಳಿ ಜನರನ್ನು ವಂಚಿಸುತ್ತಿದ್ದಾರೆ. ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಿ, ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಬೇಕು ಎಂದು ಮನವಿ ಮಾಡಿದರು.

ಚಾಮರಾಜ ಕ್ಷೇತ್ರದ ಅಭ್ಯರ್ಥಿ ಕೆ.ಹರೀಶ್‌ಗೌಡ ಮಾತನಾಡಿ, ಬುಧವಾರ (ಏ.19) ಬೆಳಗ್ಗೆ ಕುಂಬಾರಕೊಪ್ಪಲಿನ ಮಹದೇಶ್ವರ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿ, ನಂತರ ಕೆ.ಜಿ.ಕೊಪ್ಪಲಿನ ಚಂದ್ರಮೌಳೇಶ್ವರ ದೇವಾಲಯ ಹಾಗೂ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸಿ, ಬೆಳಗ್ಗೆ 9.15ಕ್ಕೆ ಮೆರವಣಿಗೆ ಹೊರಟು ನಾಮಪತ್ರ ಸಲ್ಲಿಸುತ್ತೇನೆ ಎಂದರು.

ಕಾಂಗ್ರೆಸ್ ಸೇರ್ಪಡೆ: ಚಾಮರಾಜ ಕ್ಷೇತ್ರದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ತೊರೆದು ಹಲವರು ಕಾಂಗ್ರೆಸ್ ಸೇರಿದರು. ಮಾಜಿ ಉಪಮೇಯರ್ ಮಹದೇವಪ್ಪ, ಬಿಜೆಪಿ ಮುಖಂಡ ನಿತಿನ್ ಸೇರಿದಂತೆ ನೂರಾರು ಮಂದಿ ಕಾಂಗ್ರೆಸ್ ಸೇರಿ ಹರೀಶ್‌ಗೌಡರಿಗೆ ಬೆಂಬಲ ಸೂಚಿಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ಶಿವಮಾದು, ನಾಗಭೂಷಣ್, ಈಶ್ವರ ಚಕ್ಕಡಿ, ಮಾಜಿ ಉಪಮೇಯರ್ ಮಹದೇವಪ್ಪ, ಎಸ್ಸಿ ಘಟಕದ ಅಧ್ಯಕ್ಷ ರಮೇಶ್ ಇದ್ದರು.

ಜೆಡಿಎಸ್, ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ನೂರಾರು ಮಂದಿ



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಏಪ್ರಿಲ್ 19 ಬುಧವಾರ 2023

ಸಂಪುಟ: 44 | ಸಂಚಿಕೆ: 4 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ತಮ್ಮವರು, ತನ್ನ ಬೆಂಬಲಿಗರಿಗೆ ಟಿಕೆಟ್ ಕೊಡಿಸಲು ಸಂತೋಷ್ ಎಂತಹ ನಾಯಕರ ಬುಡವನ್ನೇ ಕತ್ತರಿಸಿ ಹಾಕ್ತಾರೆ...

● ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದ ಜಗದೀಶ್‌ಶೆಟ್ಟರ್ ವಾಗ್ದಾಳಿ ● ಚುನಾವಣೆ ನಂತರ ಪಕ್ಷ, ಸರ್ಕಾರವನ್ನು ಸಂಪೂರ್ಣ ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಸಂತೋಷ್ ಹುನ್ನಾರ

ಬೆಂಗಳೂರು, ಏ.18(ಕೆಎಂಶಿ)–ವಿಧಾನಸಭಾ ಚುನಾವಣೆ ಫಲಿತಾಂಶದ ನಂತರ ಪಕ್ಷ ಮತ್ತು ಸರ್ಕಾರವನ್ನು ಪೂರ್ಣವಾಗಿ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್, ಹಿರಿಯರನ್ನು ಮೂಲೆಗುಂಪು ಮಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಆರೋಪಿಸಿದ್ದಾರೆ.

ಬಿಜೆಪಿ ತೊರೆದ ನಂತರ ಇಂದು ತುರ್ತು ಪತ್ರಿಕಾಗೋಷ್ಠಿ ನಡೆಸಿ ಪ್ರಸಕ್ತ ಚುನಾವಣೆಯಲ್ಲಿ ತಮ್ಮ ಬೆಂಬಲಿಗರಿಗೆ ಹೆಚ್ಚಿನ ಟಿಕೆಟ್ ಕೊಡಿಸಲು ಪಕ್ಷ ಸಂಘಟನೆ ಮಾಡಿದವರನ್ನು ಕಸಕ್ಕಿಂತ ಕಡೆಯಾಗಿ ಕಂಡಿದ್ದಾರೆ ಎಂದು ಹರಿಹಾಯ್ದರು. ನನಗೆ, ರಾಮದಾಸ್ ಸೇರಿದಂತೆ ಹಲವು ನಿಷ್ಠಾವಂತರಿಗೆ ಟಿಕೆಟ್ ತಪ್ಪಲು ಸಂತೋಷ್ ಕಾರಣ.

ತಮ್ಮ ದೂರದೃಷ್ಟಿಯನ್ನು ಮುಂದಿಟ್ಟುಕೊಂಡು ರಾಜ್ಯ ಬಿಜೆಪಿಯ ಬುಡವನ್ನೇ ಅಲ್ಲಾಡಿಸುತ್ತಿದ್ದಾರೆ. ಇವರ ತಂತ್ರಗಾರಿಕೆಯ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ



ಜೆಪಿ ನಡ್ಡಾ ಗಮನಕ್ಕೂ ತಂದಿದ್ದೆ. ಆದರೆ ಅವರು ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಸಂತೋಷ್ ಮಾತಿಗೆ ಬೆಲೆ ಕೊಟ್ಟು ಉತ್ತರ ಕರ್ನಾಟಕದಲ್ಲಿದ್ದ ಬಲಿಷ್ಠ ಬಿಜೆಪಿ ನೆಲೆಯನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ದೂರಿದರು. ತಮ್ಮವರಿಗೆ, ತಮ್ಮ ಬೆಂಬಲಿಗರಿಗೆ ಟಿಕೆಟ್ ಕೊಡಿಸಬೇಕೆಂದು ನಿರ್ಧಾರ ಮಾಡಿದರೆ ಸಂತೋಷ್, ಎಂತಹ ನಾಯಕರ ಬುಡವನ್ನೇ ಕತ್ತರಿಸಿ ಹಾಕುತ್ತಾರೆ. ದೂರದೃಷ್ಟಿಯನ್ನಿಟ್ಟುಕೊಂಡು ಇಡೀ ಪಕ್ಷವನ್ನು ತಮ್ಮ ತೆಕ್ಕೆಗೆ ● 10ನೇ ಪುಟಕ್ಕೆ

> “ಯಾರು ಯಾರ ಟಿಕೆಟ್ ಅನ್ನು ತಪ್ಪಿಸಿಲ್ಲ, ತಪ್ಪಿಸಲು ಸಾಧ್ಯ ಕೂಡ ಇಲ್ಲ, ಟಿಕೆಟ್ ಹಂಚಿಕೆ ನಿರ್ಧಾರ ಹೈಕಮಾಂಡ್ ತೆಗೆದುಕೊಂಡಿತ್ತು. ಜಗದೀಶ್ ಶೆಟ್ಟರ್ ಕಾಂಗ್ರೆಸ್ ಸೇರ್ಪಡೆಯಿಂದ ಯಾವುದೇ ತೊಂದರೆ ಇಲ್ಲ. ಲಿಂಗಾಯತರಿಗೆ ಸಮರ್ಪಕವಾಗಿ ಮನ್ನಣೆ ನೀಡಿದ್ದೇ ಬಿಜೆಪಿ. ಕಾಂಗ್ರೆಸ್ ಲಿಂಗಾಯತ ಸಮುದಾಯವನ್ನು ಕಡೆಗಣಿಸುತ್ತಾ ಬಂದಿದೆ.
>
> –ಮುಖ್ಯಮಂತ್ರಿ ಬೊಮ್ಮಾಯಿ






ನಾವು ಮನೆ ಬಿಟ್ಹೋಗಕ್ಕಿಲ್ಲ...

ನಾನು ಕಾಂಗ್ರೆಸ್ ಬಿಡಲ್ಲ


ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಲ್ಲ: ಮಾಜಿ ಶಾಸಕ ವಾಸು



ಮೈಸೂರು,ಏ.18(ಪಿಎಂ)–ನಾನು ಎಂದೆಂದಿಗೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದವನು. ಪ್ರಸ್ತುತ ಚುನಾವಣೆಯಲ್ಲಿ ಯಾವುದೇ ಪಕ್ಷ ಅಥವಾ ಪಕ್ಷೇತರನಾಗಿ ಸ್ಪರ್ಧಿಸದೇ ಇರಲು ತೀರ್ಮಾನಿಸಿದ್ದೇನೆ. ಅಲ್ಲದೆ ಎಂದೆಂದಿಗೂ ಕಾಂಗ್ರೆಸ್ ಬಿಡದೇ ಇರಲು ನಿರ್ಧರಿಸಿದ್ದೇನೆ ಎಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ವಾಸು ತಿಳಿಸಿದ್ದಾರೆ. ಈ ಸಂಬಂಧ ಪತ್ರಿಕಾ ಪ್ರಕಟಣೆಯಲ್ಲಿ ವಾಸು ಸ್ಪಷ್ಟನೆ ನೀಡಿದ್ದಾರೆ. 2023ರ ಕರ್ನಾಟಕ ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಚಾಮರಾಜ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಕಾಂಗ್ರೆಸ್ ಪಕ್ಷದಲ್ಲಿ ನಾಲ್ಕು ದಶಕಗಳಿಗೂ ಅಧಿಕ ಕಾಲದಿಂದ ಮತ್ತು ಬದ್ಧತೆಯಿಂದ ಕೆಲಸ ಮಾಡುತ್ತಾ ಬಂದಿದ್ದೇನೆ. ಆದಾಗ್ಯೂ ನನಗೆ ಈ ಬಾರಿ ಟಿಕೆಟ್ ದೊರೆಯದಿರಲು ಏನು ಮತ್ತು ಯಾರು ಕಾರಣ ಎಂಬುದನ್ನು ಈಗಾಗಲೇ ನಾನು ಪತ್ರಿಕಾಗೋಷ್ಠಿಯಲ್ಲಿ ನೇರವಾಗಿ ಹೇಳಿದ್ದೇನೆ. ಅಲ್ಲಿ ನಾನು ಹೇಳಿದ ಮಾತುಗಳಿಗೆ ಈಗಲೂ ಬದ್ಧನಾಗಿದ್ದೇನೆ ಎಂದು ವಿವರಿಸಿದ್ದಾರೆ. ಪ್ರಸ್ತುತ ಚುನಾವಣೆಯ ಸಂದರ್ಭದಲ್ಲಿ ನನ್ನ ನಿಲುವೇನು, ಮುಂದಿನ ಆಲೋಚನೆಯೇನು ಎಂಬುದನ್ನು ಒಂದೆರಡು ದಿನಗಳಲ್ಲಿ ಪ್ರಕಟಿಸುತ್ತೇನೆ ಎಂದು ಇದೇ ಏ.16ರಂದು ಪತ್ರಿಕಾಗೋಷ್ಠಿಯಲ್ಲಿ ನಾನು ತಿಳಿಸಿದ್ದೆ. ಅದರಂತೆ ಈಗ ನನ್ನ ತೀರ್ಮಾನ ತಿಳಿಸುತ್ತಿರುವುದಾಗಿ ಪ್ರಕಟಣೆಯಲ್ಲಿ ವಾಸು ಹೇಳಿದ್ದಾರೆ.

ನಾನೂ ಬಿಜೆಪಿ ಬಿಡಲ್ಲ

ಸಾಮಾನ್ಯ ಕಾರ್ಯಕರ್ತನಾಗಿರುತ್ತೇನೆ: ಶಾಸಕ ರಾಮದಾಸ್



ಮೈಸೂರು, ಏ.18(ಎಂಕೆ)– ರಾಜ್ಯದಲ್ಲಿ ಮತ್ತೊಮ್ಮೆ ಡಬಲ್ ಇಂಜಿನ್ ಸರ್ಕಾರ ಬರುವುದು ಮುಖ್ಯ. ಜವಾಬ್ದಾರಿಯುತ ಜನಪ್ರತಿನಿಧಿಯಾಗಿ ದೇಶ ಕಟ್ಟುವ ಕೆಲಸಕ್ಕಾಗಿ ಕಡೆಯವರೆಗೂ ಬಿಜೆಪಿ ಸಾಮಾನ್ಯ ಕಾರ್ಯಕರ್ತನಾಗಿರುತ್ತೇನೆ. ನನಗೆ ಶಾಸಕ ಸ್ಥಾನ ಮುಖ್ಯವಲ್ಲ. ದೇಶ ಮುಖ್ಯ, ದೇಶವನ್ನು ಆಳುತ್ತಿರುವ ಪ್ರಧಾನ ಮಂತ್ರಿಗಳು ಮುಖ್ಯವಾಗಿರುವುದರಿಂದ ಈ ನಿರ್ಧಾರಕ್ಕೆ ಬಂದಿದ್ದೇನೆ ಎಂದು ಶಾಸಕ ಎಸ್.ಎ.ರಾಮದಾಸ್ ಹೇಳಿದರು.

ವಿದ್ಯಾರಣ್ಯಪುರಂನಲ್ಲಿರುವ ತಮ್ಮ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, 30 ವರ್ಷಗಳ ಕಾಲ ಶಾಸಕನಾಗಿ, ಮಂತ್ರಿಯಾಗಿ ಸಮಾಜದಲ್ಲಿ ಕೆಲಸ ಮಾಡಿದ್ದು, ಇಂತಹ ಕಠಿಣ ಪರಿಸ್ಥಿತಿ ಬಂದಾಗ ಹೇಗೆ ನಡೆದುಕೊಳ್ಳುತ್ತೇವೆ ಎಂಬುದು ಮುಖ್ಯವಾಗುತ್ತದೆ. ಇದರಲ್ಲಿ ನನ್ನ ವೈಯಕ್ತಿಕ ಜೀವನದ ವಿಚಾರವೂ ಇರಲಿದೆ. ಆದರೆ ಆರ್‌ಎಸ್‌ಎಸ್ ಸದಸ್ಯನಾಗಿ ವೈಯಕ್ತಿಕ ವಿಚಾರಕ್ಕಿಂತ ಪಕ್ಷ ಮುಖ್ಯ ಎಂಬ ಚಿಂತನೆಯೊಂದಿಗೆ ರಾಷ್ಟ್ರವೇ ಮುಖ್ಯವೆಂದು ಬಿಜೆಪಿ ಅಭ್ಯರ್ಥಿ ಗೆಲುವಿಗಾಗಿ ಶ್ರಮಿಸುತ್ತೇನೆ. ಏ.20ರ ನಾಮಪತ್ರ ಸಲ್ಲಿಕೆಯಲ್ಲಿ ಅಭ್ಯರ್ಥಿ ಜೊತೆ ಇರುವುದಲ್ಲದೆ, ಏ.22 ರಿಂದ ಮನೆ ಮನೆಗೆ ತೆರಳಿ ಮತಯಾಚನೆ ಮಾಡಲಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಕ್ಷೇತ್ರದ 70 ಸಾವಿರ ಮನೆಗಳಿಗೆ ತಲುಪಿಸಿದ ತೃಪ್ತಿ ನನಗಿದೆ. ಮಂತ್ರಿ ಸ್ಥಾನ ● 10ನೇ ಪುಟಕ್ಕೆ

ಮಂಡ್ಯದಲ್ಲಿ ನಾನು ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ



ಬೆಂಗಳೂರು, ಏ.18(ಕೆಎಂಶಿ)– ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುವ ಮಾತೇ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ಬಿಟ್ಟು ಬೇರೆಲ್ಲೂ ನಾನು ಸ್ಪರ್ಧೆ ಮಾಡಲ್ಲ. ಮಂಡ್ಯದಲ್ಲಿ ಈಗಾಗಲೇ ● 10ನೇ ಪುಟಕ್ಕೆ



ಪುಟ್ಟರಾಜು, ಅನ್ನದಾನಿ, ರವೀಂದ್ರ, ಮಂಜು, ಸುಧಾ ಸೇರಿ ಹಲವರ ನಾಮಪತ್ರ ಸಲ್ಲಿಕೆ






ಮಳವಳ್ಳಿಯಲ್ಲಿ ಶಾಸಕ ಕೆ. ಅನ್ನದಾನಿ, ಶ್ರೀರಂಗಪಟ್ಟಣದಲ್ಲಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಕೆ.ಆರ್.ಪೇಟೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ. ಮಂಜು, ನಾಗಮಂಗಲದಲ್ಲಿ ಬಿಜೆಪಿ ಅಭ್ಯರ್ಥಿ ಸುಧಾ ಶಿವರಾಮೇಗೌಡ ಮಂಗಳವಾರ ಅಪಾರ ಬೆಂಬಲಿಗರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ಮಂಡ್ಯ, ಏ.18– ಮಂಡ್ಯ ಜಿಲ್ಲೆಯಲ್ಲಿ ಸಾರ್ವತ್ರಿಕ ವಿಧಾನಸಭಾ ಚುನಾವಣಾ ಅಖಾಡ ದಿನೇ ದಿನೇ ರಂಗು ಪಡೆಯುತ್ತಿದ್ದು, ಮಂಗಳವಾರ ಸಹ ಘಟಾನುಘಟಿಗಳ ಉಮೇದುವಾರಿಕೆ ಸಲ್ಲಿಕೆಗೆ ಸಕ್ಕರೆ ನಾಡು ಮಂಡ್ಯ ಸಾಕ್ಷಿಯಾಯಿತು.

ಸಿ.ಎಸ್.ಪುಟ್ಟರಾಜು: ಮೇಲುಕೋಟೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಸಿ.ಎಸ್.ಪುಟ್ಟರಾಜು ಸಹಸ್ರಾರು ಕಾರ್ಯಕರ್ತರು, ಮುಖಂಡರ ಬೆಂಬಲದೊಂದಿಗೆ ಮಂಗಳವಾರ ನಾಮಪತ್ರ ಸಲ್ಲಿಸಿದರು.

ಪಟ್ಟಣದ ಮಹಾಕಾಳೇಶ್ವರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಅಲ್ಲಿಂದ ಮೆರವಣಿಗೆ ಮೂಲಕ ಸಾವಿರಾರು ಕಾರ್ಯಕರ್ತರೊಂದಿಗೆ ಪೊಲೀಸ್ ಸ್ಟೇಷನ್, ಚರ್ಚ್ ರಸ್ತೆ ಮಾರ್ಗವಾಗಿ ಮಂಡ್ಯ ಸರ್ಕಲ್, ಐದು ದೀಪದ ವೃತ್ತದ ಮಾರ್ಗವಾಗಿ ಮಿನಿ ವಿಧಾನಸೌಧಕ್ಕೆ ಆಗಮಿಸಿದರು. ಮೆರವಣಿಗೆಯುದ್ದಕ್ಕೂ ಪೂರ್ಣಕುಂಭದೊಂದಿಗೆ ನೂರಾರು ಮಹಿಳೆಯರು, ವಿವಿಧ ಕಲಾತಂಡಗಳು, ಮಂಗಳವಾದ್ಯ, ಎತ್ತಿನಗಾಡಿ, ಟಗರುಗಳು ಭಾಗವಹಿಸಿದ್ದವು. ಮೆರವಣಿಗೆಯಲ್ಲಿ ಆಗಮಿಸಿದ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ ಮಂಡ್ಯ ಸರ್ಕಲ್‌ನಲ್ಲಿ ಬೃಹತ್ ಸೇಬಿನ ಹಾರ, ಕೊಬ್ಬರಿ ಹಾರ ಹಾಕಿ ಹೂ ಮಳೆ ಸುರಿಸಿದರು. ಮೆರವಣಿಗೆಯಲ್ಲಿ 50 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸುಮಾರು 1.30ರ ಸುಮಾರಿಗೆ ಮಿನಿ ವಿಧಾನಸೌಧಕ್ಕೆ ಆಗಮಿಸಿದ ಜೆಡಿಎಸ್ ಅಭ್ಯರ್ಥಿ ಶಾಸಕ ಸಿ.ಎಸ್.ಪುಟ್ಟರಾಜು ಪತ್ನಿ ನಾಗಮ್ಮ, ಪುತ್ರ ಸಿ.ಪಿ.ಶಿವರಾಜು, ತಾಲೂಕು ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ವಕೀಲ ಕೆ.ಪುಟ್ಟೇಗೌಡ ಅವರೊಟ್ಟಿಗೆ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು.

ಡಾ.ಕೆ.ಅನ್ನದಾನಿ: ಮಳವಳ್ಳಿ ಕ್ಷೇತ್ರದ ಶಾಸಕ ಹಾಗೂ ಜೆಡಿಎಸ್ ಅಭ್ಯರ್ಥಿ ಡಾ.ಕೆ ಅನ್ನದಾನಿ ಪತ್ನಿ, ಮದ್ದೂರು ಶಾಸಕ ಡಿ.ಸಿ. ತಮ್ಮಣ್ಣ ಹಾಗೂ ಜೆಡಿಎಸ್ ಮುಖಂಡರ ಜೊತೆಗೂಡಿ ಪಟ್ಟಣದ ತಾಲೂಕು ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸುವ ಮುನ್ನ ಪಟ್ಟಣದ ಮಾರೇಹಳ್ಳಿ ನರಸಿಂಹಸ್ವಾಮಿ, ಗಂಗಾಧರೇಶ್ವರ ದೇವಸ್ಥಾನ ಹಾಗೂ ಮಸೀದಿಗೆ ಪತ್ನಿಯೊಂದಿಗೆ ತೆರಳಿ ಪೂಜೆ ಸಲ್ಲಿಸಿದರು. ಪಟ್ಟಣದ ಗಂಗಾಧರೇಶ್ವರ ದೇವಸ್ಥಾನದಿಂದ ಸಾವಿರಾರು ಜೆಡಿಎಸ್ ಬೆಂಬಲಿಗರೊಂದಿಗೆ ಶಾಸಕ ಡಾ.ಕೆ.ಅನ್ನದಾನಿ ಅಲಂಕೃತಗೊಂಡ ಎತ್ತಿನಗಾಡಿ ಏರಿ ಮೆರವಣಿಗೆಯಲ್ಲಿ ಸಾಗಿದರು. ಮೆರವಣಿಗೆ ಅನಂತ ರಾಂ ವೃತ್ತಕ್ಕೆ ಬರುತ್ತಿದ್ದಂತೆ ಕಾರ್ಯಕರ್ತರು ಪಟಾಕಿ ಸಿಡಿಸಿ ಘೋಷಣೆ ಕೂಗಿ ಸಂಭ್ರಮಿಸಿದರು. ಪತ್ನಿ ರುಕ್ಮಿಣಿ, ಜೆಡಿಎಸ್ ಯುವಘಟಕ ಜಿಲ್ಲಾಧ್ಯಕ್ಷ ರವಿ ಕಂಸಾಗರ, ತಾಲೂಕು ಅಧ್ಯಕ್ಷ ವಿಶ್ವನಾಥ್, ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ಜಯರಾಮು ಜೊತೆ ತಾಲೂಕು ಕಚೇರಿಗೆ ತೆರಳಿ ಚುನಾವಣಾ ಅಧಿಕಾರಿ ಮಲ್ಲಿಕಾರ್ಜುನ್ ಅವರಿಗೆ ನಾಮಪತ್ರ ಸಲ್ಲಿಸಿದರು.



ಪಾಂಡವಪುರದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಕುಟುಂಬ ಸದಸ್ಯರೊಂದಿಗೆ ನಾಮಪತ್ರ ಸಲ್ಲಿಸಿದರು.

ಬಳಿಕ ಮಾತನಾಡಿದ ಡಾ.ಕೆ.ಅನ್ನದಾನಿ, ಮಳವಳ್ಳಿ ತಾಲೂಕನ್ನು ಸಮಗ್ರ ನೀರಾವರಿ ಪ್ರದೇಶ ಮಾಡಬೇಕಾಗಿರುವುದರಿಂದ ಮತ್ತೊಂದು ಬಾರಿ ಮತದಾರರು ಕೈ ಹಿಡಿಯುತ್ತಾರೆಂಬ ನಂಬಿಕೆ ಇದೆ. ನನ್ನ ಅಧಿಕಾರವಧಿಯಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿ ಮತದಾರರ ಋಣ ತೀರಿಸುವ ಕೆಲಸ ಮಾಡಿದ್ದೇನೆ. ಹಲವು ಅಭಿವೃದ್ಧಿ ಕಾರ್ಯಗಳನ್ನು ಮುಂದುವರೆಸಬೇಕಾಗಿರುವುದರಿಂದ ತನಗೆ ಮತ್ತೊಂದು ಬಾರಿ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು.

ರವೀಂದ್ರ ಶ್ರೀಕಂಠಯ್ಯ: ಶ್ರೀರಂಗಪಟ್ಟಣ ಕ್ಷೇತ್ರದ ಅಭ್ಯರ್ಥಿ ಹಾಗೂ ಶಾಸಕ ರವೀಂದ್ರ ಶ್ರೀಕಂಠಯ್ಯ ಅಪಾರ ಜನ ಸಾಗರದೊಂದಿಗೆ ಉಮೇದುವಾರಿಕೆ ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ, ಪತ್ನಿ ಗೀತಾ ರವೀಂದ್ರ, ಜಿಪಂ ಮಾಜಿ ಸದಸ್ಯ ಮರೀಗೌಡ ಹಾಗೂ ವಕೀಲ ಬಾಲರಾಜ್ ಸಮ್ಮುಖದಲ್ಲಿ ರವೀಂದ್ರ ಶ್ರೀಕಂಠಯ್ಯ ತಾಲೂಕು ಕಚೇರಿಗೆ ತೆರಳಿ ಚುನಾವಣಾಧಿಕಾರಿ ಎಂ.ಬಾಬು ರವರಿಗೆ ನಾಮಪತ್ರ ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಜೆಡಿಎಸ್ ಜನರ ಪಕ್ಷ. ಜಿಲ್ಲೆಯ ಜನ ಜನತಾದಳ ಪಕ್ಷವನ್ನು ಕಟ್ಟಿ ಬೆಳೆಸಿದ್ದಾರೆ. ಬಡವರ ಕಷ್ಟ ಸುಖಗಳಿಗೆ ಸ್ಪಂದಿಸಿ, ಅವರ ಬದುಕಿಗಾಗಿ ಈ ಪಕ್ಷ ಮುನ್ನಡೆಸಿಕೊಂಡು ಬಂದಿದ್ದೇನೆ. ಈ ಪಕ್ಷವನ್ನು ಯಾರಿಂದಲೂ ಧೂಳೀಪಟ ಮಾಡಲು ಸಾಧ್ಯವಿಲ್ಲ. ಇತ್ತೀಚೆಗೆ ಸಂಸದೆ ಸುಮಲತಾ ಅವರು ಜಿಲ್ಲೆಯಲ್ಲಿ ಜೆಡಿಎಸ್ ಭದ್ರಕೋಟೆಯನ್ನು ಛಿದ್ರಗೊಳಿಸಿ, ಧೂಳೀಪಟ ಮಾಡುವುದಾಗಿ ಹೇಳಿದ್ದ ಹೇಳಿಕೆಗೆ ಕಿಡಿಕಾರಿದರು.

ಹೆಚ್.ಟಿ.ಮಂಜು: ಕೆ.ಆರ್.ಪೇಟೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಹೆಚ್.ಟಿ.ಮಂಜು ಮಂಗಳವಾರ ಪಟ್ಟಣದ ಮಿನಿ ವಿಧಾನಸೌಧದ ಚುನಾವಣಾಧಿಕಾರಿಗಳ ಕಚೇರಿಗೆ ಆಗಮಿಸಿ ತಮ್ಮ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆ ವೇಳೆ ಪತ್ನಿ ರಮಾಮಂಜು, ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಚೋಳೇನಹಳ್ಳಿ ಪುಟ್ಟಸ್ವಾಮಿಗೌಡ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್ ಜೊತೆಗೂಡಿ ಚುನಾವಣಾಧಿಕಾರಿಗಳ ಕಚೇರಿಗೆ ಆಗಮಿಸಿದ ಅವರು ಚುನಾವಣಾಧಿಕಾರಿ ಕೃಷ್ಣಕುಮಾರ್ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು. ಸಹಾಯಕ ಚುನಾವಣಾಧಿಕಾರಿ ನಿಸರ್ಗಪ್ರಿಯ ಹಾಜರಿದ್ದರು.

ಈ ವೇಳೆ ಮಾತನಾಡಿದ ಮಂಜು, ತಾಲೂಕಿನಲ್ಲಿ ಮತದಾರರನ್ನು ಖರೀದಿಸಲು 50–100 ಕೋಟಿ ಖರ್ಚು ಮಾಡಿದರೂ ಇಲ್ಲಿನ ಪ್ರಾಮಾಣಿಕ ಮತದಾರರು ಬಗ್ಗುವುದಿಲ್ಲ ಎಂಬ ಉತ್ತಮ ಸಂದೇಶ ನೀಡಿರುವ ನಿಮಗೆ ನಾನು ಸದಾ ಆಭಾರಿಯಾಗಿರುತ್ತೇನೆ ಎಂದರು.

ಸುಧಾ ಶಿವರಾಮೇಗೌಡ: ನಾಗಮಂಗಲ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸುಧಾಶಿವರಾಮೇಗೌಡ ಇಂದು ಉಮೇದುವಾರಿಕೆ ಸಲ್ಲಿಸಿದರು. ನಾಗಮಂಗಲ ಪಟ್ಟಣದ ಸೌಮ್ಯ ಕೇಶವ ದೇಗುಲದಿಂದ 6 ಸಾವಿರಕ್ಕೂ ಹೆಚ್ಚು ಮಹಿಳೆಯರೊಂದಿಗೆ ಮೆರವಣಿಗೆ ಹೊರಟು, ಪಟ್ಟಣದ ಮಿನಿ ವಿಧಾನಸೌಧದಲ್ಲಿ ತಮ್ಮ ಉಮೇದುವಾರಿಕೆ ಸಲ್ಲಿಸಿದರು. ಸುಧಾಗೆ ಸಂಸದೆ ಸುಮಲತಾ ಅಂಬರೀಷ್, ಮಾಜಿ ಸಂಸದ ಹಾಗೂ ಸುಧಾರವರ ಪತಿ ಶಿವರಾಮೇಗೌಡ ಸಾಥ್ ನೀಡಿದರು.

ಇದೇ ಸಂದರ್ಭ ಮಾತನಾಡಿದ ಸುಮಲತಾ, ಸುಧಾ ಶಿವರಾಮೇಗೌಡ ಅವರನ್ನು ಇಲ್ಲಿ ಬಂದಿರುವ ಮಹಿಳೆಯರು ಒಗ್ಗಟ್ಟಾಗಿ ಅವರನ್ನು ಗೆಲ್ಲಿಸುವ ಮೂಲಕ ರಾಜ್ಯಕ್ಕೆ ಮಹಿಳೆಯರ ಶಕ್ತಿ ಏನೆಂಬುದನ್ನು ತೋರಿಸಬೇಕೆಂದು ಕರೆ ನೀಡಿದರು. ಅಲ್ಲದೇ ಅನೇಕ ಪಕ್ಷೇತರ ಅಭ್ಯರ್ಥಿಗಳು ಸಹ ನಾಮಪತ್ರ ಸಲ್ಲಿಸಿದ್ದು, ಬಿಜೆಪಿಗೆ ಹೋಗಿ ಟಿಕೆಟ್ ಸಿಗದೇ ಬೇಸರಗೊಂಡಿದ್ದ ಉದ್ಯಮಿ ಫೈಟರ್ ರವಿ ಸಹ ನಾಗಮಂಗಲ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಕೆ ಮಾಡಿದರು.



ವಿರಾಜಪೇಟೆ ವಿಧಾನಸಭಾ ಕ್ಷೇತ್ರ

ಕಾಂಗ್ರೆಸ್ ಅಭ್ಯರ್ಥಿ ಪೊನ್ನಣ್ಣ ನಾಮಪತ್ರ ಸಲ್ಲಿಕೆ

ವಿರಾಜಪೇಟೆ, ಏ.18– ವಿರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಎ.ಎಸ್.ಪೊನ್ನಣ್ಣ ಮಂಗಳವಾರ ತಾಲೂಕು ಕಚೇರಿಯಲ್ಲಿ ಚುನಾವಣಾಧಿಕಾರಿ ಶಬಾನಾ ಎಂ. ಶೇಖ್ ಅವರಿಗೆ ನಾಮಪತ್ರ ಸಲ್ಲಿಸಿದರು.

ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಎ.ಎಸ್.ಪೊನ್ನಣ್ಣ ಅವರು, ಇಲ್ಲಿನ ಜನರು ಅಭಿವೃದ್ಧಿ ಕಾಣದೆ ನಿರಾಶರಾಗಿದ್ದಾರೆ. ರಾಜ್ಯ ಸರ್ಕಾರ ಜನರ ಹಿತವನ್ನು ಮರೆತು ಭ್ರಷ್ಟಾಚಾರದಲ್ಲಿ ತೊಡಗಿದ್ದು ಜನರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿರುವುದರಿಂದ ಜನರು ಬದಲಾವಣೆ ಬಯಸಿದ್ದಾರೆ. ವಿರಾಜಪೇಟೆ ಕ್ಷೇತ್ರದಲ್ಲಿ ಮತದಾರರು ಕಾಂಗ್ರೆಸ್ ಪಕ್ಷದತ್ತ ಒಲವು ತೋರಿದ್ದಾರೆ. ಇಲ್ಲಿನ ಜನರು ಅಭಿವೃದ್ಧಿ ಹಾಗೂ ಬದಲಾವಣೆಯ ಉತ್ತಮ ಆಡಳಿತವನ್ನು ಬಯಸುತ್ತಿದ್ದಾರೆ ಎಂದರು.

ಈ ಕ್ಷೇತ್ರದವನಲ್ಲ ಎಂಬ ಆರೋಪದ ಕುರಿತು ಮಾತನಾಡಿ, ನಾನು ಬೆಳ್ಳೂರು ಬೂತ್ ಮತದಾರನಾಗಿದ್ದು, ವಿರಾಜಪೇಟೆಯ ಪಂಜರುಪೇಟೆಯಲ್ಲಿ ವಾಸವಾಗಿರುವೆ. ಇಲ್ಲಿ ಅಜ್ಜನ ತಂದೆಯ ಕಾಲದಿಂದಲೂ ಸ್ವತ್ತುಗಳಿವೆ. ಕೆಲ ವ್ಯಕ್ತಿಗಳ ಸೋಲಿನ ಭೀತಿಯಿಂದ ನನ್ನ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ ಎಂದರಲ್ಲದೆ ಏನೇ ಇದ್ದರು ವಿರಾಜಪೇಟೆ ಕ್ಷೇತ್ರದಿಂದ ತನ್ನ ಗೆಲವು ನಿಶ್ಚಿತ ಎಂದರು.



ನಾಮಪತ್ರ ಸಲ್ಲಿಸುವ ಸಂದರ್ಭ ಮಾಜಿ ವಿಧಾನಸಭಾ ಸದಸ್ಯ ಸಿ.ಎಸ್. ಅರುಣ್ ಮಾಚಯ್ಯ, ವೀಣಾ ಅಚ್ಚಯ್ಯ, ಕಾಂಚನ ಪೊನ್ನಣ್ಣ, ರಾಜ್ಯ ಕಾಂಗ್ರೆಸ್ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ, ಪಿ.ರಂಜಿ ಪೂಣಚ್ಚ, ಮಾದಂಡ ತಿಮ್ಮಯ್ಯ ಮುಂತಾದವರು ಉಪಸ್ಥಿತರಿದ್ದರು.

ಮೊದಲಿಗೆ ನಗರದ ಶ್ರೀ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಬಳಿಕ ತೆಲುಗರ ಬೀದಿಯ ಮಾರಿಗುಡಿಯಲ್ಲಿಯೂ ಪೂಜೆ ಸಲ್ಲಿಸಿದ ನಂತರ ಪಂಜರುಪೇಟೆಯಿಂದ ತಾಲೂಕು ಕಚೇರಿವರೆಗೆ ಕಾಂಗ್ರೆಸ್ ಕಾರ್ಯಕರ್ತರು ಪ್ರಮುಖರು ಜೊತೆಗೂಡಿ ಮುಖ್ಯಬೀದಿಯಲ್ಲಿ ಮೆರವಣಿಗೆಯಲ್ಲಿ ಬಂದು ನಾಮಪತ್ರ ಸಲ್ಲಿಸಿದರು.

ಡಿಸಿ, ಚುನಾವಣಾಧಿಕಾರಿಗಳ ಆದೇಶವಿಲ್ಲದೆ ಜಮ್ಮಾ ಹಿಡುವಳಿದಾರರ ಕೋವಿಗಳು ವಶಕ್ಕೆ

ಜಿಲ್ಲಾ ಬಿಜೆಪಿ ವಕ್ತಾರ ಮಹೇಶ್‌ಜೈನಿ ಆಕ್ರೋಶ



ಮಡಿಕೇರಿ, ಏ.18– ಜಿಲ್ಲಾಧಿಕಾರಿಗಳು ಹಾಗೂ ಚುನಾವಣಾಧಿಕಾರಿಗಳ ಆದೇಶವಿಲ್ಲದೆ ಪೊಲೀಸರು ಜಮ್ಮಾ ಹಿಡುವಳಿದಾರರ ಕೋವಿಗಳನ್ನು ವಶಕ್ಕೆ ಪಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿರುವ ಜಿಲ್ಲಾ ಬಿಜೆಪಿ ವಕ್ತಾರ ಮಹೇಶ್ ಜೈನಿ, ತಕ್ಷಣ ಈ ಪ್ರಕ್ರಿಯೆಯನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರತಿ ಚುನಾವಣೆಯ ಸಂದರ್ಭ ಜಿಲ್ಲಾಧಿಕಾರಿಗಳು ಹಾಗೂ ಚುನಾವಣಾಧಿಕಾರಿಗಳ ಆದೇಶದಂತೆ ಲೈಸನ್ಸ್ ಪಡೆದು ಬಳಸುತ್ತಿರುವವರ ಕೋವಿಯನ್ನು ಪೊಲೀಸ್ ಇಲಾಖೆ ಠೇವಣಿ ಇಟ್ಟುಕೊಳ್ಳುವುದು ಸಾಮಾನ್ಯ. ಈ ಕ್ರಮಕ್ಕೆ ಕೊಡಗಿನ ಜನ ಕೂಡ ಸಹಕಾರ ನೀಡುತ್ತಾ ಬಂದಿದ್ದಾರೆ. ಜಮ್ಮಾ ಹಿಡುವಳಿದಾರರ ಕೋವಿಗಳಿಗೆ ಪ್ರತಿ ಚುನಾವಣೆ ಸಂದರ್ಭದಲ್ಲೂ ವಿನಾಯಿತಿ ನೀಡಲಾಗಿದೆ. ಆದರೆ 2023ರ ಚುನಾವಣೆಯಲ್ಲಿ ಯಾವುದೇ ಆದೇಶ ಮತ್ತು ಮುನ್ಸೂಚನೆ ಇಲ್ಲದೆ ಜಮ್ಮಾ ಹಿಡುವಳಿದಾರರ ಮನೆಗಳಿಗೆ ಪೊಲೀಸರು ತೆರಳಿ ಕೋವಿ ನೀಡುವಂತೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಪೊಲೀಸ್ ಇಲಾಖೆಯ ಈ ಕ್ರಮದಿಂದ ಕೊಡಗಿನಲ್ಲಿ ಅಸಮಾಧಾನ ವ್ಯಕ್ತವಾಗುತ್ತಿದೆ. ಈ ಹಿಂದಿನ ಯಾವುದೇ ಚುನಾವಣೆಗಳಲ್ಲಿ ಜಿಲ್ಲೆಯಲ್ಲಿ ಕೋವಿಯಿಂದ ರಾಜಕೀಯ ಘರ್ಷಣೆಯಾದ ಉದಾಹರಣೆಗಳಿಲ್ಲ. ಆದರೂ ಈ ಚುನಾವಣೆಯಲ್ಲಿ ಜಮ್ಮಾ ಹಿಡುವಳಿದಾರರಿಗೆ ವಿನಾಕಾರಣ ಕಿರುಕುಳ ನೀಡಲಾಗುತ್ತಿದೆ. ಜಮ್ಮಾ ಹಿಡುವಳಿದಾರರ ಪರವಾಗಿ ಕೊಡಗು ಜಿಲ್ಲಾ ಬಿಜೆಪಿ ರಾಜ್ಯದ ಗೃಹಮಂತ್ರಿ ಹಾಗೂ ಚುನಾವಣಾ ಆಯೋಗಕ್ಕೂ ದೂರು ನೀಡಲಾಗುವುದು ಎಂದು ಮಹೇಶ್ ಜೈನಿ ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕೆಂದು ಒತ್ತಾಯಿಸಿದ್ದಾರೆ.

ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ರಾಜಾರಾವ್ ನಿಧನ




ಕುಶಾಲನಗರ, ಏ.18– ಸಮೀಪದ ಕೂಡಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೆಗ್ಗಡಹಳ್ಳಿ ಗ್ರಾಮದ ನಿವಾಸಿ, ಕೊಡಗು ಜಿಲ್ಲಾ ಪಂಚಾಯಿತಿಯ ಮಾಜಿ ಅಧ್ಯಕ್ಷ ಎಸ್.ಎನ್.ರಾಜಾರಾವ್ (68) ನಿಧನರಾಗಿದ್ದಾರೆ.

ಅನಾರೋಗ್ಯದಿಂದಾಗಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರಾಜಾರಾವ್ ಸೋಮವಾರ ರಾತ್ರಿ ಹೃದಯಾಘಾತದಿಂದಾಗಿ ಮೃತಪಟ್ಟಿದ್ದಾರೆ.

ಮೃತರ ಅಂತ್ಯಕ್ರಿಯೆ ಮಂಗಳವಾರ ಸೀಗೆಹೊಸೂರಿನ ಅವರ ತೋಟದಲ್ಲಿ ನೆರವೇರಿತು. ಮೃತರು ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಕೂಡಿಗೆ ಮಂಡಲ ಪ್ರಧಾನಾಗಿ ರಾಜಕಾರಣ ಆರಂಭಿಸಿದ ರಾಜಾರಾವ್ ಕ್ರಮೇಣ ಕೂಡಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ, ಕೊಡಗು ಜಿಲ್ಲಾ ಪಂಚಾಯಿತಿ ಸದಸ್ಯರು, ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷರೂ ಹಾಗೂ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಸಾಮಾಜಿಕ ಹಾಗೂ ರಾಜಕೀಯ ರಂಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅಲ್ಲದೇ ಬಸವನಹಳ್ಳಿಯ ವಿವಿಧೋದ್ದೇಶ ಗಿರಿಜನ ಸಹಕಾರ ಸಂಘದ ಅಧ್ಯಕ್ಷರಾಗಿ ಕೂಡಿಗೆಯ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಹಾಗೂ ವಿರಾಜಪೇಟೆ ತಾಲೂಕಿನ ಅಕ್ರಮ ಸಕ್ರಮ ಸಮಿತಿ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಹೊನಲು–ಬೆಳಕಿನ ಮುಕ್ತ ವಾಲಿಬಾಲ್ ಪಂದ್ಯಾವಳಿ



ಗೋಣಿಕೊಪ್ಪ, ಏ.18– ನಿಟ್ಟೂರು ಗ್ರಾಮದ ಲಕ್ಷ್ಮಣತೀರ್ಥ ಸಂಘದ ವತಿಯಿಂದ ಬಾಳೆಲೆ ವಿಜಯಲಕ್ಷ್ಮಿ ಜೂನಿಯರ್ ಕಾಲೇಜು ಮೈದಾನಲ್ಲಿ ಮೇ 21ರಿಂದ ಮೇ 23ರವರೆಗೆ ಹೊನಲು ಬೆಳಕಿನ ಮುಕ್ತ ವಾಲಿಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ.

ಪ್ರಥಮ ಬಹುಮಾನ 1 ಲಕ್ಷ, ದ್ವಿತೀಯ ಬಹುಮಾನ 50 ಸಾವಿರ ನಗದು ನೀಡಲಾಗುವುದು. ಆಸಕ್ತ ತಂಡಗಳು 9480731797, 9632085536 ಸಂಖ್ಯೆಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ನಾಳೆ ಕಾಫಿ ಬೆಳೆಯ ರಕ್ಷಣೆ, ಪೋಷಣೆ ಕುರಿತು ಸಲಹೆ

ಮಡಿಕೇರಿ, ಏ.18– ಮಡಿಕೇರಿ ಆಕಾಶವಾಣಿಯಿಂದ ಏ.20 ರಂದು ಸಂಜೆ 6.50 ಕ್ಕೆ ಪ್ರಸ್ತುತ ಧಗೆಯ ಪರಿಸ್ಥಿತಿಯಲ್ಲಿ ಕಾಫಿ ಬೆಳೆಯ ರಕ್ಷಣೆ ಮತ್ತು ಪೋಷಣೆ ಕುರಿತು ಬಾಳೆಹೊನ್ನೂರಿನ ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆಯ ವಿಜ್ಞಾನಿ ಎಸ್.ಎಲ್.ಪಾಟೀಲ್ ಅವರ ವಿವರವಾದ ಸಲಹೆಗಳ ಕಾರ್ಯಕ್ರಮವು ಪ್ರಸಾರವಾಗಲಿದೆ.

ಉಪಯುಕ್ತ ವಿಚಾರಗಳಿವೆ. ಕಾಫಿ ಬೆಳೆಗಾರರು ತಪ್ಪದೇ ಆಲಿಸಿ, ಹಾಗೆಯೇ ಇತರರಿಗೂ ತಿಳಿಸಿ ರೇಡಿಯೊ ಮೂಲಕ ಇಲ್ಲವೇ newsonairapp ಸಹಾಯದಿಂದ ಕಾರ್ಯಕ್ರಮ ಕೇಳಬಹುದು ಎಂದು ಮಡಿಕೇರಿ ಆಕಾಶವಾಣಿ ನಿಲಯದ ಕಾರ್ಯಕ್ರಮ ನಿರ್ವಾಹಕರಾದ ವಿಜಯ ಅಂಗಡಿ ಅವರು ತಿಳಿಸಿದ್ದಾರೆ.

ವಿರಾಜಪೇಟೆಯಿಂದ ಎಎಪಿ ಅಭ್ಯರ್ಥಿ ಸ್ಪರ್ಧೆ



ಮಡಿಕೇರಿ, ಏ.18– ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಆಮ್ ಆದ್ಮಿ ಪಾರ್ಟಿಯ ಅಭ್ಯರ್ಥಿಯಾಗಿ ಪೊನ್ನಂಪೇಟೆಯ ಸಿ.ಎಸ್. ರವೀಂದ್ರ ಕಣಕ್ಕಿಳಿಯಲಿದ್ದಾರೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಭೋಜಣ್ಣ ಸೋಮಯ್ಯ ತಿಳಿಸಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಅವರು ಏ.19ರಂದು ಮಧ್ಯಾಹ್ನ ರವೀಂದ್ರ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಹೇಳಿದ್ದಾರೆ.

2011ರಲ್ಲಿ ದೇಶದಲ್ಲಿ ಅಣ್ಣಾ ಹಜಾರೆ ನಡೆಸಿದ ಜನಾಂದೋಲನದಿಂದ ಸ್ಫೂರ್ತಿಗೊಂಡು ನಂತರ ಸ್ಥಾಪನೆಯಾದ ಆಮ್ ಆದ್ಮಿ ಪಕ್ಷದಲ್ಲಿ ಸೇರ್ಪಡೆಗೊಂಡ ರವೀಂದ್ರ ಅಂದಿನಿಂದ ಇಂದಿನವರೆಗೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಜನರ ಸಮಸ್ಯೆಗಳಿಗೆ ಸುಲಭವಾಗಿ ಸ್ಪಂದಿಸುವ ಇಚ್ಛಾಶಕ್ತಿಯನ್ನು ಹೊಂದಿದ್ದಾರೆ ಎಂದು ಭೋಜಣ್ಣ ಸೋಮಯ್ಯ ತಿಳಿಸಿದ್ದಾರೆ.

ಚಾ.ನಗರ: ನರೇಂದ್ರ, ವಾಟಾಳ್ ನಾಗರಾಜು ಸೇರಿ 12 ಮಂದಿ ನಾಮಪತ್ರ ಸಲ್ಲಿಕೆ

ಚಾಮರಾಜನಗರ, ಏ.18– ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ನಾಲ್ಕನೇ ದಿನವಾದ ಮಂಗಳವಾರ ಜಿಲ್ಲೆಯಲ್ಲಿ 12 ಅಭ್ಯರ್ಥಿಗಳಿಂದ 13 ನಾಮಪತ್ರಗಳು ಸಲ್ಲಿಕೆಯಾಗಿವೆ. ಹನೂರು ವಿಧಾನಸಭಾ ಕ್ಷೇತ್ರದಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಆರ್. ನರೇಂದ್ರ ಎರಡು ನಾಮಪತ್ರ ಸಲ್ಲಿಸಿದ್ದಾರೆ. ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ವಾಟಾಳ್ ಪಕ್ಷದ ಅಭ್ಯರ್ಥಿಯಾಗಿ ವಾಟಾಳ್ ನಾಗರಾಜ್, ಗುಂಡ್ಲುಪೇಟೆಯಿಂದ ಜೆಡಿಎಸ್ ಅಭ್ಯರ್ಥಿಯಾಗಿ ಕಡಬೂರು ಮಂಜುನಾಥ್ ಸೇರಿದಂತೆ 11 ಅಭ್ಯರ್ಥಿಗಳು ತಲಾ ಒಂದೊಂದು ನಾಮಪತ್ರ ಸಲ್ಲಿಸಿದ್ದಾರೆ.



ಹನೂರು ವಿಧಾನಸಭಾ ಕ್ಷೇತ್ರದಿಂದ ಶಾಸಕ ಆರ್. ನರೇಂದ್ರ ನಾಮಪತ್ರ ಸಲ್ಲಿಸುತ್ತಿರುವುದು.



ವಾಟಾಳ್ ನಾಗರಾಜು ಚಾಮರಾಜನಗರದಿಂದ ನಾಮಪತ್ರ ಸಲ್ಲಿಸುತ್ತಿರುವುದು.



ಗುಂಡ್ಲುಪೇಟೆಯಿಂದ ಕಡಬೂರು ಮಂಜುನಾಥ್ ನಾಮಪತ್ರ ಸಲ್ಲಿಕೆ.

ಚಾಮರಾಜನಗರ: ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಭ್ಯರ್ಥಿಯಾಗಿ ವಾಟಾಳ್‌ನಾಗರಾಜ್ ಅವರು ತಮ್ಮ ಉಮೇದುವಾರಿಕೆಯನ್ನು ಚುನಾವಣಾಧಿಕಾರಿಗಳಿಗೆ ಸಲ್ಲಿಸಿದರು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಈಡುಗಾಯಿ ಒಡೆದು ಅಲ್ಲಿಂದ ತಮ್ಮ ಬೆಂಬಲಿಗರೊಂದಿಗೆ ಕಾರಿನಲ್ಲಿ ತೆರಳಿ ಚುನಾವಣಾಧಿಕಾರಿ ಯೋಗಾನಂದ ಅವರಿಗೆ ನಾಮಪತ್ರ ಸಲ್ಲಿಸಿದರು. ಸೂಚಕರಾಗಿ ಪುತ್ರಿ ಅನುಪಮಾ ವಾಟಾಳ್ ನಾಗರಾಜ್, ಚಾ.ರಂ.ಶ್ರೀನಿವಾಸಗೌಡ, ಕುಮಾರ್, ಪಾರ್ಥಸಾರಥಿ ಹಾಜರಿದ್ದರು.

ಇದು ನನ್ನ ಕೊನೆಯ ಚುನಾವಣೆ: ಇದು ನನ್ನ ಕೊನೆಯ ಚುನಾವಣೆ ಆಗಿದೆ. ಚಾಮರಾಜನಗರ ಜನತೆ ಯಾವುದೇ ಆಸೆ, ಆಮಿಷಗಳಿಗೆ ಬಗ್ಗಬೇಡಿ, ಚಾಮರಾಜನಗರ ಸಮಗ್ರ ಅಭಿವೃದ್ಧಿಗಾಗಿ ಈ ಬಾರಿ ನನಗೊಂದು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಪ್ರಬುದ್ಧ ರಾಜಕಾರಣಿಗಳ ವಿರುದ್ಧ ಯಾರು ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಡಿ: ಯಾವುದೇ ಪಕ್ಷದವರೇ ಆಗಲಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಯಡಿಯೂರಪ್ಪ, ಕುಮಾರಸ್ವಾಮಿ. ಈಶ್ವರಪ್ಪ ಸೇರಿದಂತೆ ಪ್ರಬುದ್ಧ ರಾಜಕಾರಣಿಗಳ ವಿರುದ್ಧ ಯಾವ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸದೆ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿ ಅಸೆಂಬ್ಲಿಗೆ ಹೋದರೆ ಒಂದು ಶಕ್ತಿ ಬರುತ್ತದೆ ಎಂದರು.

ಹನೂರು: ಶಾಸಕ ಆರ್.ನರೇಂದ್ರ ಅವರು ಹನೂರು ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಉಮೇದುವಾರಿಕೆ ಸಲ್ಲಿಸಿದ್ದಾರೆ. ಇಂದು ಬೆಳಗ್ಗೆ ಪಟ್ಟಣದ ಅಧಿದೇವತೆ ಶ್ರೀ ಬೆಟ್ಟಳ್ಳಿ ಮಾರಮ್ಮ ದೇವತೆಗೆ ಕುಟುಂಬದ ಪತ್ನಿ, ಪುತ್ರಿ, ಪುತ್ರನೊಡನೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಅಪಾರ ಸಂಖ್ಯೆಯ ಕಾಂಗ್ರೆಸ್ ಕಾರ್ಯಕರ್ತರ ಜೊತೆ ಪಟ್ಟಣದ ಮುಖ್ಯರಸ್ತೆಯಲ್ಲಿ ಮೆರವಣಿಗೆಯಲ್ಲಿ ಸಾಗಿ ತಹಸೀಲ್ದಾರ್ ಕಚೇರಿ ಸಮೀಪ ಪಶು ಆಸ್ಪತ್ರೆ ನೂತನ ಸಭಾಂಗಣದಲ್ಲಿ ತೆರೆಯಲಾಗಿರುವ ಚುನಾವಣೆ ಅಧಿಕಾರಿಗಳ ಕಾರ್ಯಾಲಯದಲ್ಲಿ ನಾಮಪತ್ರವನ್ನು ಸಲ್ಲಿಸಿದರು.

ಉಮೇದುವಾರಿಕೆ ಸಲ್ಲಿಸಿದ ಬಳಿಕ ಶಾಸಕ ಆರ್.ನರೇಂದ್ರ ಸುದ್ದಿಗಾರರೊಡನೆ ಮಾತನಾಡಿ, ನಾನು ಕಳೆದ 15 ವರ್ಷಗಳಲ್ಲಿ ಕೈಗೊಳ್ಳಲಾಗಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟುಕೊಂಡು ಚುನಾವಣೆಯನ್ನು ಎದುರಿಸುತ್ತಿದ್ದೇನೆ. ಈ ಬಾರಿ ಜನತೆ ಆಶೀರ್ವಾದ ಮಾಡಿದರೆ, ನೀರಾವರಿ ಯೋಜನೆ, ರಸ್ತೆ ಕಾಮಗಾರಿಗಳು, ಶಾಲೆ ಕಾಲೇಜು ನಿರ್ಮಾಣ ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾಮಗಾರಿಗಳ ಗುರಿ ಮತ್ತು ಉದ್ದೇಶವನ್ನು ಇಟ್ಟುಕೊಂಡಿದ್ದೇನೆ. ನಮ್ಮ ಸರ್ಕಾರದ ಅವಧಿಯಲ್ಲಿ ಕೈಗೊಳ್ಳಲಾಗಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ಜಲಾಶಯಗಳಿಗೆ ನದಿ ಮೂಲದಿಂದ ನೀರು ತುಂಬಿಸುವುದು, ಕೊಳ್ಳೇಗಾಲ ಹನೂರಿನವರೆಗೆ ಕೆ.ಶಿಪ್ ರಸ್ತೆ ಕಾಮಗಾರಿ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ನಂಜುಂಡಸ್ವಾಮಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮರಿಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುಕುಂದ ವರ್ಮ, ಜಿಪಂ ಮಾಜಿ ಉಪಾಧ್ಯಕ್ಷ ಈಶ್ವರ್, ಬಸವರಾಜು, ಮಹಾದೇವಪ್ರಸಾದ್, ವೆಂಕಟರಮಣ ನಾಯ್ಡು, ಯುವ ಮುಖಂಡ ನವನೀತ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.

ಗುಂಡ್ಲುಪೇಟೆ: ಇಲ್ಲಿನ ಜೆಡಿಎಸ್ ಅಭ್ಯರ್ಥಿ ಕಡಬೂರು ಮಂಜುನಾಥ್ ಮಂಗಳವಾರ ಚುನಾವಣಾಧಿಕಾರಿ ಮಲ್ಲಿಕಾರ್ಜುನ ಅವರಿಗೆ ತಮ್ಮ ನಾಮಪತ್ರ ಸಲ್ಲಿಸಿದರು.

ಪಟ್ಟಣದ ಚಾನಗರ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಿಂದ ತೆರಳಿದ ಅಭ್ಯರ್ಥಿ ಮಂಜುನಾಥ್ ಮತ್ತು ಅಪಾರ ಬೆಂಬಲಿಗರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿ ನಂತರ ತಾಲೂಕು ಕಚೇರಿಗೆ ಧಾವಿಸಿ ಚುನಾವಣಾಧಿಕಾರಿ ಮಲ್ಲಿಕಾರ್ಜುನ ಅವರಿಗೆ ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ ಕ್ಷೇತ್ರದಲ್ಲಿ ಅತ್ಯಧಿಕ ಭ್ರಷ್ಟಾಚಾರ ನಡೆಯುತ್ತಿದೆ. ಕ್ಷೇತ್ರದ ಪ್ರಗತಿ ಕುಂಠಿತಗೊಂಡಿದೆ. ಜನತೆ ಈ ಬಾರಿ ನನಗೊಂದು ಅವಕಾಶ ಮಾಡಿಕೊಟ್ಟರೆ ಕ್ಷೇತ್ರದ ಸಮಗ್ರ ಅಭಿವೃದ್ಧಿ ಮತ್ತು ಭ್ರಷ್ಟಾಚಾರ ರಹಿತ ಆಡಳಿತವನ್ನು ಕೊಡುವುದಾಗಿ ಭರವಸೆ ನೀಡುತ್ತೇನೆ ಎಂದರು. ಎರಡು ರಾಷ್ಟ್ರೀಯ ಪಕ್ಷಗಳು ಯಾವುದೇ ಕಾರಣಕ್ಕೂ ರಾಜ್ಯದ ಜನತೆಯ ಹಿತಕಾಪಾಡುವಲ್ಲಿ ಶ್ರಮಿಸುವುದಿಲ್ಲ. ಕೇವಲ ತಮ್ಮ ತಮ್ಮ ಹೈಕಮಾಂಡ್ ಹೇಳಿದಂತೆ ಕೇಳುವ ಪಕ್ಷಗಳಾಗಿವೆ. ಈ ಬಾರಿ ಪ್ರಾದೇಶಿಕ ಪಕ್ಷವಾದ ಜೆಡಿಎಸ್‌ನ್ನು ಅಧಿಕಾರಕ್ಕೆ ತಂದರೆ ರಾಜ್ಯದ ಅಭಿವೃದ್ಧಿ ಸಾಧ್ಯ ಎಂದರು.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಕೆ.ಎಂ.ಗಂಗಾಧರ, ಹಿರಿಯ ಮುಖಂಡರಾದ ಸಂಪತ್ತು, ಜಯರಾಮ, ನಾಗರಾಜಪ್ಪ ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಅಭಿಮಾನಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಇಂದು ಸೋಮಣ್ಣ ನಾಮಪತ್ರ ಸಲ್ಲಿಕೆ

ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ. ಸೋಮಣ್ಣ ಬುಧವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಇದಕ್ಕೂ ಮೊದಲು ಸೋಮಣ್ಣ ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬಳಿಕ ಬಿಜೆಪಿ ಜಿಲ್ಲಾ ಕಚೇರಿಯಿಂದ ತಮ್ಮ ಬೆಂಬಲಿಗರು, ಅಭಿಮಾನಿಗಳು ಹಾಗೂ ಕಾರ್ಯಕರ್ತರೊಂದಿಗೆ ರೋಡ್ ಶೋ ಮೂಲಕ ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ತಾಲೂಕು ಕಚೇರಿಗೆ ತೆರಳಿ, ಅಲ್ಲಿ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಲಿದ್ದಾರೆ.

ಕಿಲಗೆರೆ ಗ್ರಾಮದಲ್ಲಿ ಮೂರು ಚಿರತೆ ಮರಿಗಳು ಪ್ರತ್ಯಕ್ಷ

ಚಾಮರಾಜನಗರ, ಏ.18– ತಾಲೂಕಿನ ಕಿಲಗೆರೆ ಗ್ರಾಮದ ಕಬ್ಬಿನ ಗದ್ದೆಯಲ್ಲಿ ಮೂರು ಚಿರತೆ ಮರಿಗಳು ಕಾಣಿಸಿಕೊಂಡಿವೆ.



ಗ್ರಾಮದ ಪ್ರಭುಸ್ವಾಮಿ ಎಂಬುವವರ ಜಮೀನಿನಲ್ಲಿ ಮಂಗಳವಾರ ಬೆಳಗ್ಗೆ 8 ಗಂಟೆ ಸಮಯದಲ್ಲಿ ಕಬ್ಬು ಕಟಾವು ಮಾಡುವ ವೇಳೆ ಮೂರು ಚಿರತೆ ಮರಿಗಳು ಕಾಣಿಸಿಕೊಂಡಿವೆ. ಇದನ್ನು ನೋಡಿದ ಕೂಲಿ ಕಾರ್ಮಿಕರು ಹಾಗೂ ಗ್ರಾಮಸ್ಥರು ಆ ಚಿರತೆ ಮರಿಗಳನ್ನು ರಕ್ಷಣೆ ಮಾಡಿ, ಚಾಮರಾಜನಗರ ಸಾಮಾಜಿಕ ಅರಣ್ಯ ವಲಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ, ಮರಿಗಳನ್ನು ಅರಕಲವಾಡಿಯಲ್ಲಿರುವ ಕ್ಯಾಂಪ್‌ಗೆ ತೆಗೆದುಕೊಂಡು ಹೋಗಿದ್ದಾರೆ. ತಾಯಿ ಚಿರತೆಯ ಪತ್ತೆಗೆ ಕಾರ್ಯಾಚರಣೆ ನಡೆಸುತ್ತಿದ್ದು, ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

ಗ್ರಾಮಸ್ಥರಲ್ಲಿ ಆತಂಕ: ಗ್ರಾಮದ ಸಮೀಪದಲ್ಲಿಯೇ ಚಿರತೆ ಮರಿಗಳು ಕಾಣಿಸಿಕೊಂಡಿದ್ದರಿಂದ ಗ್ರಾಮಸ್ಥರು ಭಯಭೀತರಾಗಿದ್ದು, ತಾಯಿ ಚಿರತೆಯನ್ನು ಶೀಘ್ರವಾಗಿ ಸೆರೆಹಿಡಿಯುವಂತೆ ಆಗ್ರಹಿಸಿದ್ದಾರೆ. ಇದರಿಂದಾಗಿ ಆ ಭಾಗದ ಜಮೀನುಗಳಿಗೆ ತೆರಳುವಂತಹ ರೈತರು, ದನಗಾಹಿಗಳು ಅತಂಕಕ್ಕೆ ಒಳಗಾಗಿದ್ದಾರೆ.


ಜಾತ್ಯಾತೀತ ಜನತಾದಳ
ಕೃಷ್ಣರಾಜನಗರ ವಿಧಾನ ಸಭಾ ಕ್ಷೇತ್ರ
ನಾಮ ಪತ್ರ ಸಲ್ಲಿಕೆ
ದಿನಾಂಕ: 20.04.2023ರ ಗುರುವಾರ
ಬೆಳಿಗ್ಗೆ : 10.00 ಗಂಟೆಗೆ ತೋಪಮ್ಮ ದೇವಸ್ಥಾನದಿಂದ
ಮೆರವಣಿಗೆ ಮೂಲಕ ಮಿನಿ ವಿಧಾನಸೌಧ ತಾಲ್ಲೂಕು
ಕಛೇರಿಯಲ್ಲಿ ನಾಮಪತ್ರ ಸಲ್ಲಿಸುತ್ತಿದ್ದು
ಈ ಕಾರ್ಯಕ್ರಮಕ್ಕೆ ಎಲ್ಲಾ ಚುನಾಯಿತ ಪ್ರತಿನಿಧಿಗಳು,
ಮುಖಂಡರುಗಳು ಹಾಗೂ ಅಭಿಮಾನಿಗಳು, ಜೆ.ಡಿ.ಎಸ್. ಕಾರ್ಯಕರ್ತರುಗಳು ಹಾಗೂ
ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ವಿನಂತಿಸುತ್ತೇವೆ.
ಪ್ರಕಟಣೆ :
ಸಿ.ಎನ್. ಮಂಜೇಗೌಡ, ಶಾಸಕರು
ವಿಧಾನ ಪರಿಷತ್, ಕರ್ನಾಟಕ ಸರ್ಕಾರ
ಜೆಡಿಎಸ್ ಬೆಂಬಲಿಸಿ ಸಾ.ರಾ.ಮಹೇಶ್ ಗೆಲ್ಲಿಸಿ

ಶ್ರೀಹರ್ಷ ರಸ್ತೆಯಲ್ಲಿ ಉರುಳಿಬಿದ್ದ ಭಾರೀ ಮರ

4 ಕಾರುಗಳು, 1 ಸ್ಕೂಟರ್, ಪೆಟ್ಟಿಗೆ ಅಂಗಡಿ ಜಖಂ, ವ್ಯಕ್ತಿಯೋರ್ವ ಪವಾಡಸದೃಶ ಪಾರು





ಮೈಸೂರು, ಏ. 18(ಆರ್‌ಕೆ)– ದೊಡ್ಡ ಮರವೊಂದು ಉರುಳಿಬಿದ್ದ ಪರಿಣಾಮ ನಾಲ್ಕು ಕಾರುಗಳು, ಒಂದು ಸ್ಕೂಟರ್, ಒಂದು ಪೆಟ್ಟಿಗೆ ಅಂಗಡಿ ಜಖಂಗೊಂಡಿದ್ದು, ವ್ಯಕ್ತಿಯೋರ್ವ ಕೂದಲೆಳೆ ಅಂತರದಿಂದ ಪವಾಡ ಸದೃಶ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಮೈಸೂರಿನ ಹೃದಯ ಭಾಗದ ಶ್ರೀಹರ್ಷ ರಸ್ತೆಯಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.

ಅಲ್ಲಿನ ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಎದುರು ಡಾ. ರಾಜಕುಮಾರ್ ಪಾರ್ಕಿನಲ್ಲಿದ್ದ ಗುಲ್‌ಮೋಹರ್ ಮರ ಬೆಳಗ್ಗೆ 7 ಗಂಟೆ ವೇಳೆ ಬುಡಸಮೇತ ಶ್ರೀ ಹರ್ಷ ರಸ್ತೆಗೆ ಉರುಳಿ ಬಿದ್ದಿತು. ಪರಿಣಾಮ ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಎದುರು ರಸ್ತೆ ಬದಿ ನಿಲ್ಲಿಸಿದ್ದ ಎರಡು ಅಂಬಾಸಿಡರ್ ಕಾರುಗಳು (ಎಂಇಝಡ್ 5932, ಎಂಇವೈ 4444), ಮಾರುತಿ ಆಲ್ಟೋ (ಕೆಎ–09–ಡಿ–7198), ಮಾರುತಿ ಸ್ವಿಫ್ಟ್ (ಟಿ.ಎನ್.15, ಸಿ. 9275) ಹಾಗೂ ಒಂದು ಹೋಂಡಾ ಆಕ್ಟೀವಾ ಸ್ಕೂಟರ್ ಮತ್ತು ಪೆಟ್ಟಿಗೆ ಅಂಗಡಿ ಸಂಪೂರ್ಣ ಜಖಂಗೊಂಡಿದೆ.

ಆ ಪೈಕಿ ಆಗ ತಾನೆ ಬಂದು ಪಾರ್ಕ್ ಮಾಡಲು ಕಾರು ನಿಲ್ಲಿಸಿ ಎಂಜಿನ್ ಆಫ್ ಮಾಡುತ್ತಿದ್ದಂತೆಯೇ ಕಣ್ಣೆದುರೇ ಮರ ಉರುಳಿಬಿದ್ದಿತಾದರೂ, ಮಾರುತಿ ಆಲ್ಟೋ ಮಾಲೀಕ ಮಂಜು ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪಿ. ಸಂತೋಷ್, ದೇವರಾಜ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಶ್ರೀ ಹರ್ಷ ರಸ್ತೆ ಸಂಚಾರ ಬಂದ್ ಮಾಡಿಸಿದರು. ಮಾಹಿತಿ ತಿಳಿದ ಮೈಸೂರು ಮಹಾನಗರ ಪಾಲಿಕೆ ಅಭಯ–2 ತಂಡದ ಶಿವು, ಇಂದ್ರ ಆನಂದ, ಮಹೇಶ, ರಂಗನಾಥ್ ಅವರು ಮರದ ರೆಂಬೆಗಳನ್ನು ಕತ್ತರಿಸಿ ತೆರವುಗೊಳಿಸಿದರು.

ಅರಣ್ಯ ಇಲಾಖೆ ಸಿಬ್ಬಂದಿಯೂ ಘಟನಾ ಸ್ಥಳಕ್ಕೆ ತೆರಳಿ ಅಭಯ ತಂಡದ ಕಾರ್ಯಾಚರಣೆಗೆ ಸಾಥ್ ನೀಡಿ ಉರುಳಿದ ಮರ ತೆರವುಗೊಳಿಸಿ ಮಧ್ಯಾಹ್ನದ ವೇಳೆಗೆ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಅದರಿಂದಾಗಿ ಬೆಳಗ್ಗೆ 7 ರಿಂದ ಮಧ್ಯಾಹ್ನ 1 ಗಂಟೆಯವರೆಗೂ ಶ್ರೀ ಹರ್ಷ ರಸ್ತೆ ಸಂಚಾರಕ್ಕೆ ಅಡಚಣೆಯಾಗಿತ್ತು.

ಮರ ಉರುಳಿ ಬಿದ್ದ ಪರಿಣಾಮ ಆ ಮಾರ್ಗ ಹಾದು ಹೋಗಿರುವ ವಿದ್ಯುತ್ ಕಂಬ, ವೈರ್‌ಗಳೂ ಸಹ ತುಂಡಾಗಿ ಬಿದ್ದಿದ್ದು ಇಂದು ಬೆಳಗ್ಗೆಯಿಂದ ಆ ಭಾಗದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಸೆಸ್ಕ್ ಅಧಿಕಾರಿಗಳು ಸ್ಥಳ ಮಹಜರು ನಡೆಸಿ ಡ್ಯಾಮೇಜ್ ಆಗಿದ್ದ ಸುಮಾರು 150 ಮೀಟರ್ ಉದ್ದದ ವಿದ್ಯುತ್ ತಂತಿ, ಕಂಬಗಳನ್ನು ಬದಲಿಸಲು ಎಸ್ಟಿಮೇಟ್ ತಯಾರಿಸಿ ಅಗತ್ಯ ಕ್ರಮ ವಹಿಸುತ್ತಿದ್ದಾರೆ.

ಬುಡ ಸಂಪೂರ್ಣವಾಗಿ ಟೊಳ್ಳಾಗಿದ್ದು, ರೆಂಬೆಗಳ ಬಾರ ತಡೆಯಲಾರದೇ ಗುಲ್‌ಮೋಹರ್ ಮರ ಉರುಳಿ ಬಿದ್ದಿದೆ. ಈ ಹಿಂದೆಯೂ ಶ್ರೀ ಹರ್ಷ ರಸ್ತೆಯಲ್ಲಿ ಮರ ಬಿದ್ದು ಕಾರು ಜಖಂಗೊಂಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಬೆಳಗ್ಗೆ 7 ಗಂಟೆಯಾದ್ದರಿಂದ ಅಷ್ಟಾಗಿ ವಾಹನ ಸಂಚಾರ ಇರಲಿಲ್ಲ. 9 ಗಂಟೆ ನಂತರ ಮರ ಬಿದ್ದಿದ್ದರೆ ಭಾರೀ ಅಪಾಯ ಸಂಭವಿಸುತ್ತಿತ್ತು ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.

ಕಾರುಗಳನ್ನು ನಿಲ್ಲಿಸಿ ಡ್ರೈವರ್‌ಗಳು ಹೊರಗೆ ಹೋಗಿದ್ದರಿಂದ ಅಪಾಯ ತಪ್ಪಿದೆ. ಒಂದು ವೇಳೆ ಕಾರಿನಲ್ಲಿದ್ದಿದ್ದರೆ, ಪ್ರಾಣಾಪಾಯವಾಗುತ್ತಿತ್ತು ತಳ್ಳುವ ಗಾಡಿಯ ಪೆಟ್ಟಿಗೆ ಅಂಗಡಿ ಮಾಲೀಕ ಇನ್ನೊಂದು ಅರ್ಧಗಂಟೆಯಲ್ಲಿ ಒಂದು ಅಂಗಡಿ ಗಾಡಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಕೆಲಸದ ಸಮಯದಲ್ಲಿ ಬ್ಯಾಂಕ್ ನೌಕರರು, ಹೋಟೆಲ್ ಸಿಬ್ಬಂದಿ ಹಾಗೂ ಸಾರ್ವಜನಿಕರು ಶ್ರೀ ಹರ್ಷ ರಸ್ತೆಯಲ್ಲಿ ಅತೀ ಹೆಚ್ಚು ಮಂದಿ ಓಡಾಡುತ್ತಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ.

ಕೂದಲೆಳೆ ಅಂತರದಲ್ಲಿ ಪಾರಾದ ಗ್ರಾಫಿಕ್ ಡಿಸೈನರ್

ಮೈಸೂರು, ಏ.18 (ಆರ್‌ಕೆ)– ಕಣ್ಣೆದುರೇ ಕಾರಿನ ಮೇಲೆ ಮರ ಬಿದ್ದರೂ ಕೂದಲೆಳೆ ಅಂತರದಿಂದ ಗ್ರಾಫಿಕ್ ಡಿಸೈನರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಬಳಿಯ ನಿವಾಸಿ ಮಂಜು ಪವಾಡಸದೃಶವಾಗಿ ಪಾರಾದ ಯುವಕ. ಟ್ರಾಫಿಕ್ ಡಿಸೈನರ್ ಆದ ಅವರು ಕೆಲಸದ ನಿಮಿತ್ತ ಮಾರುತಿ ಆಲ್ಟೋ (ಕೆಎ 09, ಡಿ.7198) ಕಾರಿನಲ್ಲಿ ಪುರಭವನದೆದುರಿನ ಶ್ರೀಹರ್ಷ ರಸ್ತೆಗೆ ತೆರಳಿ ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಎದುರು ವಾಹನ ನಿಲ್ಲಿಸಿದರು. ಇಂಜಿನ್ ಇಗ್ನೀಷನ್ ಆಫ್ ಮಾಡುವ ಮೊದಲೇ ಡಾ.ರಾಜಕುಮಾರ್ ಪಾರ್ಕ್‌ನ ದೊಡ್ಡ ಮರ ಉರುಳಿ ಕಾರಿನ ಮೇಲೆ ಬಿದ್ದಿತು.

ಅದೃಷ್ಟವಶಾತ್ ಮರದ ರೆಂಬೆ ತುಸು ಬಲ ಭಾಗಕ್ಕೆ ಬಿದ್ದಿದ್ದರಿಂದ ಕಾರಿನಲ್ಲೇ ಇದ್ದ ಮಂಜುಗೆ ಯಾವುದೇ ಗಾಯಗಳಾಗದೇ ಸುರಕ್ಷಿತವಾಗಿ ಪಾರಾದರು.

ನನ್ನ ಅದೃಷ್ಟ ಚೆನ್ನಾಗಿತ್ತು ನಮ್ಮ ಮನೆ ದೇವರೇ ನನ್ನನ್ನು ಕಾಪಾಡಿದ್ದಾರೆ. ನಮ್ಮ ತಂದೆ–ತಾಯಿಯರು ಮಾಡಿದ ಪುಣ್ಯವೋ ಏನೋ ಇಂದು ನಾನು ದೊಡ್ಡ ಗಂಡಾಂತರದಿಂದ ಪಾರಾಗಿದ್ದೇನೆ ಎಂದು ನಿಟ್ಟುಸಿರು ಬಿಡುತ್ತಾ ಮಂಜು ಹೇಳಿದರು. ನಂತರ ಮರದ ರೆಂಬೆಗಳನ್ನು ತೆರವುಗೊಳಿಸಿದ ಮೇಲೆ ಮಂಜು ಮನೆಗೆ ತೆರಳಿದರು. ಉಳಿದ 3 ಕಾರುಗಳು ಸಂಪೂರ್ಣವಾಗಿ ಜಖಂಗೊಂಡಿದ್ದರೂ ಅವುಗಳಲ್ಲಿ ಯಾರೂ ಇರಲಿಲ್ಲ.

ಬೃಹತ್ ನೀರಿನ ಪೈಪ್ ಅಳವಡಿಸುವ ಕಾಮಗಾರಿ

ಯಾದವಗಿರಿ ಪರಮಹಂಸ ರಸ್ತೆ ಸಂಚಾರ ಬಂದ್



ಮೈಸೂರು, ಏ.18(ಆರ್‌ಕೆ)– ಮೈಸೂರಿನ ಯಾದವಗಿರಿಯ ಶ್ರೀ ರಾಮಕೃಷ್ಣ ವಿದ್ಯಾಶಾಲೆ ಬಳಿಯ ಪರಮಹಂಸ ರಸ್ತೆಯಲ್ಲಿ ನೀರು ಸರಬರಾಜು ಕೊಳವೆ ಪೈಪ್ ಅಳವಡಿಸುವ ಕಾಮಗಾರಿ ಕೈಗೊಳ್ಳಲಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕೆಯುಡಬ್ಲ್ಯುಎಸ್‌ಡಿಬಿ) ವತಿಯಿಂದ ಕೈಗೊಂಡಿರುವ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಪರಮಹಂಸ ರಸ್ತೆಯಲ್ಲಿ ಬಾರೀ ಹಳ್ಳ ತೆಗೆಯಲಾಗಿದ್ದು, ಒಂಟಿಕೊಪ್ಪಲು ಕಡೆಯಿಂದ, ಜಾಯ್ ಐಸ್‌ಕ್ರೀಂ ಫ್ಯಾಕ್ಟರಿ ಹಾಗೂ ದಾಸ್‌ಪ್ರಕಾಶ್ ಪ್ಯಾರಡೈಸ್ ಹೋಟೆಲ್ ಕಡೆಯಿಂದ ಬರುವ ವಾಹನಗಳ ಸಂಚಾರ ಬಂದ್ ಆಗಿದೆ.

ಕಾಮಗಾರಿಗಾಗಿ ಮಂಡಳಿ ಅಧಿಕಾರಿಗಳು ಎರಡೂ ಕಡೆಗಳಲ್ಲಿ ಸೂಚನಾ ಫಲಕ ಅಳವಡಿಸಿ ಬ್ಯಾರಿಕೇಡ್‌ಗಳನ್ನು ಅಡ್ಡಲಾಗಿ ಹಾಕಿ ಸೂಚನಾ ಫಲಕ ಹಾಕಿದ್ದರಾದರೂ, ಸಾರ್ವಜನಿಕರು ಅವುಗಳನ್ನು ಪಕ್ಕಕ್ಕೆ ಸರಿಸಿ ಸಂದಿಯಿಂದ ದ್ವಿಚಕ್ರ ವಾಹನಗಳಿಗೆ ದಾರಿ ಮಾಡಿಕೊಂಡಿದ್ದಾರೆ. ಸೂಚನಾ ಫಲಕ ತಕ್ಷಣಕ್ಕೆ ಗೋಚರಿಸದ ಕಾರಣ ಕಾರಿನಲ್ಲಿ ಬರುವವರು ಕಾಮಗಾರಿ ನಡೆಯುತ್ತಿರುವುದನ್ನು ಕಂಡು ಮತ್ತೆ ತಿರುಗಿಸಿಕೊಂಡು ಹೋಗುತ್ತಿರುವುದು ಸಾಮಾನ್ಯವಾಗಿದೆ. ಹಳೇಉಂಡುವಾಡಿ ಯೋಜನೆಯಿಂದ ಯಾದವಗಿರಿಯ ನೆಲ ಮಟ್ಟದ ಜಲ ಸಂಗ್ರಹಾಗಾರಕ್ಕೆ ನೀರು ಪೂರೈಸಲು ಬೃಹತ್ ವ್ಯಾಸದ ಪೈಪುಗಳು ಹಾಗೂ ಓವರ್ ಹೆಡ್ ಟ್ಯಾಂಕ್ ನಿಂದ ಪೂರೈಸುವ ಸಣ್ಣ ಸಣ್ಣ ಪೈಪುಗಳನ್ನು, ಯಾದವಗಿರಿಯ ಪರಮಹಂಸ ರಸ್ತೆಯಲ್ಲಿ ಅಳವಡಿಸುವ ಕೆಲಸ ತೀವ್ರಗತಿಯಲ್ಲಿ ನಡೆಯುತ್ತಿದೆ ಎಂದು ಕೆಯುಎಸ್‌ಡಿಬಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಸಿಫ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕಾಮಗಾರಿ ನಡೆಯುತ್ತಿರು ವುದರಿಂದ ಈ ರಸ್ತೆ ಸಂಚಾರ ಬಂದ್ ಆಗಿದೆ ಎಂಬ ಫಲಕ ಮತ್ತು ಬ್ಯಾರಿಕೇಡ್ ಅನ್ನು ಜನರು ತೆಗೆದು ಪಕ್ಕಕ್ಕಾಕುತ್ತಾರೆ. ಅಲ್ಲಿಗೆ ಸಿಬ್ಬಂದಿಯನ್ನು ನಿಯೋಜಿಸಿ ಎಂದು ಕೇಳಿದ್ದೆವಾದರೂ ಚುನಾವಣಾ ಬಂದೋಬಸ್ತ್ ಕರ್ತವ್ಯವಿರುವುದರಿಂದ ಸಾಧ್ಯವಿಲ್ಲವೆಂದು ಸಂಚಾರ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ ಎಂದ ಅವರು, 15 ದಿನದೊಳಗೆ ಪೂರ್ಣಗೊಳಿಸಬೇಕೆಂದು ವೇಗವಾಗಿ ಕಾಮಗಾರಿ ನಡೆಸುತ್ತಿದ್ದೇವೆ. ಸಾರ್ವಜನಿಕರು ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ.

ಇಂದು ಕರ್ನಾಟಕ ಪ್ರಜಾ ಪಾರ್ಟಿ ಅಭ್ಯರ್ಥಿ ಡಾ.ಶಿವಣ್ಣ ನಾಮಪತ್ರ ಸಲ್ಲಿಕೆ



ಮೈಸೂರು,ಏ.18–ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ)ಯ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಡಾ.ಬಿ.ಶಿವಣ್ಣ ನಾಳೆ (ಬುಧವಾರ) ತಮ್ಮ ನಾಮಪತ್ರ ಸಲ್ಲಿಸಲಿದ್ದಾರೆ. ಅಂದು ಮಧ್ಯಾಹ್ನ 1 ಗಂಟೆಗೆ ಮೈಸೂರಿನ ಅರಮನೆ ಬಳಿಯ ಕೋಟೆ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಅಲ್ಲಿಂದ ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಅಪಾರ ಬೆಂಬಲಿಗರೊಂದಿಗೆ ಕಾಲ್ನಡಿಗೆ ಮೂಲಕ ಪಾದಯಾತ್ರೆಯಲ್ಲಿ ತಾಲೂಕು ಕಚೇರಿ ಮಿನಿ ವಿಧಾನಸೌಧಕ್ಕೆ ತೆರಳಿ ಚುನಾವಣಾಧಿಕಾರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಿಗೆ ಬಂದ ಮಹಿಳೆ ನಾಪತ್ತೆ



ಮೈಸೂರು,ಏ.18–ಮಹಿಳೆಯೊಬ್ಬರು ಕೆ.ಆರ್.ನಗರದಿಂದ ಮೈಸೂರಿಗೆ ಬಂದು ನಾಪತ್ತೆಯಾಗಿರುವ ಘಟನೆ ನಗರದ ದಾಸಪ್ಪ ಸರ್ಕಲ್‌ನಲ್ಲಿ ಸಂಭವಿಸಿದ್ದು, ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೆ.ಆರ್.ನಗರದ ನಿವಾಸಿ ಭುವನೇಶ್ವರಿ(50) ಕಾಣೆಯಾದವರು. ಇವರು ತಮ್ಮ ತಾಯಿ ಜೊತೆ ಕೆ.ಆರ್.ನಗರದಿಂದ ಮೈಸೂರಿನಲ್ಲಿರುವ ಸಂಬಂಧಿಕರ ಮನೆಗೆ ಬರಲು ಮೆಟ್ರೋಪೋಲ್ ಸರ್ಕಲ್‌ನಲ್ಲಿ ಇಳಿದು, ದಾಸಪ್ಪ ಸರ್ಕಲ್‌ನಲ್ಲಿ ಸಿಟಿ ಬಸ್ಸು ಹತ್ತುವಾಗ ಕಾಣೆಯಾಗಿದ್ದು, ತಾಯಿ ಮಾತ್ರ ಸಂಬಂಧಿಕರ ಮನೆಗೆ ತೆರಳಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ದೊರೆತವರು ದೂ: 0821–2418306, 2418305 ಅಥವಾ ಮೊ: 90084 08946 ಸಂಪರ್ಕಿಸಿ.

ವೀರಪ್ಪನ್ ಸಹಚರ ನಿಮ್ಹಾನ್ಸ್‌ನಲ್ಲಿ ಸಾವು

ಬೆಂಗಳೂರು: ತಮಿಳುನಾಡಿನ ಪಾಲಾರ್‌ನಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿ 34 ವರ್ಷಗಳಿಂದ ಮೈಸೂರು ಜೈಲಿನಲ್ಲಿದ್ದ ವೀರಪ್ಪನ್ ಸಹಚರ ಮೀಸೆಕಾರ್ ಮಾದಯ್ಯ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಅಸುನೀಗಿದ್ದಾನೆ. ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಮಾದಯ್ಯನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನಿಂದ ನಿಮ್ಹಾನ್ಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಆಸ್ಪತ್ರೆಯಲ್ಲಿ ಅವರು ತೀರಿಕೊಂಡಿದ್ದು, ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ ಎಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೂಲಗಳು ತಿಳಿಸಿವೆ.

ನಿಧನ

ಪ್ರೊ. ಶಿವರಾಮೇಗೌಡ



ಮೈಸೂರು, ಏ. 18–ಮೈಸೂರು ಮಹಾರಾಣಿ ಕಲಾ ಕಾಲೇಜಿನ ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕ ಹಾಗೂ ಕುವೆಂಪುನಗರದ ನಿವಾಸಿ ಪ್ರೊ.ಶಿವರಾಮೇಗೌಡ(74) ಮಂಗಳವಾರ ನಿಧನರಾದರು. ಮೃತರು ಪತ್ನಿ ಯಶೋಧ, ಪುತ್ರಿಯರಾದ ಸಿಂಧು ಮತ್ತು ಸುಷ್ಮಾ, ಅಳಿಯ ಪ್ರದೀಪ್, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜಯನಗರದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿ.ಎಸ್.ಆನಂದಲಕ್ಷ್ಮಿ



ಸಿಎಫ್‌ಟಿಆರ್‌ಐ ಸ್ಕೂಲ್ ನಿವೃತ್ತ ಮುಖ್ಯೋಪಾಧ್ಯಾಯಿನಿ ಹಾಗೂ ಗೋಕುಲಂ ನಿವಾಸಿ ಸಿ.ಎಸ್.ಆನಂದಲಕ್ಷ್ಮಿ (85) ಸೋಮವಾರ ರಾತ್ರಿ ನಿಧನರಾದರು. ಮೈಸೂರಿನ ರೀಜನಲ್ ಕಾಲೇಜ್ ಆಫ್ ಎಜುಕೇಷನ್ ನಿವೃತ್ತ ಪ್ರಾಧ್ಯಾಪಕ ದಿವಂಗತ ವಿ.ಟಿ. ದೊರೆಸ್ವಾಮಿ ಅವರ ಪತ್ನಿಯಾದ ಇವರು ಪುತ್ರರಾದ ಮಧುಸೂದನ್ ಮತ್ತು ಮನಮೋಹನ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ವಿಜಯನಗರದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತನ್ನ ಹಳೆಯ ಆಪ್ತ ಬಸವೇಗೌಡರ ಮನೆಗೆ ಮಾಜಿ ಸಿಎಂ ಸಿದ್ದರಾಮಯ್ಯ ಭೇಟಿ; ಕಾಂಗ್ರೆಸ್‌ಗೆ ಬರುವಂತೆ ಆಹ್ವಾನ

- ಆಪ್ತರು, ಕುಟುಂಬದವರೊಂದಿಗೆ ಚರ್ಚಿಸಿ ನಿರ್ಧಾರ ತಿಳಿಸುವ ಭರವಸೆ
- ಈಗ ಸಂಸದ ಶ್ರೀನಿವಾಸಪ್ರಸಾದರ ಆಪ್ತರಾಗಿರುವ ಸಿ.ಬಸವೇಗೌಡ

ಮೈಸೂರು,ಏ.18(ಎಸ್‌ಬಿಡಿ)– ವರುಣಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಹಿಂದೆ ತಮ್ಮ ಅತ್ಯಾಪ್ತರಾಗಿದ್ದ ಹಾಲಿ ಬಿಜೆಪಿ ಮುಖಂಡ ಸಿ.ಬಸವೇಗೌಡ ಅವರನ್ನು ಭೇಟಿ ಮಾಡಿ ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನಿಸಿದ್ದಾರೆ.

ಪ್ರತಿಷ್ಠಿತ ವರುಣಾ ಕ್ಷೇತ್ರದಲ್ಲಿ ಚುನಾವಣಾ ತಂತ್ರಗಾರಿಕೆ ಚುರುಕುಗೊಂಡಿದೆ. 4 ದಿನಗಳ ಹಿಂದಷ್ಟೇ ವರುಣಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ, ಸಂಸದ ವಿ.ಶ್ರೀನಿವಾಸಪ್ರಸಾದ್ ಮನೆಗೆ ಭೇಟಿ ನೀಡಿದ್ದಾಗ ಅವರ ಅತ್ಯಾಪ್ತರಾದ ಸಿ.ಬಸವೇಗೌಡ ಹಾಗೂ ಸಂಸದ ಪ್ರತಾಪ್ ಸಿಂಹ ಉಪಸ್ಥಿತರಿದ್ದರು. ಈ ವೇಳೆ ಚುನಾವಣೆ ಸಂಬಂಧ ಸುದೀರ್ಘ ಚರ್ಚೆ ನಡೆಸಿದ್ದರು. ಇದರ ಬೆನ್ನಲ್ಲೇ ಮಾಜಿ ಸಿಎಂ ಸಿದ್ದರಾಮಯ್ಯನವರ ಪುತ್ರ, ವರುಣಾ ಹಾಲಿ ಶಾಸಕ ಡಾ.ಯತೀಂದ್ರ, ಸಿ.ಬಸವೇಗೌಡರಿಗೆ ಕರೆ ಮಾಡಿ ಭೇಟಿಗೆ ಅವಕಾಶ ಕೇಳಿದ್ದರು. ನಂತರದಲ್ಲಿ ಸಿದ್ದರಾಮಯ್ಯನವರೂ ಬಸವೇಗೌಡರೊಂದಿಗೆ ಮಾತನಾಡಿ, ಭೇಟಿಯಾಗಲು ಇಚ್ಛಿಸಿದ್ದರು.

ಈ ಹಿನ್ನೆಲೆಯಲ್ಲಿ ಹಲವು ವರ್ಷಗಳ ಬಳಿಕ ಮಂಗಳವಾರ ಮಧ್ಯಾಹ್ನ 2.45ರ ವೇಳೆಗೆ ಟಿ.ಕೆ.ಲೇಔಟ್‌ನಲ್ಲಿರುವ ಸಿ.ಬಸವೇಗೌಡರ ನಿವಾಸಕ್ಕೆ ತೆರಳಿದ ಸಿದ್ದರಾಮಯ್ಯ ಹಾಗೂ ಡಾ.ಯತೀಂದ್ರ, ಸಿ.ಬಸವೇಗೌಡರೊಂದಿಗೆ ಗಂಟೆಗೂ ಹೆಚ್ಚು ಕಾಲ ಗೌಪ್ಯ ಮಾತುಕತೆ ನಡೆಸಿದರು. ಈ ವೇಳೆ ಹಳೆಯ ಆಪ್ತನನ್ನು ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನಿಸಿದರು. ಈ ವೇಳೆ ಕೆಲ ಮುಖಂಡರು ಕಾಂಗ್ರೆಸ್ ಪಕ್ಷದ ಚಿಹ್ನೆಯುಳ್ಳ ಶಲ್ಯವನ್ನೂ ತಂದಿದ್ದರು. ಸಂಜೆ 4.15ರ ವೇಳೆಗೆ ಬಸವೇಗೌಡರ ಮನೆಯಿಂದ ಹೊರಬಂದ ಸಿದ್ದರಾಮಯ್ಯನವರು ಅಲ್ಲಿದ್ದ ಮಾಧ್ಯಮದವರಿಗೆ ಪ್ರತಿಕ್ರಿಯಿಸಲಿಲ್ಲ.



ವರುಣಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಅವರ ಪುತ್ರ ಡಾ.ಯತೀಂದ್ರ ಮಂಗಳವಾರ ಬಿಜೆಪಿ ಮುಖಂಡ, ಹಿರಿಯ ಸಹಕಾರಿ ಸಿ.ಬಸವೇಗೌಡರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಬಳಿಕ ಸಿ.ಬಸವೇಗೌಡರು ಮಾಧ್ಯಮದವರಿಗೆ ಪ್ರತಿಕ್ರಿಯಿಸಿ, ಮೊನ್ನೆ ಪ್ರತಾಪ್ ಸಿಂಹ ಅವರು ವಿ.ಶ್ರೀನಿವಾಸ ಪ್ರಸಾದ್ ಅವರ ಮನೆಗೆ ಕರೆಸಿದ್ದರು. ಆ ವೇಳೆ ವಿ.ಸೋಮಣ್ಣನವರೂ ಇದ್ದರು. ನಾಲ್ಕು ಜನ ಮಾತನಾಡಿದ್ದೆವು. ನಂತರದಲ್ಲಿ ಡಾ.ಯತೀಂದ್ರ ಅವರು ಕರೆ ಮಾಡಿ, ನಾನು ಹಾಗೂ ಅಪ್ಪ ನಿಮ್ಮ ಮನೆಗೆ ಬರುತ್ತೇವೆ ಸಮಯ ಕೊಡಿ ಎಂದಿದ್ದರು. ಇಂದು ಮಧ್ಯಾಹ್ನ ಕಾಂಗ್ರೆಸ್ ಮುಖಂಡರೊಬ್ಬರು ಕರೆ ಮಾಡಿ, ಸಿದ್ದರಾಮಯ್ಯನವರು ನಿಮ್ಮ ಮನೆಗೆ ಬರುತ್ತಿದ್ದಾರೆ ಎಂದರು. ಅವರನ್ನು ಬರಮಾಡಿಕೊಂಡೆ. ನನ್ನ ಕುಟುಂಬದವರು ಹಾಗೂ ಹಿತೈಷಿಗಳೊಂದಿಗೆ ಮಾತನಾಡಿ, ನಾಳೆ(ಏ.19) ತಿಳಿಸುತ್ತೇನೆ ಎಂದು ಹೇಳಿದೆ. ಆಗ ಸಿದ್ದರಾಮಯ್ಯನವರು ಯಾವ ಕಾರಣಕ್ಕೂ ನಕಾರಾತ್ಮಕವಾಗಿ ಯೋಚಿಸಬೇಡ ಎಂದು ಹೇಳಿ ಹೋದರೆಂದು ಸಿ.ಬಸವೇಗೌಡ ಹೇಳಿದರು.

ಪ್ರಸಾದ್ ಸ್ನೇಹ ಅಮರ: ನಾನು ಮತ್ತು ವಿ.ಶ್ರೀನಿವಾಸಪ್ರಸಾದ್ 1976ರಿಂದಲೂ ಪರಿಚಿತರು. ನಮ್ಮಿಬ್ಬರ ಸ್ನೇಹ, ಒಡನಾಟ ರಾಜಕೀಯ ಹೊರತಾಗಿದ್ದು. ಮುತ್ಸದ್ದಿಯಾದರೂ ಅತ್ಯಂತ ಪ್ರೀತಿ, ಗೌರವದಿಂದ ಕಾಣುತ್ತಾರೆ. ಈ ಎಲ್ಲಾ ಬೆಳವಣಿಗೆ ಬಗ್ಗೆ ಅವರೊಂದಿಗೂ ಚರ್ಚೆ ನಡೆಸುತ್ತೇನೆ. ಸಿದ್ದರಾಮಯ್ಯನವರಿಗೆ ಅನಾರೋಗ್ಯವಾದಾಗ ಅವರ ಮನೆಗೆ ಪ್ರಸಾದ್ ಹಾಗೂ ನಾನು ಹೋಗಿ ಮಾತನಾಡಿಸಿಕೊಂಡು ಬಂದಿದ್ದೆವು. ಹಾಗಾಗಿ ಸ್ನೇಹವೇ ಬೇರೆ, ರಾಜಕಾರಣವೇ ಬೇರೆ ಎಂದರು.

ಬಿಜೆಪಿ ಬಳಸಿಕೊಳ್ಳಲಿಲ್ಲ: ಬಿಜೆಪಿ ನಿಮ್ಮನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲವೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಹೌದು ಅನೇಕರು ಇದನ್ನೇ ಹೇಳುತ್ತಾರೆ. ಉಪಚುನಾವಣೆ, ಲೋಕಸಭಾ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದೀರಿ. 5 ವರ್ಷದ ಮೇಲಾಯ್ತು ಬಿಜೆಪಿ ನಿಮ್ಮನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲ ಎಂದಿದ್ದಾರೆ. ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಾದ ಬೆಳವಣಿಗೆ ಇನ್ನಿತರ ಕಾರಣಗಳಿಂದ ನಾನು ರಾಜಕಾರಣದಿಂದ ದೂರವಿದ್ದೆ. ಶ್ರೀನಿವಾಸ ಪ್ರಸಾದ್ ಅವರು ಕಾಂಗ್ರೆಸ್ ಬಿಟ್ಟಾಗ ಮಾತನಾಡಿಸಲೆಂದು ಹೋಗಿದ್ದಾಗ ನನ್ನೊಂದಿಗಿರಿ ಎಂದರು. ನಂತರ ಅವರು ಬಿಜೆಪಿಗೆ ಸೇರಿದಾಗಲೂ ಜೊತೆಯಲ್ಲಿರಿ ಎಂದರು.


ಚಾಮುಂಡೇಶ್ವರಿಯಲ್ಲಿ ಜೆಡಿಎಸ್ ಅಭ್ಯರ್ಥಿ ಜಿಟಿಡಿಗೆ ಬ್ರಾಹ್ಮಣರ ಸಮುದಾಯದ ಬೆಂಬಲ



ಮೈಸೂರು, ಏ.18– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಟಿ. ದೇವೇಗೌಡರಿಗೆ ನಗರ ಮಂಡಲ ಬ್ರಾಹ್ಮಣ ರಕ್ಷಣಾ ವೇದಿಕೆ ಸಂಪೂರ್ಣ ಬೆಂಬಲ ನೀಡುವುದಾಗಿ ವೇದಿಕೆ ಅಧ್ಯಕ್ಷ ಕಡಕೊಳ ಹರೀಶ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕಳೆದ 15 ವರ್ಷಗಳಿಂದ ಬಿಜೆಪಿಯಲ್ಲಿ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. 2019–20 ಮತ್ತು 2020–21ನೇ ಸಾಲಿನಲ್ಲಿ ಮೈಸೂರು ಜಿಲ್ಲಾ ನಗರ ಮಂಡಲ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷಕ್ಕೆ ದುಡಿದಿದ್ದೇನೆ. ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷನಾಗಿ ಸೇವೆ ಸಲ್ಲಿಸಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಇದುವರೆಗೆ ಬ್ರಾಹ್ಮಣ ಸಮುದಾಯಕ್ಕೆ ಯಾವುದೇ ಅನುಕೂಲವಾಗಿಲ್ಲ. ಆದ್ದರಿಂದ ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡರಿಗೆ ಬೆಂಬಲ ನೀಡಲು ನಿರ್ಧರಿಸಿದ್ದೇವೆ ಎಂದು ಅವರು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.4.2023 ಬುಧವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023 ರಿಂದ 24.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಮೈಸೂರು ನಗರ (ಜಿಲ್ಲಾ) ಜನತಾದಳ :** ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಕೆ. ರಮೇಶ್ ಅವರು ನಾಮಪತ್ರ ಸಲ್ಲಸುವ ಸಂಬಂಧ ಕಾರ್ಯಕರ್ತರ ಸಭೆ, ಸ್ಥಳ: ಶ್ರೀ ಕೆಂಪೇಗೌಡ ಕಲ್ಯಾಣ ಮಂಟಪ, ಮಂಜುನಾಥಪುರ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ನೇಗಿಲಯೋಗಿ ವಿದ್ಯಾವರ್ಧಕ ಸ್ಪರ್ಧಾ ಕೇಂದ್ರ :** ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಕಿರಿಯ ಲೆಕ್ಕ ಸಹಾಯಕರು ಹಾಗೂ ಲೆಕ್ಕ ಸಹಾಯಕರ ಹುದ್ದೆಯ ಆಕಾಂಕ್ಷಿಗಳಿಗೆ ಉಚಿತ ಕಾರ್ಯಾಗಾರ, ಅಧ್ಯಕ್ಷತೆ : ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮುಖ್ಯ ಲೆಕ್ಕಾಧಿಕಾರಿ ಡಾ.ಹೆಚ್.ಡಿ.ವೆಂಕಟೇಶ್, ಉದ್ಘಾಟನೆ : ಮೈಸೂರು ಪ್ರಾಂತೀಯ ವಿಭಾಗದ ಉಪ ನಿರ್ದೇಶಕರಾದ ಶ್ರೀಮತಿ ಎಂ.ಸವಿತಾ, ಮುಖ್ಯ ಅತಿಥಿಗಳು: ವಿದ್ಯಾವರ್ಧಕ ಕಾನೂನು ಕಾಲೇಜು ನಿರ್ದೇಶಕ ಕೆ.ಬಿ.ವಾಸುದೇವ, ಪ್ರೊ. ಎಲ್.ಹಂಸವೇಣಿ, ಡಾ.ಎಂ.ಬಿ.ಸುರೇಶ್, ಡಿ. ರವಿಕುಮಾರ್, ಸ್ಥಳ: ವಿದ್ಯಾವರ್ಧಕ ಕಾನೂನು ಕಾಲೇಜು, ಶೇಷಾದ್ರಿ ಐಯ್ಯರ್ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಮೈಸೂರು ಕನ್ನಡ ವೇದಿಕೆ :** ಸಾಹಿತಿ ಹಾಗೂ ಅಂಕಣಕಾರ ಬನ್ನೂರು ಕೆ.ರಾಜು–60 ಸಂಭ್ರಮ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಯೋಗಾನರಸಿಂಹಸ್ವಾಮಿ ಮಹಾಸಂಸ್ಥಾನ ಮಠದ ಪೀಠಾಧೀಶರಾದ ಪ್ರೊ.ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಮಾಜಿ ಸಿಂಡಿಕೇಟ್ ಸದಸ್ಯ ಹಾಗೂ ಅರ್ಥೋಪೆಡಿಕ್ ಸರ್ಜನ್ ಡಾ.ಕೆ.ಮಹದೇವ್, ಅಧ್ಯಕ್ಷತೆ : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಮುಖ್ಯ ಅತಿಥಿಗಳು: ಸಾಹಿತಿ ಡಿ.ಎನ್. ಕೃಷ್ಣಮೂರ್ತಿ, ವಿಶ್ರಾಂತ ಪ್ರಾಂಶುಪಾಲ ಕಾಡ್ನೂರು ಶಿವೇಗೌಡ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಲೇಖಕಿ ಡಾ.ಜಮುನಾರಾಣಿ, ಗಾಯಕ ರೇವಣ್ಣ, ನಾಲಾಬೀದಿ ರವಿ, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ.ಸಂಗಪ್ಪ, ಕಾವೇರಿ ಬಳಗದ ಎನ್.ಕೆ.ಕಾವೇರಿಯಮ್ಮ, ಮನುಗನ ಹಳ್ಳಿ ಎಸ್. ಗೋವಿಂದೇಗೌಡ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ಬೆಳಗ್ಗೆ 11.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ಜಿ. ಪುಷ್ಪಲತಾ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 7.15 ಕಾದಂಬರಿ ವಿಹಾರ –ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್.ಎಸ್., 8.30 ರೂಪಕ "ಮರದಿಂದ ಮಳೆ, ಇಳೆಗೆ ಕಳೆ", ರಚನೆ–ಸುರೇಂದ್ರನಾಥ್ ಸಾತ್ವಿಕ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 9.25 ನಾಟಕ–ಮತ್ತೆ ಮಕ್ಕಳಂತಾಗಿಬಿಡೋಣ, ಮೂಲ ಹಿಂದಿ–ಕ್ಷಮಾ ಶರ್ಮಾ, ಕನ್ನಡಾನುವಾದ–ಪ್ರೊ. ಲಕ್ಷ್ಮೀ ನಾರಾಯಣ ಅರೋರಾ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, 10.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ. ನಿರ್ದೇಶನ ಹಾಗೂ ನಿರೂಪಣ ಸಾಹಿತ್ಯ–ಎಸ್.ಶಂಕರ್, ನಿರ್ಮಾಣ–ಗೀತಾ ರಮಾನಂದ್, 11.00 ಮಿಶ್ರ ಮಾಧುರ್ಯ. **ಮಧ್ಯಾಹ್ನ:** 12.30 ದೇವರನಾಮ–ಶ್ರೀ ರಕ್ಷಾ, ಆರ್.ಕೆ. ಶ್ರೀಕಂಠನ್, 12.45 ಕಂಪ್ಯೂಟರ್ ವ್ಯವಹಾರದ ವಿಸ್ತಾರ–ಮನೋಜ್ ಸಿಂಗ್ ಎಂ.ಜಿ. ಅವರೊಂದಿಗೆ ಸಂದರ್ಶನ, 1.20 ಭಾವಗೀತೆಗಳು–ಎಂ.ಆರ್. ಶ್ರೀಹರ್ಷ, 3.00 ಕಲಾವತಿ ಅವಧೂತ್–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ "ನಲ್ಲ ತಂಗಾದೇವಿ", ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 5.05 ಮಿಶ್ರಮಾಧುರ್ಯ, 6.50 ಕೃಷಿರಂಗ–ಕಿಸಾನ್‌ವಾಣಿ– ದಾಳಿಂಬೆ ಕೃಷಿಗೆ ಇರುವ ಅವಕಾಶಗಳು ಕುರಿತು ಡಾ. ಜಿ. ಮಂಜುನಾಥ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎಸ್. ಸುಬ್ರಹ್ಮಣ್ಯ, 9.15 ಯಕ್ಷಗಾನದ ಹಾಡುಗಳು–ಜಾಂಬವತಿ ಕಲ್ಯಾಣ ಪ್ರಸಂಗದ ಹಾಡುಗಳು–ಲಕ್ಷ್ಮೀನಾರಾಯಣ ಭಟ್, 9.30 ಸ್ಮಿತಾ ಶ್ರೀ ಕಿರಣ್–ವೇಣುವಾದನ, 10.30 ಗಮಕ ವ್ಯಾಖ್ಯಾನ, ವಾಚನ– ಮೀನಾ ನಾಗರಾಜ್, ವ್ಯಾಖ್ಯಾನ– ನಿರಂಜನ್

■ **ರಂಗಾಯಣ :** ಚಿಣ್ಣರ ಮೇಳದ ಚಿಣ್ಣರೊಂದಿಗೆ ಪರಿಸರ ತಜ್ಞ ಕೆ. ಮನು 'ಮುಖಾಮುಖಿ' ಸಂವಾದ ಕಾರ್ಯಕ್ರಮ, ಸ್ಥಳ: ರಂಗಾಯಣ, ಮಧ್ಯಾಹ್ನ 2ಕ್ಕೆ

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಮೆಡಿಕಲ್ ಕಾಲೇಜು:** ಪದವೀಧರರ ದಿನಾಚರಣೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ನಿಮ್ಹಾನ್ಸ್ ನಿರ್ದೇಶಕ ಡಾ. ಪ್ರತಿಮಾಮೂರ್ತಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಗೌರವ ಅತಿಥಿಗಳು: ಅಕಾಡೆಮಿ ಸಮ ಕುಲಾಧಿಪತಿ ಡಾ.ಬಿ.ಸುರೇಶ್, ಕುಲಪತಿ ಡಾ. ಸುರೀಂದರ್ ಸಿಂಗ್, ಸ್ಥಳ: ಜೆಎಸ್‌ಎಸ್ ಮೆಡಿಕಲ್ ಇನ್ಸ್‌ಟಿಟ್ಯೂಷನ್ ಆವರಣ, ಸಂಜೆ 4.30ಕ್ಕೆ

■ **ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠ :** ತಿರುನಕ್ಷತ್ರ ಮಹೋತ್ಸವ, ವೇದ ಪಂಡಿತರಿಂದ ಚಾತುರ್ವೇದ ಮತ್ತು ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠ, ಬೆಳಗ್ಗೆ 9 ರಿಂದ ಮತ್ತು ಸಂಜೆ 5ರಿಂದ.

■ **ರೋಟರಿ ಮೈಸೂರು ಮಿಡ್‌ಟೌನ್ :** ಪತ್ರಿಕೋದ್ಯಮದಲ್ಲಿನ ಶ್ರೇಷ್ಠತೆಗಾಗಿ ಸಿಲಿಕಾನ್ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪ್ರದಾನ: ನಿಯೋಜಿತ ಜಿಲ್ಲಾ ಗವರ್ನರ್ ರೋ. ಹೆಚ್.ಆರ್. ಕೇಶವ್, ಪ್ರಶಸ್ತಿಗೆ ಭಾಜನರು : ಪಬ್ಲಿಕ್ ಟಿವಿಯ ಕೆ.ಪಿ. ನಾಗರಾಜ್, ಪತ್ರಿಕಾ ಛಾಯಾಗ್ರಾಹಕ ಎಸ್. ಉದಯ ಶಂಕರ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

ನಾಮಪತ್ರ ಸಲ್ಲಿಕೆ ಭರಾಟೆ ಮುಂದುವರಿಕೆ

● ಸಿ.ಹೆಚ್.ವಿಜಯಶಂಕರ್, ಕೆ.ಮಹದೇವ್, ಸೋಮಶೇಖರ್ ನಾಮಪತ್ರ ಸಲ್ಲಿಕೆ ● ಮಂಗಳವಾರದವರೆಗೆ ಮೈಸೂರು ಜಿಲ್ಲೆಯಲ್ಲಿ 99 ಮಂದಿ ಸ್ಪರ್ಧೆ ಬಯಸಿ ಉಮೇದುವಾರಿಕೆ ದಾಖಲು, ನಾಳೆ ಮಧ್ಯಾಹ್ನ 3 ಗಂಟೆವರೆಗೆ ನಾಮಪತ್ರ ಸಲ್ಲಿಸಲು ಅವಕಾಶ


ವಿಜಯಶಂಕರ್


ಕೆ.ಮಹದೇವ್


ಸೋಮಶೇಖರ್

ಮೈಸೂರು, ಏ.18(ಆರ್‌ಕೆ)–ಕೆ.ಮಹದೇವ್ ಸೇರಿದಂತೆ ಮೈಸೂರು ಜಿಲ್ಲೆಯಲ್ಲಿ ಮಂಗಳವಾರ 28 ಮಂದಿ ಚುನಾವಣೆಗೆ ಸ್ಪರ್ಧೆ ಬಯಸಿ ನಾಮಪತ್ರ ಸಲ್ಲಿಸಿದರು.

ಮಂಗಳವಾರವಾದರೂ ಇಂದು ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷ ಸೇರಿದಂತೆ ಕೆ.ಆರ್.ನಗರ ಮತ್ತು ಹೆಚ್.ಡಿ. ಕೋಟೆ ಹೊರತುಪಡಿಸಿ ಮೈಸೂರು ಜಿಲ್ಲೆಯ ಎಲ್ಲಾ 9 ವಿಧಾನಸಭಾ ಕ್ಷೇತ್ರಗಳಲ್ಲಿ 28 ಅಭ್ಯರ್ಥಿ ಆಕಾಂಕ್ಷಿಗಳಿಂದ ಒಟ್ಟು 34 ನಾಮಪತ್ರ ಸಲ್ಲಿಸಿದ್ದು, ಇದರೊಂದಿಗೆ ಜಿಲ್ಲೆಯಲ್ಲಿ ಒಟ್ಟು 99 ಮಂದಿ ಚುನಾವಣೆಯಲ್ಲಿ ಸ್ಪರ್ಧೆ ಬಯಸಿ ನಾಮಪತ್ರ ಸಲ್ಲಿಸಿದಂತಾಗಿದೆ. ಏಪ್ರಿಲ್ 20ರಂದು ಗುರುವಾರ ಮಧ್ಯಾಹ್ನ 3 ಗಂಟೆವರೆಗೆ ನಾಮಪತ್ರ ಸಲ್ಲಿಸಲು ಅವಕಾಶವಿದ್ದು, ನಾಳೆ (ಏ.19) ಮತ್ತು ಗುರುವಾರ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಸಾ.ರಾ.ಮಹೇಶ್, ತನ್ವೀರ್ ಸೇಠ್ ಸೇರಿದಂತೆ ಉಳಿದ ಅಭ್ಯರ್ಥಿ ಆಕಾಂಕ್ಷಿಗಳು ಆಯಾ ವಿಧಾನಸಭಾ ಕ್ಷೇತ್ರಗಳ ಚುನಾವಣಾಧಿಕಾರಿ ಕಚೇರಿಗಳಲ್ಲಿ ನಾಮಪತ್ರ ಸಲ್ಲಿಸುವರು. ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಬಿಜೆಪಿಯ ಸಿ.ಹೆಚ್.ವಿಜಯಶಂಕರ್, ಜೆಡಿಎಸ್‌ನ ಕೆ.ಮಹದೇವ್, ಆಮ್ ಆದ್ಮಿ ಪಾರ್ಟಿಯ ರಾಜಶೇಖರ್, ನಾಗವೇಣಿ, ಹುಣಸೂರಿನಲ್ಲಿ ಬಿಜೆಪಿಯ ದೇವರಹಳ್ಳಿ ಸೋಮಶೇಖರ್, ಪಕ್ಷೇತರರಾಗಿ ಉಮೇಶ್, ಹೆಚ್.ಬಿ.ರಾಜೇಂದ್ರ, ನಂಜನಗೂಡಿನಲ್ಲಿ ಬಿಜೆಪಿಯ ಬಿ.ಹರ್ಷವರ್ಧನ್, ಪಕ್ಷೇತರ ಹೆಚ್.ಕೆ.ಸ್ವಾಮಿ, ಅವರು ಇಂದು ನಾಮಪತ್ರ ಸಲ್ಲಿಸಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧೆ ಬಯಸಿ ಬಿಜೆಪಿಯ ಕವೀಶ್‌ಗೌಡ, ಪಕ್ಷೇತರರಾಗಿ ಹೆಚ್.ಕೆ. ರಾಮೇಗೌಡ, ಎಂ.ಎಂ.ಮಹೇಶ್‌ಗೌಡ, ಸುರೇಶ್, ಕೃಷ್ಣರಾಜದಿಂದ ಜೆಡಿಎಸ್‌ನ ಕೆ.ವಿ. ಮಲ್ಲೇಶ್, ಕರ್ನಾಟಕ ರಾಷ್ಟ್ರ ಸಮಿತಿಯಿಂದ ಕೆ.ಎಸ್.ಸೋಮಶೇಖರ್, ಪಕ್ಷೇತರ ಅಮಿತಾಭ್, ಚಾಮರಾಜದಿಂದ ಪಕ್ಷೇತರ ಆರ್.ಯೋಗಾನರಸಿಂಹಮೂರ್ತಿ, ನರಸಿಂಹರಾಜದಿಂದ ಆಮ್ ಆದ್ಮಿ ಪಾರ್ಟಿಯ ಧರ್ಮಶ್ರೀ, ಪಕ್ಷೇತರರಾಗಿ ರಾಬರ್ಟ್ ಇಮ್ಯಾನುಯೆಲ್, ಎಂ.ಎನ್. ನೀಲಕಂಠ, ಪಕ್ಷೇತರ ಅಜೀಜುಲ್ಲಾ ಅಜ್ಜು ಹಾಗೂ ವರುಣಾ ಕ್ಷೇತ್ರದಿಂದ ಪಕ್ಷೇತರರಾಗಿ ಬಿ.ಶಿವಣ್ಣ, ಗಿರೀಶ್, ಸುರೇಶ್, ಡಾ. ಯು.ಪಿ.ಶಿವಾನಂದ, ವಿ.ಸಿದ್ದರಾಜು, ಸಿ.ಪಿ.ಸುರೇಂದ್ರನಾಥ, ಆಮ್ ಆದ್ಮಿ ಪಾರ್ಟಿಯ ರಾಜೇಶ್ ಅವರು ಮಂಗಳವಾರ ನಾಮಪತ್ರ ಸಲ್ಲಿಸಿದವರಾಗಿದ್ದಾರೆ.

ಇದು ವ್ಯಕ್ತಿಯ ಸಾವು ಬದುಕಿನ ಆಟ...

ಚುನಾವಣಾ ಕಾರ್ಯಕ್ಕೆ ನಿಯೋಜಿಸಿದ್ದ ಸಿಬ್ಬಂದಿ ತರಬೇತಿ ವೇಳೆ ಸಾವು; ತಾಯಿ ಸ್ಪರ್ಶದಿಂದ ಮರಳಿದ ಚೇತನ

ಆದರೆ ಮೈಸೂರು ಆಸ್ಪತ್ರೆಗೆ ಸಾಗಿಸಿದರೂ ಬದುಕಲಿಲ್ಲ



ಹನೂರು, ಏ.18– ವೈದ್ಯರ ತಪ್ಪು ಗ್ರಹಿಕೆಯಿಂದ ಸತ್ತು ಬದುಕಿದ್ದರೆನ್ನಲಾದ ವ್ಯಕ್ತಿ, ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟ ಘಟನೆ ಮಂಗಳವಾರ ನಡೆದಿದೆ.

ಹನೂರು ಕ್ಷೇತ್ರದ ಚುನಾವಣಾ ಸಿಬ್ಬಂದಿಗೆ ಆಯೋಜಿಸಿದ್ದ ತರಬೇತಿಯಲ್ಲಿ ಭಾಗವಹಿಸಿದ್ದ ಖಜಾನೆ ಸಿಬ್ಬಂದಿ ಜಗದೀಶ (40) ಮೃತಪಟ್ಟವರು. ತರಬೇತಿಗೆ ಹಾಜರಾಗಿದ್ದ ಜಗದೀಶ್, ಬೆಳಗ್ಗೆಯೇ ಮೆಟ್ಟಿಲು ಹತ್ತುವಾಗ ಜಾರಿ ಬಿದ್ದು ಮೃತಪಟ್ಟಿದ್ದಾರೆ ಎನ್ನಲಾಗಿತ್ತು. ಆದರೆ ಸಂಜೆಯ ಹೊತ್ತಿಗೆ ಅವರು ಬದುಕಿದ್ದಾರೆ ಎಂದು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿನ ವೈದ್ಯರು, ವ್ಯಕ್ತಿ ಮೃತಪಟ್ಟಿರುವುದನ್ನು ದೃಢಪಡಿಸಿದ್ದಾರೆ.

ಘಟನೆ ವಿವರ: ಪಟ್ಟಣದ ವಿವೇಕಾನಂದ ಶಾಲೆಯಲ್ಲಿ ಮಂಗಳವಾರ ಎಆರ್‌ಓ ಹಾಗೂ ಪಿಆರ್‌ಓಗಳಿಗೆ ಚುನಾವಣಾ ತರಬೇತಿ ಏರ್ಪಡಿಸಲಾಗಿತ್ತು. ಖಜಾನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಗದೀಶ್ ಅವರೂ ಬಂದಿದ್ದರು. ಮಂಗಳವಾರ ಬೆಳಗ್ಗೆ 10 ಗಂಟೆ ಸಮಯದಲ್ಲಿ ಮೆಟ್ಟಿಲು ಹತ್ತುತ್ತಿದ್ದಾಗ ಕುಸಿದು ಬಿದ್ದು, ಅವರ ಗಲ್ಲ ಹಾಗೂ ತಲೆಯ ಹಿಂಭಾಗಕ್ಕೆ ಗಾಯವಾಗಿತ್ತು. ತೀವ್ರ ರಕ್ತಸ್ರಾವವಾಗಿದ್ದರಿಂದ ಜೊತೆಯಲ್ಲಿದ್ದವರು ಕೂಡಲೇ ಸಮೀಪದ ಹೋಲಿಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆದರೆ ಆಸ್ಪತ್ರೆ ವೈದ್ಯರು ಪರೀಕ್ಷಿಸಿ, ದಾರಿಮಧ್ಯೆಯೇ ಮೃತಪಟ್ಟಿರುವುದಾಗಿ ತಿಳಿಸಿದ್ದರು ಎನ್ನಲಾಗಿದೆ.

ತರಬೇತಿ ಸ್ಥಳಕ್ಕೆ ತೆರಳುತ್ತಿದ್ದ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅವರು ವಿಷಯ ತಿಳಿದು ಆಸ್ಪತ್ರೆಗೆ ದೌಡಾಯಿಸಿದರು. ಅಲ್ಲಿ ನಿಸ್ತೇಜವಾಗಿ ಮಲಗಿದ್ದ ಜಗದೀಶ್ ಅವರನ್ನು ನೋಡಿ, ಅಧಿಕಾರಿಗಳು ಹಾಗೂ ವೈದ್ಯಕೀಯ ಸಿಬ್ಬಂದಿಯಿಂದ ಮಾಹಿತಿ ಪಡೆದಿದ್ದರು.

ಮಧ್ಯಾಹ್ನ ಹೋಲಿಕ್ರಾಸ್ ಆಸ್ಪತ್ರೆಯಿಂದ ಮರಣೋತ್ತರ ಪರೀಕ್ಷೆಗೆಂದು ಹನೂರಿನ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತಂದು ಶವಾಗಾರದಲ್ಲಿ ದೇಹವನ್ನು ಇಡಲಾಗಿತ್ತು. ಆ ವೇಳೆ ಜಗದೀಶ್ ಅವರ ತಾಯಿ ಕೈಯನ್ನು ಮುಟ್ಟಿದಾಗ, ಜಗದೀಶ್ ಕೈಕಾಲು ಅಲ್ಲಾಡಿಸಿದ್ದು, ಕೂಡಲೇ ವೈದ್ಯರ ಗಮನಕ್ಕೆ ತರಲಾಗಿತ್ತು. ನಂತರ ತಾಲೂಕಿನ ಪ್ರಭಾರ ವೈದ್ಯಾಧಿಕಾರಿ ಡಾ.ಪ್ರಕಾಶ್, ನಾಡಿಮಿಡಿತವನ್ನು ಪರಿಶೀಲಿಸಿದಾಗ ವ್ಯಕ್ತಿಯು ಬದುಕಿರುವುದು ಗೊತ್ತಾಯಿತು. ಕೂಡಲೇ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕಳುಹಿಸಲಾಯಿತು ಎನ್ನಲಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವಿಶ್ವೇಶ್ವರಯ್ಯ, ಹೋಲಿಕ್ರಾಸ್ ಆಸ್ಪತ್ರೆಯಲ್ಲಿ ಇಸಿಜಿ ಮಾಡಿದಾಗ ಅದು ಫ್ಲ್ಯಾಟ್ ಬಂದಿದ್ದಲ್ಲದೆ ನಾಡಿ ಮಿಡಿತವೂ ಇರಲಿಲ್ಲ ಎಂದು ವೈದ್ಯರು ತಿಳಿಸಿದ ಬಳಿಕವೇ ಮೃತಪಟ್ಟಿದ್ದಾರೆ ಎಂದು ಘೋಷಿಸಿದ್ದರು. ಸಂಜೆ ಹೊತ್ತಿಗೆ ನಾಡಿಮಿಡಿತ ಇದೆ ಎಂದು ತಾಲೂಕು ವೈದ್ಯಾಧಿಕಾರಿ ಹೇಳಿದ್ದರು. ಮೈಸೂರಿನ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಮಾರ್ಗ ಮಧ್ಯೆಯೇ ಜಗದೀಶ್ ಮೃತಪಟ್ಟಿದ್ದಾರೆ ಎಂದು ಅಲ್ಲಿನ ವೈದ್ಯರು ಘೋಷಿಸಿದ್ದಾರೆ ಎಂದು ತಿಳಿಸಿದ್ದಾರೆ.

> “ಜಗದೀಶ್ ಅವರು ಲೋ ಬಿಪಿಯಿಂದ ಬಳಲುತ್ತಿದ್ದರು ಎನ್ನಲಾಗಿದೆ. ಇಂದು ತರಬೇತಿಗೆ ಬಂದಿದ್ದಾಗ ಕುಸಿದು ಬಿದ್ದು ಅವರ ಗಲ್ಲಕ್ಕೆ ಪೆಟ್ಟಾಗಿತ್ತು. ಜೊತೆಯಲ್ಲಿದ್ದವರು ಕೂಡಲೇ ಹೋಲಿಕ್ರಾಸ್ ಆಸ್ಪತ್ರೆಗೆ ದಾಖಲಿಸಿದ್ದರು. ಇಸಿಜಿ ಇನ್ನಿತರ ಪರೀಕ್ಷೆ ನಡೆಸಿದ ವೈದ್ಯರು, ಜಗದೀಶ್ ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ. ನಾನೂ ಕೂಡ ಆಸ್ಪತ್ರೆಗೆ ಭೇಟಿ ನೀಡಿದ್ದೆ. ಅವರ ಸಂಬಂಧಿಕರಿಗೂ ವಿಷಯ ತಿಳಿಸಲಾಗಿತ್ತು. ಅವರ ಕಡೆಯವರು ಮೈಸೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ ಅಲ್ಲಿನ ವೈದ್ಯರೂ ಜಗದೀಶ್ ಮೃತಪಟ್ಟಿರುವುದನ್ನು ಖಚಿತಪಡಿಸಿದ್ದಾರೆ.
> –ಡಿ.ಎಸ್.ರಮೇಶ್, ಜಿಲ್ಲಾಧಿಕಾರಿ, ಚಾಮರಾಜನಗರ

ಅಬ್ದುಲ್ ಖಾದರ್ ಶಾಹೀದ್ ಎನ್‌ಆರ್ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ

ಇಂದು ನಾಮಪತ್ರ ಸಲ್ಲಿಸಲು ನಿರ್ಧಾರ



ಮೈಸೂರು, ಏ.18(ಜಿಎ)– ನರಸಿಂಹರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಘೋಷಣೆಯಾಗಿದ್ದು, ವರ್ಷಗಳ ಹಿಂದೆ ಕಾಂಗ್ರೆಸ್‌ನಿಂದ ಜೆಡಿಎಸ್‌ಗೆ ಸೇರ್ಪಡೆಯಾಗಿದ್ದ ಅಬ್ದುಲ್ ಖಾದರ್ ಶಾಹೀದ್ ತೆನೆ ಹೊತ್ತ ಮಹಿಳೆ ಕೈ ಹಿಡಿದಿದ್ದಾರೆ.

ಇಂದು ಮಧ್ಯಾಹ್ನ ಬೆಂಗಳೂರಿನ ಜೆಡಿಎಸ್ ಕಚೇರಿಯಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರ ಸ್ವಾಮಿ ಅವರು ಅಬ್ದುಲ್ ಖಾದರ್ ಶಾಹೀದ್‌ಗೆ ಬಿ ಫಾರಂ ನೀಡಿದ್ದು, ನಾಳೆ ಮೈಸೂರಿನಲ್ಲಿ ಮುಖಂಡರ ಸಭೆ ನಡೆಸಿ ನಂತರ ನಾಮಪತ್ರ ಸಲ್ಲಿಸಲು ಶಾಹೀದ್ ನಿರ್ಧರಿಸಿದ್ದಾರೆ.

ಬಿ ಫಾರಂ ಪಡೆದ ನಂತರ ಮೈಸೂರಿಗೆ ಆಗಮಿಸಿದ ಶಾಹೀದ್ ನಗರದ ಕೃಷ್ಣವಿಲಾಸ್ ರಸ್ತೆಯಲ್ಲಿರುವ ಹಜರತ್ ಇಮಾಮ್ ಶಾ ವಲಿ ದರ್ಗಾಗೆ ಭೇಟಿ ನೀಡಿ, ಅಲ್ಲಿ ಬಿ ಫಾರಂ ಇಟ್ಟು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಹಾಲಿ ಶಾಸಕ ತನ್ವೀರ್ ಸೇಠ್ ಆಪ್ತರಾಗಿದ್ದ ಅಬ್ದುಲ್ ಖಾದರ್ ಶಾಹೀದ್ ಅವರನ್ನು ಕಳೆದ ವರ್ಷ ಕಾಂಗ್ರೆಸ್ ಪಕ್ಷದಿಂದ ಉಚ್ಛಾಟನೆ ಮಾಡಲಾಗಿತ್ತು. ನಂತರ ಅವರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡಿದ್ದರು. ನರಸಿಂಹರಾಜ ಕ್ಷೇತ್ರದಲ್ಲಿ ಈ ಬಾರಿ ಗುರು ಶಿಷ್ಯರ ನಡುವೆ ಸ್ಪರ್ಧೆ ಏರ್ಪಡಲಿದ್ದು, ತೀವ್ರ ಕುತೂಹಲ ಕೆರಳಿಸಿದೆ.

ಈ ಕುರಿತು ಮಾತನಾಡಿದ ಶಾಹೀದ್, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರ ಸ್ವಾಮಿ, ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್ ಹಾಗೂ ರಾಜ್ಯಾಧ್ಯಕ್ಷರಾದ ಸಿ.ಎಂ.ಇಬ್ರಾಹಿಂ ಅವರ ಆಶೀರ್ವಾದದಿಂದ ಈ ಬಾರಿ ನರಸಿಂಹರಾಜ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಲು ಬಿ ಫಾರಂ ದೊರೆತಿದೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾನು ಕಾಂಗ್ರೆಸ್ ಪಕ್ಷದ ಬ್ಲಾಕ್ ಅಧ್ಯಕ್ಷನಾಗಿ ಹಗಲು ರಾತ್ರಿ ಶ್ರಮಿಸಿದೆ. ಆದರೆ, ಪಕ್ಷವೂ ಅದರ ಪ್ರತಿಫಲವಾಗಿ ಪಕ್ಷದಿಂದ ವಜಾ ಮಾಡಿತು. ಆದರೆ, ಇಂದು ಜೆಡಿಎಸ್ ಪಕ್ಷ ಒಬ್ಬ ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ನೀಡಿದೆ. ಒಂದು ಕಡೆ ಕೆಲಸ ಮಾಡಿದ್ದಕ್ಕೆ, ಮತ್ತೊಂದು ಕಡೆ ಕೂಲಿ ಸಿಕ್ಕಿದೆ. ಕ್ಷೇತ್ರದಲ್ಲಿ ಎಲ್ಲಾ ವರ್ಗದವರ ನಿರಂತರ ಸಂಪರ್ಕದಲ್ಲಿದ್ದೇನೆ. ಇಲ್ಲಿನ ಜನರು ಬದಲಾವಣೆಯನ್ನು ಬಯಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಬಡ ಕುಟುಂಬದಿಂದ ಬಂದಿರುವುದರಿಂದ ಕ್ಷೇತ್ರದ ಜನತೆ ಆಶೀರ್ವಾದ ಮಾಡುತ್ತಾರೆ ಎಂಬ ಭರವಸೆ ಇದೆ ಎಂದು ತಿಳಿಸಿದರು. ಕ್ಷೇತ್ರದ ಎಲ್ಲಾ ಪಾಲಿಕೆ ಸದಸ್ಯರು, ಪಕ್ಷದ ಮುಖಂಡರು, ಮಹಿಳಾ ವಿಭಾಗದ ಸದಸ್ಯರು ಹಾಗೂ ಎಲ್ಲಾ ಧರ್ಮದ ಮುಖಂಡರೊಟ್ಟಿಗೆ ನಾಳೆ(ಏ.19) ಸಭೆ ನಡೆಸಿ, ಅವರ ಮಾರ್ಗದರ್ಶನ ಪಡೆದು ನಾಮಪತ್ರ ಸಲ್ಲಿಸುತ್ತೇನೆ. ಪ್ರಚಾರಕ್ಕೆ ಸ್ಥಳೀಯ ಮುಖಂಡರು, ಕಾರ್ಯಕರ್ತರು ಮತ್ತು ಕೊರೊನಾ ಸಂದರ್ಭದಲ್ಲಿ ದುಡಿದವರು ಭಾಗವಹಿಸಲಿದ್ದಾರೆ ಎಂದರು.

ಸೋಮಣ್ಣಗೆ ಜನ ತರಾಟೆ

ಮೈಸೂರು, ಏ.18–ವರುಣಾ ಕ್ಷೇತ್ರದಲ್ಲಿ ಪ್ರಚಾರದ ವೇಳೆ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಹಾಗೂ ಸಂಸದ ಪ್ರತಾಪ್‌ಸಿಂಹಗೆ ಸಾರ್ವಜನಿಕರು ತರಾಟೆ ತೆಗೆದುಕೊಂಡ ಘಟನೆ ನಡೆಯಿತು. ವರುಣಾ ಕ್ಷೇತ್ರದ ಲಲಿತಾದ್ರಿಪುರದಲ್ಲಿ ವಿ.ಸೋಮಣ್ಣ ಹಾಗೂ ಪ್ರತಾಪ್ ಸಿಂಹ ಮಂಗಳವಾರ ಮತಯಾಚಿಸುತ್ತಿದ್ದಾಗ ತಾವು ಯಾವ ಅಭಿವೃದ್ಧಿ ಮಾಡಿದ್ದೀರಿ. ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಯಾವ ಕೊಡುಗೆ ಕೊಟ್ಟಿದ್ದೀರಿ. ಈಗ ಮತ ಕೇಳಲು ಬಂದಿದ್ದೀರಾ ಎಂದು ಗ್ರಾಮಸ್ಥರು ಪ್ರಶ್ನಿಸಿದ್ದಾರೆ. ಇದರಿಂದ ಇಬ್ಬರೂ ಒಂದು ಕ್ಷಣ ತಬ್ಬಿಬ್ಬಾಗಿದ್ದಲ್ಲದೆ, ವಿಡಿಯೋ ಮಾಡುತ್ತಿದ್ದ ವ್ಯಕ್ತಿಯನ್ನೂ ತಡೆದರು.

In the Court of the Principal Civil Judge (Sr. Div.) At Mysuru
Com. O.S No: 1078 /2021

Plaintiff: Canara Bank
A Corporate Body, constituted under The Banking Companies (Acquisition and Transfer of Under taking) Act, 1970 having its head office at 112, JC road, Bangalore-560002, and interalia having a branch at Yelwal, Mysore, Represented by its Chief Manager

V/s

Defendants: Sri. Mahadeva @ Madegowda S/o Sri Cheenanake gowda, aged 55 years, Residing at Chikkana Halli, Ananduru Post, Yelwal Hobli, Hunsur Taluk.

Form No. 1-A
Summons to appear in person
Order 5 rule 20

Whereas the plaintiff bank has instituted suit against you for recovery of amount of Rs. 9,75,881.00(Rupees nine lakhs seventy five thousand eight hundred and eighty one) you are hereby summoned to appear in this court in person or by a pleader on the 23rd day of month May of 2023 at 11 'o' clock to answer the claim, you are directed to produce on that day all the documents upon which you intend to rely in support of defense. Failing which the suit will be disposed of exparte.

Given under my hand and the seal of the court on this 11th day of April 2023.

By the order of the court
Chief administrative officer
Principal Senior Civil Judge, Mysuru

Advocate for Plaintiff
S. Suresh B.B.M.; L.L.B.
Advocate, No. 974, 7th main, 3rd stage Gokulam, Mysore - 2

ಐದನೇ ಪುಟದಿಂದ

ಎಂತಹ ನಾಯಕರ ಬುಡವನ್ನೇ ಕತ್ತರಿಸಿ ಹಾಕ್ತಾರೆ...

ತೆಗೆದುಕೊಳ್ಳಲು ತಮ್ಮ ಬೆಂಬಲಿತ ಹೊಸ ಮುಖಗಳನ್ನು ಪರಿಚಯಿಸುವ ಕೆಲಸ ಮಾಡಿದ್ದಾರೆ. ಇದರಿಂದ ಚುನಾವಣೆಯಲ್ಲಿ ಬಿಜೆಪಿಯ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂದು ನಿನ್ನೆಯಷ್ಟೇ ಕಾಂಗ್ರೆಸ್ ಸೇರಿದ ಶೆಟ್ಟರ್, ಸಂತೋಷ್ ವಿರುದ್ಧ ಹರಿಹಾಯ್ದರು. ಸಂತೋಷ್ ಸಲಹೆಯನ್ನೇ ವರಿಷ್ಠರು ಮಾನ್ಯ ಮಾಡಿ, ರಾಜ್ಯ ಬಿಜೆಪಿ ಹಿರಿಯರನ್ನು ಮೂಲೆಗುಂಪು ಮಾಡುವುದರಿಂದ, ಯಾವ ರೀತಿ ನಡೆದುಕೊಳ್ಳುತ್ತಾರೆ ಎಂಬುದಕ್ಕೆ ನಾನೇ ಸಾಕ್ಷಿ. ಧರ್ಮೇಂದ್ರ ಪ್ರಧಾನ್ ನನಗೆ ಫೋನ್ ಮಾಡಿ, ನಿಮಗೆ ಟಿಕೆಟ್ ಕೊಡಲ್ಲ ಅಂತಾರೆ. ಒಂದು ಫಾರ್ಮೆಟ್ ಕಳಿಸ್ತೇವೆ. ಅದಕ್ಕೆ ಸಹಿ ಹಾಕಿ ಕಳಿಸಿ ಅಂದರು. ಚಿಕ್ಕ ಹುಡುಗನಿಗೆ ಹೇಳಿ ದಂತೆ ಟಿಕೆಟ್ ಇಲ್ಲ ಎಂದು ಹೇಳಿ ನನಗೆ ಅಪಮಾನ ಮಾಡಿದರು. ಓವರ್‌ಡಿಯೆಂಟ್ ಇದ್ದಾರೆ. ಸುಮ್ಮನೆ ಒಪ್ಪಿಕೊಳ್ತಾರೆ ಅಂತಾ ಲೆಕ್ಕ ಹಾಕಿದರು. ಇದು ಟಿಕೆಟ್ ಪ್ರಶ್ನೆಯಲ್ಲ. ನನ್ನ ಮರ್ಯಾದೆಯ ಪ್ರಶ್ನೆ. ಪಕ್ಷ ಕಟ್ಟಿದವರನ್ನು ಒದ್ದು ಹೊರಗೆ ಹಾಕೋಣ ಅಂದ್ರೇನು ಎಂದು ಶೆಟ್ಟರ್ ಪ್ರಶ್ನಿಸಿದರು. ಒಂದೊಂದೇ ಸೀಟನ್ನು ಬಿಜೆಪಿ ಕಳೆದುಕೊಳ್ಳುತ್ತಿದೆ. ಬಿಜೆಪಿ ಅಧಿಕಾರಕ್ಕೆ ಬರಬೇಕೋ ಬೇಡವೋ ಅನ್ನೋ ಪ್ರಶ್ನೆ ಕಾಡ್ತಾ ಇದೆ. ಇದೇ ಬಿ.ಎಲ್.ಸಂತೋಷ್ ಅವರನ್ನು ಬೇರೆ ರಾಜ್ಯಗಳಲ್ಲಿ ಉಸ್ತುವಾರಿ ಮಾಡಿದರು. ಎಲ್ಲಿಯೂ ಬಿಜೆಪಿ ನಿರೀಕ್ಷಿತ ಸೀಟು ಗೆಲ್ಲಲಿಲ್ಲ. ಇಷ್ಟೆಲ್ಲಾ ಆದರೂ ಕರ್ನಾಟಕದ ಉಸ್ತುವಾರಿ ನೀಡಿದ್ದಾರೆ. ಪಕ್ಷ ಹಾಳು ಮಾಡಲಿಕ್ಕೆಂದೇ ಈ ರೀತಿ ಮಾಡಿದ್ದಾರೆ ಎಂದರು. ಬಿಜೆಪಿಯಲ್ಲಿ ವ್ಯಕ್ತಿ ಮುಖ್ಯ ಅಲ್ಲ, ಪಕ್ಷ ಮುಖ್ಯ ಅಂತಾರೆ. ಆದರೆ ಇಲ್ಲಿ ಒಬ್ಬನೇ ವ್ಯಕ್ತಿ ಮುಖ್ಯವಾಗಿದ್ದಾನೆ. ಬಿಜೆಪಿ ಕಚೇರಿಯನ್ನು ಕಪಿಮುಷ್ಠಿಯಲ್ಲಿಟ್ಟುಕೊಂಡಿದ್ದಾನೆ. ನಿರ್ಮಲ್‌ಕುಮಾರ್ ಸುರಾನಾ ಈಗ ಎಂಎಲ್‌ಸಿ. ಯಡಿಯೂರಪ್ಪ ಸಿಎಂ ಆದ ಮೇಲೆ ಆತನನ್ನು ಕಚೇರಿಯೊಳಗೆ ಬಿಟ್ಟುಕೊಂಡಿದ್ದಾರೆ. ಪ್ರತಿ ಜಿಲ್ಲೆಯಲ್ಲಿಯೂ ಗುಂಪುಗಾರಿಕೆ ಮಾಡಿದ್ದಾನೆ. ರಾಮದಾಸ್, ಸಂತೋಷ್ ಅಪ್ಪನಲ್ಲ, ಹಾಗಾಗಿ ಆತನಿಗೆ ಟಿಕೆಟ್ ಸಿಗಲಿಲ್ಲ. ಶ್ರೀವತ್ಸ ಅನ್ನೋರಿಗೆ ಟಿಕೆಟ್ ಕೊಟ್ಟರು. ಅವರು ಗೆದ್ದು ಬರ್ತಾರಾ? ಬೇರೆ ಕ್ಷೇತ್ರಗಳಲ್ಲಿಯೂ ಇದೇ ರೀತಿ ಮಾಡಿದ್ದಾರೆ ಎಂದು ಬಿ.ಎಲ್.ಸಂತೋಷ್ ವಿರುದ್ಧ ಏಕವಚನದಲ್ಲೇ ಶೆಟ್ಟರ್ ಹರಿಹಾಯ್ದರು.

ಇಡೀ ರಾಜ್ಯದಲ್ಲಿ ಬಿಜೆಪಿ ಕೇವಲ ಕಮ್ಯುನಿಟಿಯಲ್ಲಿದೆ. ಅಣ್ಣಾಮಲೈ ವಿಆರ್‌ಎಸ್ ತಗೊಂಡ ನಂತರ ತಮಿಳುನಾಡಿನಲ್ಲಿ ರಾಜ್ಯಾಧ್ಯಕ್ಷರನ್ನಾಗಿ ಮಾಡಿದರು. ಅಲ್ಲೇನು ಉತ್ತಮ ಫಲಿತಾಂಶ ಬರಲಿಲ್ಲ. ಒಂದೂ ಚುನಾವಣೆಯಲ್ಲಿ ಗೆಲ್ಲಲಾಗದವನ್ನು ಚುನಾವಣಾ ಉಸ್ತುವಾರಿ ಮಾಡಿದ್ದಾರೆ. ಹಿರಿಯ ನಾಯಕರು ನಾವು, ಅವರ ಎದುರು ಸಭೆಗಳಲ್ಲಿ ಹಿಂದಿನ ಸಾಲಿನಲ್ಲಿ ಕೂರಬೇಕು ಎಂದು ಅಸಮಾಧಾನ ಹೊರ ಹಾಕಿದರು.

ಬಿಎಲ್ ಸಂತೋಷ್ ಪರ ಯಡಿಯೂರಪ್ಪ ಬ್ಯಾಟಿಂಗ್

ವಿಧಾನಸಭೆ ಚುನಾವಣೆಗೆ ಬಿಜೆಪಿ ಟಿಕೆಟ್ ಕೈತಪ್ಪಿದ್ದಕ್ಕೆ ಬಿಎಲ್ ಸಂತೋಷ್ ಕಾರಣ ಎಂದು ಜಗದೀಶ್ ಶೆಟ್ಟರ್ ದೂಷಿಸಿದ್ದು ಸರಿಯಲ್ಲ ಎಂದು ಬಿ.ಎಸ್. ಯಡಿಯೂರಪ್ಪ ಪ್ರತಿಕ್ರಿಯಿಸಿದ್ದಾರೆ. ಜಗದೀಶ್ ಶೆಟ್ಟರ್ ಬಿಜೆಪಿ ತೊರೆದಿರುವುದರಿಂದ ಪಕ್ಷದ ಮೇಲೆ ಯಾವುದೇ ಪರಿಣಾಮವಾಗದು. ಟಿಕೆಟ್ ಹಂಚಿಕೆ ವಿಷಯದಲ್ಲಿ ಬಿಎಲ್ ಸಂತೋಷ್ ನಿರ್ಧಾರ ಏನೂ ಆಗಿಲ್ಲ. ಇದು ಒಟ್ಟಾರೆಯಾಗಿ ಪಕ್ಷದ ನಿರ್ಣಯ ಎಂದು ಹೇಳಿದ್ದಾರೆ. ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ ಹುಬ್ಬಳ್ಳಿಯಲ್ಲಿರುತ್ತಾರೆ. ನಾನು ಕೂಡ ಅಲ್ಲಿಗೆ ಹೋಗುತ್ತೇನೆ. ಶೆಟ್ಟರ್ ಬಗ್ಗೆ ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಯಡಿಯೂರಪ್ಪ ಹೇಳಿದರು.

ಮಂಡ್ಯದಲ್ಲಿ ನಾನು ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ

ಪ್ರಬಲ ಅಭ್ಯರ್ಥಿಗಳು ಇದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಅಲ್ಲಿ ಸ್ಪರ್ಧಿಸುವುದಿಲ್ಲ ಎಂದರು. ಕಾರ್ಯ ಕರ್ತರ ಒತ್ತಡ ಇರುವುದು ನಿಜ. ಆದರೆ ಮಂಡ್ಯದಿಂದ ನಾನು ಸ್ಪರ್ಧೆ ಮಾಡುವುದಕ್ಕೆ ಆಗಲ್ಲ. ನಾನು ಚನ್ನಪಟ್ಟಣದಿಂದ ಮಾತ್ರ ಸ್ಪರ್ಧೆ ಮಾಡುತ್ತಿದ್ದೇನೆ. ಚನ್ನಪಟ್ಟಣ ಬಿಟ್ಟು ಬೇರೆಲ್ಲೂ ನಾನು ಹೋಗಲ್ಲ. ಮಂಡ್ಯದಲ್ಲಿ ಅಭ್ಯರ್ಥಿಗಳು ಇದ್ದಾರೆ. ಈ ಬಗ್ಗೆ ಕೂತು ತೀರ್ಮಾನ ಮಾಡುತ್ತೇವೆ. ನಾಳೆ ಮೂರನೇ ಪಟ್ಟಿ ಬಿಡುಗಡೆ ಆಗಲಿದೆ ಎಂದು ಹೇಳಿದರು.

ನಾನೂ ಬಿಜೆಪಿ ಬಿಡಲ್ಲ

ದೊರಕದಿದ್ದರೂ ದೇಶದ 10 ರಾಜ್ಯಗಳಲ್ಲಿ ಸಂಚರಿಸಿ, ಕೇಂದ್ರ ಸರ್ಕಾರ ಯೋಜನೆಗಳ ಅನುಷ್ಠಾನ ಕುರಿತಾದ 560 ಪುಟಗಳ 'ವಿಷನ್ ಡಾಕ್ಯುಮೆಂಟ್' ಪುಸ್ತಕವನ್ನು ಇಂಗ್ಲಿಷ್‌ನಲ್ಲಿ ನಮೂದಿಸಿ ನೆಚ್ಚಿನ ಪ್ರಧಾನಿಗಳಿಗೆ ಕೊಟ್ಟೆ ಎಂಬ ಆನಂದವಿದೆ. ಅಷ್ಟೂ ಮಾತ್ರವಲ್ಲದೆ ಮೋದಿ ಯುಗ ಉತ್ಸವದಲ್ಲಿ ಹಲವು ಯೋಜನೆಗಳ ಅನುಷ್ಠಾನ ಮಾಡಿದೆ ಎಂಬ ತೃಪ್ತಿಯೂ ಇದೆ ಎಂದರು. ದೇಶದ ಯಾವುದೇ ಶಾಸಕನಿಗೂ ಸಿಗದ ಪ್ರಧಾನಿ ನರೇಂದ್ರ ಮೋದಿಯವರ ಪ್ರೀತಿ-ವಿಶ್ವಾಸ ನನ್ನ ಮೇಲಿದೆ. ಅವರ ಹಾಗೂ ನನ್ನ ನಡುವೆ 25 ವರ್ಷಗಳ ಬಾಂಧವ್ಯವಿದೆ. ಆದ್ದರಿಂದ ನಾನು ನನ್ನ ತಂದೆ ಸ್ಥಾನದಲ್ಲಿರುವ ಮೋದಿ ಪರವಾಗಿದ್ದೇನೆ. ನಾನೊಬ್ಬ ದೇಶದ ಕೆಲಸ ಮಾಡುವ ವ್ಯಕ್ತಿ. ನನ್ನ ತಂದೆಯೂ ಸೇನೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ಬಾರ್ಡರ್‌ನಲ್ಲಿದ್ದರೆ, ನಾನು ಫೀಲ್ಡ್‌ನಲ್ಲಿದ್ದೆ. ಆದರೂ ಟಿಕೆಟ್ ದೊರೆಯದಿದ್ದಾಗ ಸಹಜವಾಗಿ ಆಗುವ ನೋವನ್ನು ನಾನೇ ನುಂಗಿಕೊಂಡು ಈ ನಿರ್ಧಾರಕ್ಕೆ ಬಂದಿದ್ದೇನೆ ಎಂದು ತಿಳಿಸಿದರು.

ಮಾದರಿಯಾಗಬೇಕು: ವೈಯಕ್ತಿಕವಾಗಿ ನನಗೆ ಎಷ್ಟೇ ನಷ್ಟವಾದರೂ ದೇಶಕ್ಕೆ ನಷ್ಟವಾಗಬಾರದು. ಭವಿಷ್ಯದಲ್ಲಿ ಬರುವ ಯುವಕರು ಇಂತಹದ್ದೆ ಕಷ್ಟಗಳು ಬಂದಾಗ ಹೇಗೆ ನಡೆದುಕೊಳ್ಳಬೇಕು ಎಂಬುದಕ್ಕೆ ನಾನೊಬ್ಬ ಮಾದರಿಯಾಗಬೇಕು ಎಂದು ಯೋಚನೆ ಮಾಡಿದ್ದೇನೆ. ಏಕೆಂದರೆ ಮೈಸೂರು ಜಿಲ್ಲೆಯಲ್ಲಿ ಕಳೆದ 25 ವರ್ಷಗಳಲ್ಲಿ ಬಿಜೆಪಿಯಿಂದ 11 ಜನ ಶಾಸಕರು ಗೆದ್ದು ಬಂದರು. ಅವರಲ್ಲಿ 10 ಮಂದಿ ಪಕ್ಷ ಬಿಟ್ಟು ಹೋದರೂ ನಾನು ಬಿಟ್ಟಿಲ್ಲ. ಒಬ್ಬ ರಾಮದಾಸ್ ಹೋದರೆ, ಇನ್ನೂ ನೂರಾರು ಮಂದಿ ರಾಮದಾಸ್ ಹುಟ್ಟುತ್ತಾರೆ ಎಂಬುದು ಜಗತ್ತಿನ ನಿಯಮವಾಗಿದೆ. ಆದ್ದರಿಂದ ಯುವಕರನ್ನು ಬೆಳೆಸುವ ಜವಾಬ್ದಾರಿಯೂ ನಮ್ಮ ಮೇಲಿರಲಿದೆ. ನನ್ನ ಋಣ ಇಷ್ಟೇ ಇತ್ತೇನೋ.. ಅನ್ನಿಸುತ್ತಿದೆ ಎಂದರು.

ಈ ಬಾರಿ ನಾನು 50 ಸಾವಿರ ಮತಗಳಿಂದ ಗೆಲ್ಲುವ ವಿಶ್ವಾಸವಿತ್ತು

1993 ಫೆ.5 ರಂದು 1,726 ಮಂದಿ ಯುವಕರ ಜೊತೆಯಲ್ಲಿ ಬಿಜೆಪಿ ಪಕ್ಷಕ್ಕೆ ಸೇರಿ, ಮೈಸೂರು ಮಹಾನಗರದ ಯುವ ಮೋರ್ಚಾ ಅಧ್ಯಕ್ಷನಾಗಿ ಅದೇ ದಿವಸ ಜವಾಬ್ದಾರಿಯನ್ನು ತೆಗೆದುಕೊಂಡು 1996ರಿಂದ 2000ನೇ ಇಸವಿಯವರೆಗೆ ನಿರಂತರವಾಗಿ ಕರ್ನಾಟಕ ರಾಜ್ಯದ ಬಿಜೆಪಿ ಯುವಮೋರ್ಚಾ ರಾಜ್ಯಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಹಾಗೆಯೇ 1994, 2004, 2008, 2013 ಮತ್ತು 2018ರ ಚುನಾವಣೆ ವೇಳೆಯೂ ಟಿಕೆಟ್‌ಗಾಗಿ ಸ್ಪರ್ಧೆ ಇತ್ತು. ಕ್ಷೇತ್ರದಲ್ಲಿ 4 ಬಾರಿ ಶಾಸಕನಾಗಿ ಆಯ್ಕೆಯಾಗಿ ಮಂತ್ರಿ ಸ್ಥಾನ ದೊರಕದಿದ್ದರೂ ಸಂಘಟನಾತ್ಮಕವಾಗಿ ಕೆಲಸ ಮಾಡಿದ್ದೇನೆ. ಕೆ.ಆರ್ ಕ್ಷೇತ್ರದಲ್ಲಿ ಸಂಯೋಜಿಸಿದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ರಾಷ್ಟ್ರ ಹಾಗೂ ರಾಜ್ಯ ನಾಯಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದೆಲ್ಲದರ ಪ್ರತಿಫಲವಾಗಿ ಈ ಬಾರಿ 50 ಸಾವಿರ ಮತಗಳ ಅಂತರದಲ್ಲಿ ಗೆಲ್ಲುವ ವಿಶ್ವಾಸವಿತ್ತು. ಪಕ್ಷೇತರವಾಗಿ ಸ್ಪರ್ಧಿಸಿದರೂ ಸುಮಾರು 12-13 ಸಾವಿರ ಮತಗಳ ಅಂತರ ಗೆಲ್ಲುವ ಸಾಧ್ಯತೆ ಇದೆ ಎಂದು ಸರ್ವೆಗಳು ಹೇಳುತ್ತಿದ್ದವು. ಆದರೂ ಪಕ್ಷದ ನಿರ್ಧಾರಕ್ಕೆ ಬದ್ಧನಾಗಿದ್ದೇನೆ ಎಂದರು.

ಪೂರ್ಣಗೊಳಿಸಲು ಮನವಿ: ರಾಜ್ಯದಲ್ಲೇ ಕೆ.ಆರ್ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿಸುವ ನಿಟ್ಟಿನಲ್ಲಿ 120 ಪಾರ್ಕ್‌ಗಳ ಅಭಿವೃದ್ಧಿಗೆ ಚಾಲನೆ ನೀಡಿದ್ದು, ಶೇ.60ರಷ್ಟು ಕೆಲಸ ಮುಗಿದಿದೆ. ಮನೆಗಳನ್ನು ಕಟ್ಟಿಸಿ ಕೊಡುವುದರಲ್ಲಿ ಅರ್ಧ ಕೆಲಸವಾಗಿದೆ. ಸೇಫ್ಟಿ ರೋಡ್ ಪರಿಕಲ್ಪನೆಯಲ್ಲಿ ಕ್ಷೇತ್ರ ವ್ಯಾಪ್ತಿಯ 482 ಕಿ.ಮೀ ರಸ್ತೆ ಅಭಿವೃದ್ಧಿ ಕಾರ್ಯದಲ್ಲಿ 400 ಕಿ.ಮೀ ಅಭಿವೃದ್ಧಿಯಾಗಿದ್ದು, 82 ಕಿ.ಮೀ ಬಾಕಿ ಇದೆ. ಬೋರ್‌ವೆಲ್ ಮುಕ್ತ ಕ್ಷೇತ್ರ ಅಭಿಯಾನದಲ್ಲಿ 450 ಬೋರ್‌ವೆಲ್‌ಗಳನ್ನು ತೆಗೆದಿದ್ದು, ಉಳಿದ 50 ಬೋರ್‌ವೆಲ್ ತೆರವಾಗಬೇಕಿದೆ. 6 ಕೋಟಿ ರೂ. ವೆಚ್ಚದಲ್ಲಿ ಮಕ್ಕಳ ಆಟದ ಮೈದಾನ ಅಭಿವೃದ್ಧಿ ಪ್ರಗತಿಯಲ್ಲಿದೆ. ಕಸ ವಿಲೇವಾರಿ ಘಟಕ ಅಭಿವೃದ್ಧಿ ಸೇರಿದಂತೆ ಹತ್ತು-ಹಲವು ಕೆಲಸಗಳನ್ನು ಮಾಡಲಾಗಿದೆ. ಇದೆಲ್ಲವನ್ನೂ ದಾಖಲಿಸಿದ ಪುಸ್ತಕವನ್ನು ಕ್ಷೇತ್ರದ ಮನೆ ಮನಗೆ ಹಂಚಲಾಗಿದೆ. ಅದಾಗ್ಯೂ ಮುಂದಿನ ದಿನಗಳಲ್ಲಿ ಯಾರೇ ಕ್ಷೇತ್ರದ ಶಾಸಕರಾದರೂ ಸಾರ್ವಜನಿಕವಾಗಿ ಆರಂಭವಾಗಿರುವ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪೂರ್ಣಗೊಳಿಸುವಂತೆ ಮನವಿ ಮಾಡಿದರು.

ಪಕ್ಷದ ವಿರುದ್ಧ ಮಾತನಾಡಲಿಲ್ಲ: 2008ರಲ್ಲಿ ಮಂತ್ರಿ ಸ್ಥಾನ ಕೊಟ್ಟು ರಾತ್ರಿ 2.30ರಲ್ಲಿ ಕಿತ್ತಾಕಿದಾಗಲೂ ಕೂಡ ನಾನು ಪಕ್ಷದ ವಿರುದ್ಧವಾಗಿ ಮಾತನಾಡಲಿಲ್ಲ. ಈ ಬಾರಿ ಸೇರಿ ಮೂರು ಬಾರೀ ಮಂತ್ರಿ ಸ್ಥಾನ ನೀಡದಿದ್ದರೂ ಪಕ್ಷದ ವಿರುದ್ಧವಾಗಿ ನಾನು ಮಾತನಾಡಲಿಲ್ಲ. ಕೊನೆ ಬಾರಿ ಸ್ಪರ್ಧಿಸಿ ಕ್ಷೇತ್ರದಲ್ಲಿ ವಿಶೇಷ ಸೇವಾ ಸಾಧನೆ ಮಾಡಬೇಕು ಎಂದುಕೊಂಡಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ನಾನು ಮಾಡಿದ ಪ್ರಯತ್ನಕ್ಕಿಂತ, ಅವರು ಮಾಡಿದ ಪ್ರಯತ್ನ ಫಲ ನೀಡಿದೆ. ಅಲ್ಲದೆ ನಾನು ಧರ್ಮವನ್ನು ನಂಬಿ ಬದುಕಿದವನು. ಇವತ್ತು ಟಿಕೆಟ್ ಸಿಗದಿದ್ದರೂ ಸಾಮಾನ್ಯ ಕಾರ್ಯಕರ್ತನಾಗಿ ಮುಂದುವರೆಯಬೇಕು. ಪಕ್ಷದ ವಿರುದ್ಧವಾಗಿ ಸ್ಪರ್ಧೆ ಮಾಡಬಾರದು ಎಂಬ ನಿರ್ಣಯ ಮಾಡಿ, ಪಕ್ಷದ ಪ್ರಾಥಮಿಕ ಸ್ಥಾನವನ್ನು ಕೊನೆ ಉಸಿರಿರುವವರೆಗೂ ಇಟ್ಟುಕೊಳ್ಳಬೇಕು ಎಂದುಕೊಂಡಿದ್ದೇನೆ.

ಯೋಗಕ್ಷೇಮ ನಿಧಿ ಸ್ಥಾಪನೆ: ಕ್ಷೇತ್ರದಲ್ಲಿನ ಜನತೆಗಾಗಿ 1 ಕೋಟಿ ರೂ.ಗಳ ಯೋಗಕ್ಷೇಮ ನಿಧಿಯನ್ನು ಸ್ಥಾಪನೆ ಮಾಡಬೇಕು ಎಂದುಕೊಂಡಿದ್ದೇನೆ. ಇದರಿಂದ ಬರುವ ಬಡ್ಡಿ ಹಣದಲ್ಲಿ ಬಡ ಮಕ್ಕಳ ಶಾಲಾ-ಕಾಲೇಜು ಫೀಜ್ ಕಟ್ಟಲು, ಚಿಕಿತ್ಸೆಗಾಗಿ ಬಳಸಿಕೊಳ್ಳುವ ಉದ್ದೇಶವಿದೆ. ಪಕ್ಷವನ್ನು ತಾಯಿ ಎಂದು ಒಪ್ಪಿಕೊಂಡಿದ್ದೇನೆ. ಅದರಂತೆ ಪಕ್ಷದ ಆದೇಶಕ್ಕೆ ಬದ್ಧನಾಗಿದ್ದು, ನನ್ನೆಲ್ಲಾ ಕಾರ್ಯಕರ್ತರು ನನ್ನ ನಿರ್ಧಾರದ ಪರವಾಗಿರುವಂತೆ ಒಪ್ಪಿಸಿದ್ದೇನೆ ಎಂದರು.

> “ಟಿಕೆಟ್ ತಪ್ಪುವ ವಿಚಾರದಲ್ಲಿ ಗುಂಪುಗಾರಿಕೆ ನಡೆದಿದೆ ಎನಿಸಿದರೂ ನಾನು ಹಳೇ ವಿಚಾರವನ್ನು ಮತ್ತೆ ಪೋಸ್ಟ್ ಮಾರ್ಟಂ ಮಾಡಲು ಹೋಗಲ್ಲ. ವಿಚಾರವೊಂದರ ಕುರಿತು ದೆಹಲಿಗೆ ಹೋದಂತಹ ಸಂದರ್ಭದಲ್ಲಿ ಹೊಸ ಪಾಲಿಸಿ ಮಾಡುತ್ತಿದ್ದೇವೆ ಎಂದರು. ಅದರಂತೆ ಆ ಪಾಲಿಸಿಗಳಿಗೆ ಬದ್ಧನಾಗಿರುತ್ತೇನೆ ಎಂದಿದ್ದೆ. ಜೊತೆಗೆ ಆರ್‌ಎಸ್‌ಎಸ್‌ನ ಉನ್ನತ ಸ್ಥಾನದಲ್ಲಿದ್ದವರು ನನ್ನೊಂದಿಗೆ ಮಾತನಾಡಿದ್ದರು. ಇದೇ ನನ್ನ ಕಡೆ ಚುನಾವಣೆಯಂತಲೂ ಹೇಳಿದ್ದೆ. ನಾನು ಪಕ್ಷದ ವರಿಷ್ಠರ ಮನವೊಲಿಸುವಲ್ಲಿ ಸೋತಿದ್ದೇನೆ, ಅವರು ಗೆದ್ದಿದ್ದಾರೆ. ಹಾಗೆಯೇ ನನ್ನ ನಂತರದ ಅಭ್ಯರ್ಥಿ ಯಾರಾಗಬೇಕೆನ್ನುವ ವಿಚಾರದಲಿ ಯಾರ ಹೆಸರನ್ನು ಪ್ರಸ್ತಾಪಿಸಿಲ್ಲ.
>
> -ಎಸ್.ಎ.ರಾಮದಾಸ್, ಶಾಸಕ

ಮನೆ ಮಗ, ಬಿಜೆಪಿ ಹರಕೆಯ ಕುರಿ ನಡುವೆ ಪೈಪೋಟಿ

ವರುಣಾದಲ್ಲಿ ಅಭಿವೃದ್ಧಿ ಕಾರ್ಯಗಳೇ ನನಗೆ ಶ್ರೀರಕ್ಷೆ, ಬಿಜೆಪಿಯ ಬಿಎಲ್ ಸಂತೋಷ್ ವಿರುದ್ಧ ಕಿಡಿಕಾರಿದ ಮಾಜಿ ಸಿಎಂ ಸಿದ್ದರಾಮಯ್ಯ



ಮೈಸೂರು,ಏ.18(ಎಂಟಿವೈ)- ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಮಾತು ಕೇಳಿ ವರುಣಾ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ವಿ.ಸೋಮಣ್ಣ ಹರಕೆಯ ಕುರಿಯಾಗಿದ್ದಾರೆ ಎಂದು ವಿಪಕ್ಷ ನಾಯಕ ಹಾಗೂ ವರುಣಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನ ಗೋವಿಂದರಾಜನಗರದ ಟಿಕೆಟ್ ಕೇಳಿದ್ದ ಸೋಮಣ್ಣ ಅವರನ್ನು ಮುಗಿಸುವ ಹುನ್ನಾರದಿಂದ ಬಲವಂತವಾಗಿ ವರುಣಾದಲ್ಲಿ ಸ್ಪರ್ಧೆ ಮಾಡುವಂತೆ ಸೂಚಿಸಿದ್ದಾರೆ. ದುಡ್ಡು ಇದ್ದವರನ್ನು ಕರೆತಂದು ಖರ್ಚು ಮಾಡಿಸಲು ಬಿ.ಎಲ್.ಸಂತೋಷ ಮಾಡಿರುವ ಸಂಚಿಗೆ ಸೋಮಣ್ಣ ಬಲಿಯಾಗಿದ್ದಾರೆ ಎಂದರು.

ವರುಣಾ ಕ್ಷೇತ್ರಕ್ಕೂ ಸೋಮಣ್ಣನಿಗೂ ಯಾವುದೇ ಸಂಬಂಧವಿಲ್ಲ. ರಾಮನಗರ ಜಿಲ್ಲೆಗೆ ಸೇರಿದ ಸೋಮಣ್ಣ ಬೆಂಗಳೂರಲ್ಲಿ ರಾಜಕೀಯ ಮಾಡಿದವರು. ಸಚಿವನಾಗಿದ್ದ ವೇಳೆಯೂ ವರುಣಾ ಕ್ಷೇತ್ರಕ್ಕೆ ಯಾವುದೇ ಕೊಡುಗೆ ನೀಡಿಲ್ಲ. ಆದರೂ ಈಗ ಚುನಾವಣೆಗೆ ಸ್ಪರ್ಧಿಸಿದ್ದಾರೆ ಎಂದು ಲೇವಡಿ ಮಾಡಿದರು. ವರುಣಾ ಕ್ಷೇತ್ರದಲ್ಲಿ ಯಾರೇ ಬಂದು ಸ್ಪರ್ಧಿಸಿದರೂ ಕ್ಷೇತ್ರದ ಜನತೆ ನನ್ನನ್ನು ಕೈಬಿಡುವುದಿಲ್ಲ. ಇದು ನನ್ನ ಕೊನೆ ಚುನಾವಣೆ. ನನ್ನ ಹುಟ್ಟೂರು ಇರುವ ಕ್ಷೇತ್ರದಿಂದಲೇ ಸ್ಪರ್ಧಿಸಬೇಕು ಎಂಬ ಬಯಕೆ ಹೊಂದಿದ್ದೇನೆ. ಯಾರೇ ನನ್ನ ವಿರುದ್ಧ ಸ್ಪರ್ಧಿಸಿದರೂ ನನ್ನ ಹಾಗೂ ವರುಣಾ ಕ್ಷೇತ್ರ ಮತ್ತು ಇಲ್ಲಿನ ಜನರೊಂದಿಗೆ ಇರುವ ಬಾಂಧವ್ಯ ಮುರಿಯಲು ಸಾಧ್ಯವಿಲ್ಲ. ಸೋಮಣ್ಣ ಹೊರಗಿನವನು, ನಾನು ಸ್ಥಳೀಕ. ಕ್ಷೇತ್ರದ ಪ್ರತಿಯೊಂದು ಗ್ರಾಮ ಹಾಗೂ ಜನರನ್ನು ನಾನು ಬಲ್ಲೆ. 10 ವರ್ಷ ಶಾಸಕನಾಗಿ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದೇನೆ. ನನ್ನನ್ನು ಮುಖ್ಯಮಂತ್ರಿ ಮಾಡಿದ ಕ್ಷೇತ್ರ. ಹಾಗಾಗಿ ಉತ್ತಮ ಬಾಂಧವ್ಯ ಹೊಂದಿದ್ದೇನೆ. ಕಳೆದ ಬಾರಿ ಜನರ ಅಪೇಕ್ಷೆ ಮೇರೆಗೆ ನನ್ನ ಪುತ್ರ ಡಾ.ಯತೀಂದ್ರ ವರುಣಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ನಾನು ಚಾಮುಂಡೇಶ್ವರಿ ಕ್ಷೇತ್ರಕ್ಕೆ ಹೋಗಿದ್ದೆ. ಅಲ್ಲಿ ಜನ ಸೋಲಿಸಿದರು ಎಂದರು.

ವಸತಿ ಸಚಿವರಾಗಿದ್ದ ವಿ.ಸೋಮಣ್ಣ ವರುಣಾ ಕ್ಷೇತ್ರಕ್ಕೆ ಒಂದು ಮನೆಯನ್ನೂ ನೀಡಿಲ್ಲ. ಸೂರಿಲ್ಲದವರಿಗೆ ಸೂರು ಒದಗಿಸಿದ್ದಾರಾ?. ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ ಯಾವುದಾದರೂ ಒಂದು ೦ಯೋಜನೆ ಅಥವಾ ಕಾಮಗಾರಿಯನ್ನು ವರುಣಾ ಕ್ಷೇತ್ರಕ್ಕೆ ಕೊಟ್ಟಿದ್ದೇನೆ ಎಂದು ಸಾಬೀತು ಪಡಿಸಲಿ ಎಂದು ಸವಾಲು ಹಾಕಿದರು.

ಇಷ್ಟು ವರ್ಷ ವರುಣಾ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡಿರೋದು ಯಾರು?. ನಾಲ್ಕು ಸೇತುವೆಗಳನ್ನು ಕಟ್ಟಿಸಿರೋದು ಯಾರು?, ರಸ್ತೆ, ಕುಡಿಯುವ ನೀರು, ಚರಂಡಿ ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸಿದ್ದು ಯಾರು. ಯಾರು ಯಾರು ಬಂದು ಸುಳ್ಳು ಹೇಳಿದ ಮಾತ್ರಕ್ಕೆ ನಾವು ಮಾಡಿರುವ ಅಭಿವೃದ್ಧಿ ಕಾರ್ಯವನ್ನು ಜನ ಮರೆಯುವುದಿಲ್ಲ. ವರುಣಾದಲ್ಲಿ ನನ್ನ ಗೆಲುವು ನಿಶ್ಚಿತ ಎಂದು ತಿಳಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವರುಣಾ ಕ್ಷೇತ್ರವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎಂದಿದ್ದಾರೆ. ಆದರೆ, ರಾಜ್ಯದ 224 ಕ್ಷೇತ್ರಗಳಲ್ಲಿ ಕೇವಲ ವರುಣಾ ಕ್ಷೇತ್ರ ಮಾತ್ರನಾ ಗಂಭೀರವಾಗಿ ಪರಿಗಣಿಸಿ, ಉಳಿದ 223 ಕ್ಷೇತ್ರವನ್ನು ಲಘುವಾಗಿ ಪರಿಗಣಿಸಿದ್ದಾರಾ ಎಂದು ಲೇವಡಿ ಮಾಡಿದ ಅವರು, ವರುಣಾ ತಾಲೂಕು ಕೇಂದ್ರವಾಗಿರದೇ ಇರುವುದು ನನಗೆ ತಿಳಿದಿರಲಿಲ್ಲ ಎಂಬ ಬೊಮ್ಮಾಯಿ ಹೇಳಿಕೆ ಖಂಡನೀಯ. ಓರ್ವ ಮುಖ್ಯಮಂತ್ರಿಯಾಗಿದ್ದವರಿಗೆ ತಾಲೂಕು ಕೇಂದ್ರದ ಬಗ್ಗೆ ತಿಳಿದಿರದೇ ಇರುವುದು ಅವರ ಅಧಃಪತನವನ್ನು ತೋರಿಸುತ್ತದೆ. ಅಂತಹವರಿಂದ ರಾಜ್ಯದ ಹಿತಕಾಯಲು ಸಾಧ್ಯವೇ? ಈ ಚುನಾವಣೆಯಲ್ಲಿ ಬಿಜೆಪಿ 60 ಸ್ಥಾನ ದಾಟುವುದಿಲ್ಲ. ನಾವು ಅಧಿಕಾರಕ್ಕೆ ಬಂದರೆ ತಾಲೂಕು ಕೇಂದ್ರ ಮಾಡುವುದಾಗಿ ಹೇಳಿರುವ ಬೊಮ್ಮಾಯಿ, 4 ವರ್ಷ ಅಧಿಕಾರದಲ್ಲಿದ್ದಾಗ ಯಾಕೆ ಮಾಡಲಿಲ್ಲ. ಕೇವಲ ಸುಳ್ಳು ಹೇಳಿ ಕೊಂಡೇ ತಿರುಗಾಡುತ್ತಿದ್ದಾರೆ. ಅಚ್ಛೇ ದಿನ್ ಎಂದು ಜನರನ್ನು ವಂಚಿಸುತ್ತಿದ್ದಾರೆ ಆಕಾಶ ತೋರಿಸ್ತೇನಿ, ಸ್ವರ್ಗ ಇಳಿಸ್ತೀನಿ ಎನ್ನುತ್ತಾರೆ ಎಂದು ಕಿಡಿಕಾರಿದರು.

ಬಿ.ಎಲ್.ಸಂತೋಷ್ ಕಪಿಮುಷ್ಠಿಯಲ್ಲಿ ಬಿಜೆಪಿ: ಮೈಸೂರಲ್ಲಿ ಶಾಸಕ ಎಸ್.ಎ.ರಾಮದಾಸ್ ಮೇಲೆ ಯಾವುದೇ ಆರೋಪವಿರಲಿಲ್ಲ. ಅವರಿಗೆ ಟಿಕೆಟ್ ತಪ್ಪಿಸಲಾಗಿದೆ. ಅಲ್ಲದೇ ಮುಖ್ಯಮಂತ್ರಿಯಾಗಿ, ಸ್ಪೀಕರ್, ಸಚಿವರಾಗಿ ಕೆಲಸ ಮಾಡಿದ ಹಿರಿಯ ನಾಯಕ ಜಗದೀಶ್ ಶೆಟ್ಟರ್ ಹಾಗೂ ಹಿರಿಯ ನಾಯಕ ಲಕ್ಷ್ಮಣ ಸವದಿ ಸೇರಿದಂತೆ ಹಲವು ಬಿಜೆಪಿ ನಾಯಕರಿಗೆ ಟಿಕೆಟ್ ನೀಡಿಲ್ಲ. ಇದರ ಹಿಂದೆ ಬಿ.ಎಲ್.ಸಂತೋಷ್ ಕೈವಾಡವಿದೆ ಇದನ್ನು ಜಗದೀಶ್ ಶೆಟ್ಟರೂ ಕೂಡ ಹೇಳಿದ್ದಾರೆ ಎಂದು. ಕೆ.ಎಸ್. ಈಶ್ವರಪ್ಪನಿಗೆ ಸರಿಯಾಗಿ ಪಾಠ ಕಲಿಸಿದ್ದಾರೆ. ಅವನ ಬಾಯಿ ಸರಿಯಿರಲಿಲ್ಲ, ಅದಕ್ಕಾಗಿ ಟಿಕೆಟ್ ಕೊಡದೆ ಸರಿಯಾಗಿ ಬುದ್ಧಿ ಕಲಿಸಿದ್ದಾರೆ. ಈಗಾಗಲೇ ಹಲವು ಮಂದಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಶಾಸಕ ರಾಮದಾಸ್ ಸೇರಿದಂತೆ ಬೇರೆ ಯಾರೇ ಆದರೂ ನಮ್ಮ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿಕೊಂಡು ಕಾಂಗ್ರೆಸ್ ಪಕ್ಷಕ್ಕೆ ಬರುವುದಾದರೆ ಸೇರ್ಪಡೆ ಮಾಡಿಕೊಳ್ಳುತ್ತೇವೆ ಎಂದರು.

ಮೊಮ್ಮಗನ ರಾಜಕೀಯ ಆಸಕ್ತಿಗೆ ತಾತ ಹರ್ಷ

ಮೈಸೂರು, ಏ.18- ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮೊಮ್ಮಗನ ರಾಜಕೀಯ ಆಸಕ್ತಿ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ವರುಣಾ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಿದ್ದರಾಮಯ್ಯನವರು ಬುಧವಾರ ನಾಮಪತ್ರ ಸಲ್ಲಿಸಲಿರುವ ಹಿನ್ನೆಲೆಯಲ್ಲಿ ಇಂದು ಮೈಸೂರಿಗೆ ಆಗಮಿಸಿದ್ದು ಅವರೊಂದಿಗೆ ಮೊಮ್ಮಗ ಧವನ್(ದಿ.ರಾಕೇಶ್ ಪುತ್ರ) ಕೂಡ ಬಂದಿದ್ದಾರೆ.

ಈ ಬಗ್ಗೆ ಮಾಧ್ಯಮದವರಿಗೆ ಖುಷಿಯಿಂದಲೇ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಮೊಮ್ಮಗ ರಾಜಕೀಯದ ಬಗ್ಗೆ ಆಸಕ್ತಿ ತೋರುತ್ತಿರುವುದರಿಂದ ಸಹಜವಾಗಿಯೇ ಖುಷಿ ಆಗುತ್ತದೆ. ಈ ಹಿಂದೆ ರಾಕೇಶ್ ಚಾಮುಂಡೇಶ್ವರಿ ಹಾಗೂ ವರುಣಾ ಕ್ಷೇತ್ರವನ್ನು ನೋಡಿಕೊಳ್ಳುತ್ತಿದ್ದ. ಅಪ್ಪನ ರಕ್ತ ಅಲ್ವಾ, ಹಾಗಾಗಿ ಧವನ್‌ಗೂ ರಾಜಕೀಯದ ಬಗ್ಗೆ ಆಸಕ್ತಿ ಬಂದಿದೆ ನಾಮಪತ್ರ ಸಲ್ಲಿಸುವುದನ್ನು ನೋಡಬೇಕೆಂದು ಅವನಾಗಿಯೇ ಇಷ್ಟಪಟ್ಟು ನನ್ನೊಂದಿಗೆ ಮೈಸೂರಿಗೆ ಬಂದಿದ್ದಾನೆ. ವರುಣಾ ಕ್ಷೇತ್ರದಲ್ಲಿ ಪ್ರಚಾರಕ್ಕೆ ಹೋಗು ಎಂದು ನಾನು ಹೇಳಲ್ಲ. ನಮ್ಮ ಮನೆಯ ಯಾರನ್ನೂ ನಾನು ಪ್ರಚಾರಕ್ಕೆ ಕರೆಯುವುದಿಲ್ಲ ಎಂದರು.



ತಾತ ನಾಮಪತ್ರ ಸಲ್ಲಿಸುವುದನ್ನು ನೋಡುವ ಇಚ್ಛೆಯಿಂದ ಆಗಮಿಸಿರುವ ಧವನ್ ರಾಕೇಶ್ ಜೊತೆ ಕೆಲವರು ಫೋಟೋ ಕ್ಲಿಕ್ಕಿಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಸ್ವಾಭಿಮಾನದ ಹೆಸರಲ್ಲಿ ಮಂಡ್ಯಕ್ಕೆ ಕಳಂಕ ತಂದವರಿಂದ ಜೆಡಿಎಸ್ ನಿರ್ನಾಮ ಶಪಥ

ಸಂಸದೆ ಸುಮಲತಾ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ



ಪಾಂಡವಪುರ, ಏ.18- ಸ್ವಾಭಿಮಾನದ ಹೆಸರಿನಲ್ಲಿ ಮಂಡ್ಯ ಜಿಲ್ಲೆ ಹೆಸರನ್ನು ಹಾಳು ಮಾಡಿದವರೊಬ್ಬರು ಅಸೆಂಬ್ಲಿ ಚುನಾವಣೆ ವೇಳೆ ಜೆಡಿಎಸ್ ಪಕ್ಷವನ್ನು ನಿರ್ನಾಮ ಮಾಡುತ್ತೇನೆ ಎಂದು ಪಣತೊಟ್ಟಿದ್ದಾರೆ ಎಂದು ಸಂಸದೆ ಸುಮಲತಾ ಅಂಬರೀಶ್ ವಿರುದ್ಧ ಪರೋಕ್ಷವಾಗಿ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಜೆಡಿಎಸ್ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ಅವರ ನಾಮಪತ್ರ ಸಲ್ಲಿಕೆ ಕಾರ್ಯಕ್ರಮದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕುಮಾರಸ್ವಾಮಿ ಮಂಡ್ಯ ಕ್ಷೇತ್ರದ ಅಭ್ಯರ್ಥಿಯಾಗುತ್ತಾರೆ ಎನ್ನುವ ವಿಷಯ ಮಾಧ್ಯಮಗಳಲ್ಲಿ ಬರುತ್ತಿದ್ದಂತೆಯೇ ಅಲ್ಲೊಬ್ಬರು ಕುತಂತ್ರ ರಾಜಕಾರಣ ಮಾಡಲು ಹೊರಟ್ಟಿದ್ದಾರೆ. ಕುಮಾರಸ್ವಾಮಿ ಮುಗಿಸಲು ಸವಾಲು ಹಾಕುತ್ತಿದ್ದಾರೆ. ನಾನು ಅವರಿಗೆ ಮಾಡಿರುವ ಅನ್ಯಾಯವಾದರೂ ಏನು? ನಾನಂತು ಯಾರ ವಿರುದ್ಧವೂ ಸವಾಲು ಹಾಕುವುದಿಲ್ಲ. ಬಿಜೆಪಿ ಸೇರ್ಪಡೆಯಾಗುವ ಮೂಲಕ ಮಂಡ್ಯ ಜಿಲ್ಲೆಯ ಜನರ ಸ್ವಾಭಿಮಾನವನ್ನು ಹಾಳು ಮಾಡಿದರು. ಮಂಡ್ಯದಿಂದ ಒಬ್ಬ ಸಾಮಾನ್ಯ ಕಾರ್ಯ ಕರ್ತನನ್ನೇ ಚುನಾವಣೆಗೆ ಅಭ್ಯರ್ಥಿ ಮಾಡುವೆ. ನಾನು ಚನ್ನಪಟ್ಟಣದಿಂದಲೇ ಕಣಕ್ಕಿಳಿಯುವೆ ಎಂದರು.

ಜಿಲ್ಲೆಯ ಜನರ ಋಣ ನನ್ನ ಹಾಗೂ ಕುಟುಂಬದ ಮೇಲೆ ಸಾಕಷ್ಟಿದೆ ಜಿಲ್ಲೆಯ ಏಳು ಕ್ಷೇತ್ರಗಳಲ್ಲಿ ಜೆಡಿಎಸ್ ಗೆಲ್ಲಿಸಿಕೊಡುವ ಮೂಲಕ ನಮ್ಮ ಸರ್ಕಾರವನ್ನು ಅಧಿಕಾರಕ್ಕೆ ತಂದರೆ ರಾಜ್ಯದಲ್ಲಿ ಮಂಡ್ಯ ಜಿಲ್ಲೆಯ ಸರ್ಕಾರವೇ ಅಧಿಕಾರದಲ್ಲಿದೆ ಎನ್ನುವ ರೀತಿ ಆಡಳಿತ ನಡೆಸುತ್ತೇನೆ ಎಂದರು. ಕಳೆದ ಬಾರಿ ಜಿಲ್ಲೆಯ ಜನತೆ 7 ಸ್ಥಾನ ಗೆಲ್ಲಿಸಿಕೊಟ್ಟಿದ್ದೀರಿ. ಈ ಬಾರಿಯೂ ಏಳು ಸ್ಥಾನ ಗೆಲ್ಲಿಸಿಕೊಡಿ. ಜಿಲ್ಲೆಯ ಜನರ ಋಣ ತೀರಿಸದೆ ಈ ದೇಹ ಮಣ್ಣಿಗೆ ಹೋಗುವುದಿಲ್ಲ. ಜಿಲ್ಲೆಯ ಜನತೆ ನನ್ನ ಕೈ ಬಿಡುವುದಿಲ್ಲ ಎನ್ನುವ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮನೆ ಮಗನ ರೀತಿ ಜನರ ಸೇವೆ ಮಾಡಿ ಕಷ್ಟ-ಕಾರ್ಪಣ್ಯಗಳಿಗೆ ಸ್ಪಂದಿಸಿದ್ದಾರೆ. ಇವರನ್ನು ಗೆಲ್ಲಿಸುವುದು ಕ್ಷೇತ್ರದ ಜನರ ಕರ್ತವ್ಯ. 5 ವರ್ಷ ಅಮೆರಿಕದಲ್ಲಿ ಇದ್ದು, ಇದೀಗ ಚುನಾವಣೆಗೆ ಬಂದಿರುವ ವ್ಯಕ್ತಿಗಳಿಗೆ ಮಣೆ ಹಾಕಬೇಡಿ ಎಂದು ಗುಡುಗಿದರು.

ರಾಜ್ಯದಲ್ಲಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಬಿಜೆಪಿ, ಕಾಂಗ್ರೆಸ್‌ನ ಘಟಾನುಘಟಿ ನಾಯಕರೊಂದಿಗೆ ಏಕಾಂಗಿಯಾಗಿ ಹೋರಾಟ ನಡೆಸುತ್ತಿದ್ದೇನೆ. ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗೋದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಅಧಿಕಾರಕ್ಕೆ ಬಂದರೆ ಪಂಚರತ್ನ ಯೋಜನೆ ಗಳನ್ನು ಅನುಷ್ಠಾನಕ್ಕೆ ತಂದು ಹಳ್ಳಿಯ ಜನರು, ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವೆ ಎಂದರು.

ಅಭ್ಯರ್ಥಿ, ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ನಾಮಪತ್ರ ಸಲ್ಲಿಸುವ ಕಾರ್ಯಕ್ರಮಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿ ಬೆಂಬಲ ನೀಡಿದ್ದಕ್ಕೆ ಧನ್ಯವಾದಗಳು. ಕ್ಷೇತ್ರದ ಮಹಾಜನತೆ ಯಾವುದೇ ಅಪಪ್ರಚಾರಕ್ಕೆ ಕಿವಿಗೊಡದೆ ಅವರಿಗೆ ತಕ್ಕಪಾಠ ಕಲಿಸಿ ಚುನಾವಣೆಯಲ್ಲಿ ಅಧಿಕ ಬಹುಮತದಿಂದ ನನ್ನನ್ನು ಆಯ್ಕೆ ಮಾಡಿಕೊಡಬೇಕು ಎಂದರು.

ದುದ್ದ ಹೋಬಳಿ ಜನತೆ ಎಂದಿಗೂ ಸ್ವಾಭಿಮಾನ ಮಾರಿಕೊಂಡವರಲ್ಲ. ವಿರೋಧಿಗಳು ಆ ಜನರ ಸ್ವಾಭಿಮಾನಕ್ಕೆ ಧಕ್ಕೆ ತಂದಿದ್ದಾರೆ. ದುದ್ದ ಹೋಬಳಿ ಜನತೆಯೇ ತಕ್ಕ ಉತ್ತರ ನೀಡಲಿದ್ದಾರೆ. 5 ವರ್ಷ ಅಮೆರಿಕದಲ್ಲಿದ್ದು ಕಂಪನಿ ಮಾರಾಟ ಮಾಡಿ ಆ ಹಣದಲ್ಲಿ ಜನರ ಖರೀದಿ ಮಾಡಿ ಶಾಸಕರಾಗಲು ಹೊರಟಿದ್ದಾರೆ ಎಂದು ದರ್ಶನ್ ಪುಟ್ಟಣ್ಣಯ್ಯ ವಿರುದ್ಧ ಗುಡುಗಿದರು.

ವೇದಿಕೆಯಲ್ಲಿ ಬೆಳ್ಳಾಳೆ ಗ್ರಾಮದ ತಿಬ್ಬೇಗೌಡರ ಪುತ್ರಿ ಇಂಜಿನಿಯರ್ ಸಹನ ಅವರು ತಾವು ದುಡಿದ ಹಣದಲ್ಲಿ 50 ಸಾವಿರ ಹಣವನ್ನು ಹೆಚ್.ಡಿ.ಕುಮಾರಸ್ವಾಮಿ ಅವರ ಚುನಾವಣಾ ಖರ್ಚಿಗಾಗಿ ನೀಡಿದರು. ಮಂಗಳಮುಖಿಯರು ಸಹ ಎಚ್‌ಡಿಕೆಗೆ 25 ಸಾವಿರ ಹಣ ದೇಣಿಗೆ ನೀಡಿದರು.

ಸಭೆಯಲ್ಲಿ ಮಾಜಿ ಶಾಸಕ ಜಿ.ಬಿ. ಶಿವಕುಮಾರ್, ಮಾಜಿ ಎಂಎಲ್‌ಸಿಗಳಾದ ಕೆ.ಟಿ.ಶ್ರೀಕಂಠೇಗೌಡ, ಅಪ್ಪಾಜಿಗೌಡ, ನಗರಸಭೆ ಮಾಜಿ ಅಧ್ಯಕ್ಷೆ ಅಂಬುಜಮ್ಮ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾಲೂಕು ಅಧ್ಯಕ್ಷ ಮಲ್ಲೇಶ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಶೇಖ್ ಅಹಮದ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಯಶ್ವಂತ್‌ಕುಮಾರ್, ಅರವಿಂದ್ ರಾಘವನ್, ಜೆಡಿಎಸ್ ವಕ್ತಾರೆ ಪದ್ಮಾವತಿ, ಪುರಸಭೆ ಅಧ್ಯಕ್ಷೆ ಅರ್ಚನಚಂದ್ರ, ಉಪಾಧ್ಯಕ್ಷೆ ಶ್ವೇತ, ದಸಂಸ ಮುಖಂಡ ವೆಂಕಟಗಿರಿಯ್ಯ, ಕೆ.ಪುಟ್ಟೇಗೌಡ, ಶ್ಯಾಮ್, ಶಿವಣ್ಣ ಸೇರಿದಂತೆ ಹಲವರು ಇದ್ದರು.

ಮಾಜಿ ಸಿಎಂ ಸಿದ್ದರಾಮಯ್ಯ ಇಂದು ನಾಮಪತ್ರ ಸಲ್ಲಿಕೆ



ಮೈಸೂರು, ಏ.18(ಎಂಟಿವೈ)- ವರುಣಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬುಧವಾರ ಮಧ್ಯಾಹ್ನ 2 ಗಂಟೆಗೆ ನಾಮಪತ್ರ ಸಲ್ಲಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಬೇಕೆಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ವರುಣಾ ಕ್ಷೇತ್ರ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ವರುಣಾ ಕ್ಷೇತ್ರವನ್ನು ಸಿದ್ದರಾಮಯ್ಯ ಸಮಗ್ರವಾಗಿ ಅಭಿವೃದ್ಧಿಪಡಿಸಿ, ರಾಜ್ಯದಲ್ಲೇ ಮಾದರಿ ಕ್ಷೇತ್ರ ಮಾಡಿದ್ದಾರೆ. ಮುಖ್ಯಮಂತ್ರಿಯಾಗಿದ್ದ ವೇಳೆ ನೂರಾರು ಕೋಟಿ ರೂ. ಬಿಡುಗಡೆ ಮಾಡಿ ಪ್ರತಿಯೊಂದು ಗ್ರಾಮಗಳಿಗೂ ಮೂಲ ಸೌಲಭ್ಯ ಕಲ್ಪಿಸಿದ್ದಾರೆ ಎಂದರು.

ಕುಡಿಯುವ ನೀರು, ರಸ್ತೆ, ಚರಂಡಿ ಸೌಲಭ್ಯ, ಶಾಲೆ, ಆರೋಗ್ಯ ಸೇವೆ, ಬಸ್ ವ್ಯವಸ್ಥೆ ಕಲ್ಪಿಸುವ ಮೂಲಕ ಕ್ಷೇತ್ರದ ಜನರ ಹಿತ ಕಾಯ್ದಿದ್ದಾರೆ. ಕ್ಷೇತ್ರದ ಜನತೆ ಸಿದ್ದರಾಮಯ್ಯ ಅವರ ಮೇಲೆ ಅಪಾರ ಪ್ರೀತಿ ಇಟ್ಟಿದ್ದು, ಭಾರೀ ಅಂತರದಿಂದ ಗೆಲ್ಲಿಸಲಿದ್ದಾರೆ. ನಾಮಪತ್ರ ಸಲ್ಲಿಕೆ ವೇಳೆ ಕನಿಷ್ಠ 10-15 ಸಾವಿರ ಜನರನ್ನು ಸೇರಿಸಬೇಕು. ಆ ಮೂಲಕ ರಾಜ್ಯಕ್ಕೆ ಒಂದು ಸಂದೇಶ ರವಾನೆಯಾಗಬೇಕು ಎಂದು ಸಲಹೆ ನೀಡಿದರು.

ಮೈಸೂರು ಕಾಂಗ್ರೆಸ್ ಉಸ್ತುವಾರಿ, ಕೇರಳ ಸಂಸದ ರಾಘವನ್ ಮಾತನಾಡಿ, ಸಿದ್ದರಾಮಯ್ಯ ಅವರ ನಾಮಪತ್ರ ಸಲ್ಲಿಕೆ ಸಮಾರಂಭವೂ ಪಕ್ಷದ ಶಕ್ತಿ ಪ್ರದರ್ಶನದ ಕಾರ್ಯಕ್ರಮವಾಗಬೇಕು. ನಮಗೆ ಒಬ್ಬರೇ ಮಾಸ್ ಲೀಡರ್ ಅವರೇ ಸಿದ್ದರಾಮಯ್ಯ, ಅವರು ಕೇವಲ ವ್ಯಕ್ತಿಯಲ್ಲ, ದೊಡ್ಡ ಶಕ್ತಿಯಾಗಿದ್ದಾರೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿ, ಗೋಳೂರು ಸರ್ಕಲ್‌ನಿಂದ ಬೆಳಗ್ಗೆ 11 ಗಂಟೆಗೆ ಸಭೆ ನಡೆಸಿ, ನಂತರ ಮಧ್ಯಾಹ್ನ 12.30ಕ್ಕೆ ಮೆರವಣಿಗೆ ಮೂಲಕ ಹೊರಟು ನಂಜನಗೂಡು ತಾಲೂಕು ಪಂಚಾಯತಿ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಲಾಗುವುದು ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಅಭ್ಯರ್ಥಿ ಕೆ.ಹರೀಶ್ ಗೌಡ, ಮಹಿಳಾ ಜಿಲ್ಲಾಧ್ಯಕ್ಷೆ ಲತಾ ಸಿದ್ದಶೆಟ್ಟಿ ಮುಖಂಡ ನರಸೇಗೌಡ, ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್, ಮಾಜಿ ಮುಡಾ ಅಧ್ಯಕ್ಷ ಧ್ರುವಕುಮಾರ್, ಲೋಕೇಶ್ ರಾವ್, ಶಿವನಾಗಪ್ಪ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡೊನಾಲ್ಡ್ ನಿರ್ವಾಣಿಕ್, ಮೋಸಿನ್ ಖಾನ್ ಮುಂತಾದವರು ಪಾಲ್ಗೊಂಡಿದ್ದರು.

ಭರ್ಜರಿ ರೋಡ್ ಶೋ ಮೂಲಕ

ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡ ನಾಮಪತ್ರ ಸಲ್ಲಿಕೆ



ಮೈಸೂರು, ಏ. 18(ಆರ್‌ಕೆ)- ಸೋಮವಾರ ಘಟಾನುಘಟಿಗಳು ಶಕ್ತಿ ಪ್ರದರ್ಶನ ಮಾಡಿ ಉಮೇದುವಾರಿಕೆ ಸಲ್ಲಿಸಿದ ಬೆನ್ನಲ್ಲೇ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡ ಬೆಂಬಲಿಗರೊಂದಿಗೆ ಭರ್ಜರಿ ರೋಡ್ ಶೋ ಮೂಲಕ ಇಂದು ನಾಮಪತ್ರ ಸಲ್ಲಿಸಿದರು.

ಮೈಸೂರು ತಾಲೂಕು ಹಳ್ಳಿ ಬೋಗಾದಿಯ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಅಲ್ಲಿನ ಅಲಂಕೃತಗೊಂಡಿದ್ದ ತೆರೆದ ವಾಹನದಲ್ಲಿ ಮೆರವಣಿಗೆಯಲ್ಲಿ ಸಾಗಿದ ಅವರು, ಬೃಹತ್ ರೋಡ್ ಶೋ ಮಾಡಿ ನಜರ್‌ಬಾದ್‌ನ ಮಿನಿ ವಿಧಾನಸೌಧ ಚುನಾವಣಾಧಿಕಾರಿ ಕಚೇರಿಗೆ ತೆರಳಿ ಪತ್ನಿ ಡಾ. ಶ್ರುತಿ, ಮೇಯರ್ ಶಿವಕುಮಾರ್, ಬಿಜೆಪಿ ಮುಖಂಡರಾದ ಬಿ.ಎಂ. ರಘು, ಗೆಜ್ಜಗಳ್ಳಿ ಮಹೇಶ್‌ರೊಂದಿಗೆ ಚಾಮುಂಡೇಶ್ವರಿ ಕ್ಷೇತ್ರ ಚುನಾವಣಾಧಿಕಾರಿ ಕಮಲಾಬಾಯಿ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ಪಕ್ಷದ ಮುಖಂಡರಾದ ಹೇಮಂತ್‌ಕುಮಾರ್‌ಗೌಡ, ಅರುಣ್‌ಕುಮಾರ್‌ಗೌಡ, ಎಂ.ವಿ. ರವಿಶಂಕರ್, ಗೋಪಾಲರಾವ್, ಬಿ.ಎಂ. ರಘು, ಶ್ರೀನಿವಾಸ್, ಶಿವಕುಮಾರ್ ಸೇರಿದಂತೆ ಸಾವಿರಾರು ಮಂದಿ ಕಾರ್ಯಕರ್ತರು ರೋಡ್ ಶೋನಲ್ಲಿ ಪಾಲ್ಗೊಂಡು ಕವೀಶ್‌ಗೌಡರಿಗೆ ಸಾಥ್ ನೀಡಿದರು. ಬೋಗಾದಿಯಿಂದ ಆರಂಭವಾದ ಮೆರವಣಿಗೆಯು, ಬೋಗಾದಿ ರಸ್ತೆ, ಕುಕ್ಕರಹಳ್ಳಿ ಕೆರೆ, ಮುಡಾ ಸರ್ಕಲ್, ಜೆಎಲ್‌ಬಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಹಾರ್ಡಿಂಜ್ ಸರ್ಕಲ್, ಬಿ.ಎನ್. ರಸ್ತೆ, ಛತ್ರಿ ಮರದ ರಸ್ತೆ ಮೂಲಕ ನಜರ್‌ಬಾದ್‌ನ ತಾಲೂಕು ಕಚೇರಿಗೆ ತಲುಪಿತು. ಬಿಜೆಪಿ ಕಾರ್ಯಕರ್ತರು ಪಕ್ಷದ ಬಾವುಟ ಹಿಡಿದು ಮೆರವಣಿಗೆಯಲ್ಲಿ ಸಾಗಿ ಕವೀಶ್‌ಗೌಡ ಪರ ಘೋಷಣೆಗಳನ್ನು ಕೂಗಿದರು. ನಾಮಪತ್ರ ಸಲ್ಲಿಸಿದ ಬಳಿಕ ಪ್ರತಿಕ್ರಿಯೆ ನೀಡಿದ ಕವೀಶ್‌ಗೌಡ, ದೇಶದಲ್ಲಿ ಉತ್ತಮ ಆಡಳಿತ ನೀಡುವ ಮೂಲಕ ಅಭಿವೃದ್ಧಿ ಮಂತ್ರ ಜಪಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ, ಬದಲಾವಣೆಯ ಸಂಕಲ್ಪ ತೊಟ್ಟಿದ್ದಾರೆ. ಯುವ ಪೀಳಿಗೆಗೆ ಮಾರ್ಗದರ್ಶಕರಾಗಿರುವ ಅವರು ನನ್ನಂತಹ ಯುವಕರಿಗೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸುವ ಅವಕಾಶ ಕಲ್ಪಿಸಿರುವುದಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ರಾಜ್ಯ ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯ, ಕ್ಷೇತ್ರದಲ್ಲಿ ಬದಲಾವಣೆ ಬಯಸಿರುವ ಜನರ ಆಶೀರ್ವಾದ, ಪಕ್ಷದ ಮುಖಂಡರು, ಕಾರ್ಯಕರ್ತರ ಬೆಂಬಲದಿಂದ ಚುನಾವಣೆಯಲ್ಲಿ ತಮಗೆ ಜಯ ಲಭಿಸಲಿದೆ ಎಂಬ ವಿಶ್ವಾಸವಿದೆ ಎಂದು ನುಡಿದರು.

ಮೈಸೂರು ಮಿತ್ರ

ನಂ.ಗೂಡು ಬಿಜೆಪಿ ಅಭ್ಯರ್ಥಿ ಹರ್ಷವರ್ಧನ್ ನಾಮಪತ್ರ ಸಲ್ಲಿಕೆ

ನಂಜನಗೂಡು, ಏ.18– ನಂಜನಗೂಡು ಮೀಸಲು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಹರ್ಷವರ್ಧನ್ ಮಂಗಳವಾರ ಸಾವಿರಾರು ಕಾರ್ಯಕರ್ತರೊಂದಿಗೆ ನಗರದ ವಿದ್ಯಾವರ್ಧಕ ಕಾಲೇಜು ಮೈದಾನದಿಂದ ಕಾಲ್ನಡಿಗೆ ಮೂಲಕ ಮೆರವಣಿಗೆಯಲ್ಲಿ ತಾಲೂಕು ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ಇದಕ್ಕೂ ಮುನ್ನಾ ನಗರದ ಚಿಂತಾಮಣಿ ಗಣಪತಿ ದೇವಾಲಯದಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಹಾಗೂ ಕಾರ್ಯಕರ್ತರೊಂದಿಗೆ ಪೂಜೆ ಸಲ್ಲಿಸಿದ ಹರ್ಷವರ್ಧನ್, ಬಳಿಕ ಅಲ್ಲಿಂದ 10 ಸಾವಿರಕ್ಕೂ ಹೆಚ್ಚು ಮುಖಂಡರು, ಕಾರ್ಯಕರ್ತರೊಂದಿಗೆ ಮೆರವಣಿಗೆಯಲ್ಲಿ ತೆರಳಿದರು. ಈ ವೇಳೆ ಬಿಜೆಪಿ ಬಾವುಟಗಳು ರಾರಾಜಿಸಿದವು. ಅಲ್ಲದೇ ಕೆಲವರು ನಾರಿ ಸದ್ದಿಗೆ ಕುಪ್ಪಳಿಸುತ್ತಾ, ಜೈಕಾರ ಕೂಗುತ್ತಾಸಾಗಿ ಮೆರವಣಿಗೆ ತಾಲೂಕು ಕಚೇರಿ ತಲುಪಿತು.

ತಾಲೂಕು ಕಚೇರಿಯಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ಮುಖಂಡರಾದ ಸುಬ್ಬಣ್ಣ, ಬಾಲಚಂದ್ರ, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ ಅವರೊಂದಿಗೆ ಚುನಾವಣಾಧಿಕಾರಿ ಕೃಷ್ಣಮೂರ್ತಿ ಅವರಿಗೆ ನಾಮಪತ್ರ ಸಲ್ಲಿಸಿದರು.

ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ನನ್ನ ಅಧಿಕಾರವಧಿಯಲ್ಲಿ ಸಾಕಷ್ಟು ಅನುದಾನ ತಂದು ಕ್ಷೇತ್ರದ ಪ್ರತಿ ಹಳ್ಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ಭಾಗದ ರೈತರ ಕನಸಾಗಿದ್ದ ನುಗು ಏತ ನೀರಾವರಿ ಯೋಜನೆಗೆ ಚಾಲನೆ ನೀಡಿದ್ದು, ಸಾಕಾರಗೊಳ್ಳುತ್ತಿದೆ. ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವ 250 ರಿಂದ 300 ಕೋಟಿ ವೆಚ್ಚದ ಜಲಜೀವನ್ ಮಿಷನ್, ಹೆಡಿಯಾಲ ಭಾಗದಲ್ಲಿ 30 ಕೋಟಿ ರೂ. ವೆಚ್ಚದಲ್ಲಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕಾಮಗಾರಿ ನಡೆಯುತ್ತಿದ್ದು, ಕಳೆದ 5 ವರ್ಷಗಳಲ್ಲಿ 823 ಕೋಟಿ ಅನುದಾನ ತಂದು ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿದ್ದೇನೆ. ಅಭಿವೃದ್ಧಿ ಕಾರ್ಯ ಮುಂದಿಟ್ಟುಕೊಂಡು, ಶ್ವೇತಪತ್ರ ಹೊರಡಿಸಿ ಚುನಾವಣೆ ಎದುರಿಸುತ್ತಿದ್ದೇನೆ. ಕ್ಷೇತ್ರದಲ್ಲಿ ಮತ್ತೊಮ್ಮೆ ಬಿಜೆಪಿ ಬಾವುಟ ಹಾರಿಸುವ ವಿಶ್ವಾಸವಿದೆ ಎಂದರು.



ಉಪ ಚುನಾವಣೆಯಲ್ಲಿ ಸಿದ್ದರಾಮಯ್ಯ ಸರ್ಕಾರದ ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಂಡು ವಿ.ಶ್ರೀನಿವಾಸ ಪ್ರಸಾದ್‌ರನ್ನು ಸೋಲಿಸಿದ್ದರು. ಆ ಸೋಲನ್ನು ಸವಾಲಾಗಿ ಸ್ವೀಕರಿಸಿ ಶಾಸಕನಾಗಿ ಆಯ್ಕೆಯಾದೆ. ನಗರಸಭೆ, ತಾಪಂ, ಗ್ರಾಪಂಗಳಲ್ಲಿ ಅಧಿಕಾರಕ್ಕೆ ಬಂದಿದ್ದೇವೆ. ಕಾಂಗ್ರೆಸ್ ಪ್ರತಿ ಗೃಹಿಣಿಯರಿಗೆ 2 ಸಾವಿರ, 200 ಯುನಿಟ್ ವಿದ್ಯುತ್ ನೀಡುವುದಾಗಿ ಹಂಚುತ್ತಿರುವ ಗ್ಯಾರಂಟಿ ಕಾರ್ಡ್ ನಗೆಪಾಟಲಿಗೆ ಈಡಾಗಿದೆ. ಜನರು ಇವರ ಸುಳ್ಳು ಆಶ್ವಾಸನೆಗಳನ್ನು ನಂಬುತ್ತಿಲ್ಲ. ಮೇ 13 ರಂದು ಮತ್ತೆ ಶಾಸಕನಾಗಿ ಕ್ಷೇತ್ರವನ್ನು ಸ್ಯಾಟಲೈಟ್ ಟೌನ್ ಆಗಿ ಅಭಿವೃದ್ಧಿಪಡಿಸುತ್ತೇನೆ ಎಂದು ಹೇಳಿದರು.

ಸಂಸದ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಕ್ಷೇತ್ರದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ, ತಾಲೂಕು ಅಧ್ಯಕ್ಷರು ಇಬ್ಬರು ಮಾತ್ರ ಉಳಿದಿದ್ದಾರೆ. ಪಕ್ಷವನ್ನು ಕಾಂಗ್ರೆಸ್ ಜೊತೆ ವಿಲೀನಗೊಳಿಸಿದ್ದಾರೆ. ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಹಣಾಹಣಿ ಏರ್ಪಟ್ಟಿದೆ. ಶಾಸಕರು ಮಾಡಿರುವ ಅಭಿವೃದ್ಧಿ ಕೆಲಸಗಳು ಮತ್ತು ನಾನು ಕಂದಾಯ ಸಚಿವನಾಗಿ, ಸಂಸದನಾಗಿ ಮಾಡಿರುವ ಕೆಲಸಗಳಿಂದ ಶಾಸಕರು ಅತ್ಯಧಿಕ ಮತಗಳಿಂದ ಗೆಲ್ಲಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಉಸ್ತುವಾರಿ ವಿವೇಕ್ ರಾಥೋಡ್, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಮಾಜಿ ಸಚಿವ ಕೋಟೆ ಶಿವಣ್ಣ, ರಾಜ್ಯ ಮುಖಂಡರಾದ ಕೆ.ಜಯದೇವ್, ಸುಬ್ಬಣ್ಣ, ಜಿಲ್ಲಾ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ಹುಲ್ಲಹಳ್ಳಿ ಶಕ್ತಿ ಕೇಂದ್ರ ಅಧ್ಯಕ್ಷ ಪರಶಿವಮೂರ್ತಿ, ಜಿಪಂ ಮಾಜಿ ಸದಸ್ಯರಾದ ಎಸ್.ಎಂ.ಕೆಂಪಣ್ಣ, ಮುಖಂಡರಾದ ಮಂಜು, ಮಹೇಶ್, ಎಸ್.ಎನ್.ಮಲ್ಲೇಶ್, ಅಬ್ದುಲ್‌ರಜಾಕ್, ಸುರೇಶ್, ಶ್ಯಾಂಪಟೇಲ್, ಬಾಲಚಂದ್ರು, ಪುಟ್ಟಸ್ವಾಮಿ, ರಾಜು, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ಅಲ್ಪಸಂಖ್ಯಾತ ಮೋರ್ಚಾ ಜಿಲ್ಲಾಧ್ಯಕ್ಷ ಇಲಿಯಾಸ್ ಅಹಮದ್, ಬಿಜೆಪಿ ಜಿಲ್ಲಾ ಹಿಂದುಳಿದ ವರ್ಗ ಪ್ರಧಾನ ಕಾರ್ಯದರ್ಶಿ ಸೋಮಣ್ಣ, ತಾಪಂ ಮಾಜಿ ಸದಸ್ಯರಾದ ಬಿ.ಎಸ್.ರಾಮು, ಮಹದೇವನಾಯಕ, ನಗರಸಭಾ ಸದಸ್ಯರಾದ ಸಿದ್ದರಾಜು, ಮಹದೇವಪ್ರಸಾದ್, ವಿಜಯಲಕ್ಷ್ಮಿ, ಮಹದೇವಮ್ಮ, ಮೀನಾಕ್ಷಿ ಸೇರಿದಂತೆ ಇತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಪ್ರವೀಣ (ಕ):** ಬೆ.10.30ಕ್ಕೆ, **ಗುರುದೇವ್ ಹೊಯ್ಸಳ (ಕ):** ಮ.1.05ಕ್ಕೆ, **ದಸರಾ (ತೆ):** ಮ.3.45ಕ್ಕೆ, **ರಾವಣಾಸುರ (ತೆ):** ಸಂ.6.55ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	**ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ):** ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, **ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ):** ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	**ರಾಮಾಚಾರಿ 2.0 (ಕ):** ಬೆ.10.45ಕ್ಕೆ, **ಆಗಸ್ಟ್ 16 1947(ತ):** ಮ.1.30ಕ್ಕೆ, **ಪೆಂಟಗನ್ (ಕ):** ಸಂ.4.20ಕ್ಕೆ, **ಗುಮ್ರಾಹ್ (ಹಿಂ):** ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	**ಗುರುದೇವ್ ಹೊಯ್ಸಳ (ಕ):** ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, **ವೀರಂ (ಕ):** ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಗುರುದೇವ್ ಹೊಯ್ಸಳ (ಕ):** ಬೆ.10.20ಕ್ಕೆ, **ವೀರಂ (ಕ):** ಮ.1.05ಕ್ಕೆ, ರಾ.7.15ಕ್ಕೆ, **ರಾವಣಾಸುರ (ತೆ):** ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	**ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ):** ಬೆ.10.25ಕ್ಕೆ, **ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ):** ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, **ರಾಮಾಚಾರಿ 2.0(ಕ):** ಮ.2.55ಕ್ಕೆ, **ದಸರಾ (ತೆ):** ರಾ.10ಕ್ಕೆ.
ಸ್ಕ್ರೀನ್ 3	**ವೀರಂ (ಕ):** ಬೆ.10.10ಕ್ಕೆ, **ರಾವಣಾಸುರ (ತೆ):** ಮ.1.25ಕ್ಕೆ, **ಗುರುದೇವ ಹೊಯ್ಸಳ (ಕ):** ಸಂ.4.20ಕ್ಕೆ, ರಾ.9.50ಕ್ಕೆ, **ನಮ್ ನಾಣಿ ಮದುವೆ ಪ್ರಸಂಗ (ಕ):** ರಾ.7.05ಕ್ಕೆ.
ಸ್ಕ್ರೀನ್ 4	**ಪ್ರವೀಣ (ಕ):** ಬೆ.11.10ಕ್ಕೆ, **ಗುರುದೇವ ಹೊಯ್ಸಳ (ಕ):** ಮ.1.45ಕ್ಕೆ, **ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ):** ಸಂ.4.30ಕ್ಕೆ, ರಾ.10.20ಕ್ಕೆ, **ಪೆಂಟಗನ್ (ಕ):** ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ):** ಸಂ.4.50ಕ್ಕೆ, **ಚೌಕಾಬಾರ (ಕ):** ರಾ.7.50ಕ್ಕೆ, **ಕ್ರಿಡ್ 3 (ಇಂ):** ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ):** ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ):** ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ):** ಮ.2.45ಕ್ಕೆ, ರಾ.7.45ಕ್ಕೆ, **65 (ಇಂ):** ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಹೊಯ್ಸಳ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರುದ್ರಂ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪ್ರದರ್ಶನ ಇರುವುದಿಲ್ಲ	
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಂಡೆನಾಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ವೀರಂ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವಿದುತಲೈ ಪಾರ್ಟ್–1 (ತ)	4 ಪ್ರದರ್ಶನಗಳು
ಸಂಗಂ	
ಶಂಕುಂತಲಂ (ತೆ)	4 ಪ್ರದರ್ಶನಗಳು
ಲಿಡೋ	
ಉಂಡೆನಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೀರಂ (ಕ)	4 ಪ್ರದರ್ಶನಗಳು
ಪ್ರಭಾ	
ಮಾರಿಗುಡ್ಡದ ಗಡ್ಡಧಾರಿಗಳು (ಕ)	4 ಪ್ರದರ್ಶನಗಳು

ಬೈಕ್‌ಗೆ ಜೆಸಿಬಿ ಡಿಕ್ಕಿ: ಸವಾರ ಸಾವು

ನಂಜನಗೂಡು, ಏ.18– ಬೈಕ್‌ಗೆ ಜೆಸಿಬಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಹಳ್ಳಿಕೆರೆಹುಂಡಿ ಗ್ರಾಮದ ಬಳಿ ನಡೆದಿದೆ.

ಮರಳೂರು ಗ್ರಾಮದ ನಿವಾಸಿ ಶಿವಣ್ಣ ಅವರ ಪುತ್ರ ನಂದೀಶ(18) ಮೃತಪಟ್ಟವರು. ಈತ ಸೋಮವಾರ ಸಂಜೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ತಂದೆಯನ್ನು ಕರೆದುಕೊಂಡು ಬರಲು ಬುಲೆಟ್‌ನಲ್ಲಿ ತೆರಳುತ್ತಿದ್ದ ವೇಳೆ ಹಳ್ಳಿಕೆರೆಹುಂಡಿ ಗ್ರಾಮದ ಬಳಿಯ ತಿರುವಿನಲ್ಲಿ ವೇಗವಾಗಿ ಬಂದ ಜೆಸಿಬಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ನಂದೀಶ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಂಚಾರಿ ಪೊಲೀಸರು ಶವವನ್ನು ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೂಕ್ಷ್ಮಾತಿಸೂಕ್ಷ್ಮ ಸಮಾಜಗಳ ಅಭಿವೃದ್ಧಿಗೆ ಶ್ರಮಿಸಿದ್ದೇನೆ

ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಸಾ.ರಾ.ಮಹೇಶ್



ಕೆ.ಆರ್.ನಗರ, ಏ.18– ನನ್ನ 15 ವರ್ಷಗಳ ಅಧಿಕಾರವಧಿಯಲ್ಲಿ ಸೂಕ್ಷ್ಮಾತಿಸೂಕ್ಷ್ಮ ಸಮಾಜಗಳ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ನಡೆದ ಹಿಂದುಳಿದ ವರ್ಗಗಳ ಜೆಡಿಎಸ್ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಕೆಲವು ಬಲಾಢ್ಯ ಸಮಾಜಗಳು ಸರ್ಕಾರದ ಸವಲತ್ತುಗಳನ್ನು ಪಡೆಯುತ್ತಿದ್ದರು. ಆದರೆ ನಾನು ಶಾಸಕನಾದ ಬಳಿಕ ಸವಲತ್ತು ಪಡೆಯಲು ಯಾವ ಸಮುದಾಯಗಳು ಪೈಪೋಟಿ ನಡೆಸಲು ಸಾಧ್ಯವಿಲ್ಲವೋ ಆ ಸಮುದಾಯಗಳಿಗೆ ಸರ್ಕಾರದ ಸೌಲಭ್ಯಗಳನ್ನು ನೀಡಿರುವ ತೃಪ್ತಿ ಇದೆ ಎಂದರು.

ಮೇ 10 ರಂದು ನಡೆಯುವ ಚುನಾವಣೆಯಲ್ಲಿ ನಿಮ್ಮ ಹಕ್ಕುಗಳನ್ನು ಕಿತ್ತುಕೊಳ್ಳುವ ವ್ಯಕ್ತಿಗೆ ಮತ ನೀಡುತ್ತೀರೋ, ಬಲಾಢ್ಯರಿಂದ ಸೂಕ್ಷ್ಮಾತಿಸೂಕ್ಷ್ಮ ಸಮಾಜಕ್ಕೆ ಸವಲತ್ತು ನೀಡಿರುವ ನನಗೆ ಮತ ನೀಡುತ್ತೀರೋ ಎಂಬುದನ್ನು ಯೋಚಿಸಿ ಮತ ಚಲಾಯಿಸಿ. ವಾರದ 7 ದಿನ ನಿಮಗೆ ಸಿಗುವ ನಾನು ಸದಾ ನಿಮ್ಮ ಸೇವೆ ಮಾಡುತ್ತೇನೆ. ಹೀಗಾಗಿ ನನ್ನ ಅಭಿವೃದ್ಧಿ ಕಾರ್ಯ ನೋಡಿ ಮತ ನೀಡಿ ಎಂದು ಮನವಿ ಮಾಡಿದರು.

ಸಿದ್ದರಾಮಯ್ಯ ಸರ್ಕಾರ ರಾಜ್ಯವನ್ನು ಸಾಲದ ಸುಳಿಗೆ ಸಿಲುಕಿಸಿದರೇ, ಬಿಜೆಪಿ ಸರ್ಕಾರ 40% ಕಮಿಷನ್ ಸರ್ಕಾರವಾಗಿದೆ. ರಾಜ್ಯ ಲೂಟಿ ಮಾಡಿ ಕೇಂದ್ರದ ನಾಯಕರ ಕೈ ಬಲ ಪಡಿಸುತ್ತಿರುವ ಎರಡು ರಾಷ್ಟ್ರೀಯ ಪಕ್ಷಗಳನ್ನು ಅಧಿಕಾರದಿಂದ ದೂರವಿಡಬೇಕಾದರೆ ಪ್ರಾದೇಶಿಕ ಪಕ್ಷ ಜೆಡಿಎಸ್‌ಗೆ ಮತ ನೀಡುವ ಮೂಲಕ ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಮಾಡಬೇಕು ಎಂದರು.

ಕಳೆದ ಚುನಾವಣೆಯಲ್ಲಿ ಸೋತ ಬಳಿಕ ನಾಪತ್ತೆಯಾಗಿದ್ದ ಕಾಂಗ್ರೆಸ್ ಅಭ್ಯರ್ಥಿ ಚುನಾವಣೆ 6 ತಿಂಗಳು ಇರುವಾಗ ಕ್ಷೇತ್ರದಲ್ಲಿ ಕಾಣಿಸಿಕೊಂಡು ಕಳೆದ ಚುನಾವಣೆಯಲ್ಲಿ ಸೋತು ಎಲ್ಲವನ್ನೂ ಕಳೆದುಕೊಂಡಿದ್ದೇನೆ. ನನ್ನ ಕೈ ಬಿಡಬೇಡಿ ಎಂದು ಅನುಕಂಪದ ಮತ ಕೇಳುತ್ತಿರುವ ಅವರು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಎಲ್ಲಿದ್ದರು. ಕೆ.ಆರ್.ನಗರ ತಾಲೂಕಿಗೆ ಅವರ ಕೊಡುಗೆ ಏನು ಎಂದು ಪ್ರಶ್ನಿಸಿದ ಅವರು ಕ್ಷೇತ್ರದಲ್ಲಿ ಒಂದೇ ಒಂದು ಕೆಲಸ ಮಾಡಿರುವುದನ್ನು ಸಾಬೀತು ಮಾಡಲಿ ಎಂದು ಸವಾಲು ಹಾಕಿದರು. ಕಾರ್ಯಕ್ರಮದಲ್ಲಿ ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಗ್ರಾಪ ಅಧ್ಯಕ್ಷೆ ನಂದಿನಿ, ಪುರಸಭಾ ಸದಸ್ಯ ಉಮೇಶ್, ತಾಲೂಕು ಜೆಡಿಎಸ್ ಉಪಾಧ್ಯಕ್ಷ ಡೈರಿ ಪ್ರಕಾಶ್, ಅಲ್ಪಸಂಖ್ಯಾತ ಮುಖಂಡರಾದ ಕಿಶೋರ್, ಕೃಷ್ಣಶೆಟ್ಟಿ, ಶ್ರೀನಿವಾಸ್, ಘನತೆ ಕುಮಾರ್, ಧರ್ಮರಾಜ್, ಕುನ್ನೇಗೌಡ, ನಾಗಣ್ಣ, ದಾಕ್ಷಾಯಿಣಿ ಸೇರಿದಂತೆ ಇನ್ನಿತರರಿದ್ದರು.

ಚುನಾವಣೆಯಲ್ಲಿ ಸಿದ್ದರಾಮಯ್ಯ, ಹೆಚ್‌ಸಿಎಂಗೆ ಬೆಂಬಲ

ದಸಂಸ ಮುಖಂಡರು, ಹಿತೈಷಿಗಳ ಸಭೆಯಲ್ಲಿ ತೀರ್ಮಾನ



ತಿ.ನರಸೀಪುರ, ಏ.18– ದೇಶದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿ, ಶೋಷಿತ ದಲಿತ ಸಮುದಾಯಗಳ ಧ್ವನಿ ದಮನಗೊಳಿಸುವ ಜನವಿರೋಧಿ ಸರ್ಕಾರ ಆಡಳಿತ ನಡೆಸುತ್ತಿದೆ. ಈ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಲು ಮುಂಬರುವ ಚುನಾವಣೆಯಲ್ಲಿ ವರುಣಾದಲ್ಲಿ ಅಹಿಂದ ವರ್ಗಗಳ ಬಹುದೊಡ್ಡ ಶಕ್ತಿ ಸಿದ್ದರಾಮಯ್ಯ ಹಾಗೂ ನರಸೀಪುರದಲ್ಲಿ ದಲಿತರ ಧ್ವನಿ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಬೆಂಬಲಿಸಲು ಪಟ್ಟಣದಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಪಟ್ಟಣದ ಮರಿಗೌಡ ಸ್ಮಾರಕ ಸಮುದಾಯ ಭವನದಲ್ಲಿ ನಡೆದ ವರುಣಾ ಮತ್ತು ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು, ಕಾರ್ಯಕರ್ತರು, ಹಿತೈಷಿಗಳ ರಾಜಕೀಯ ಚಿಂತನಾ ಸಭೆಯಲ್ಲಿ ಜನಪರ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕು. ದುರ್ಬಲ ವರ್ಗಗಳ, ದಮನಿತರ ಪರ ಯೋಜನೆಗಳನ್ನು ಜಾರಿಗೊಳಿಸುವ ನಾಯಕರ ಕೈಗೆ ಅಧಿಕಾರ ನೀಡಲು ಕಾಂಗ್ರೆಸ್ ಬೆಂಬಲಿಸಿ, ಸಿದ್ದರಾಮಯ್ಯ, ಮಹದೇವಪ್ಪ ಅವರನ್ನು ಆಯ್ಕೆ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಭಾವನಾತ್ಮಕ ವಿಚಾರ ಮುಂದಿಟ್ಟುಕೊಂಡು 2 ಬಾರಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಜನರಿಗೆ ನೀಡಿದ್ದ ಭರವಸೆ ಈಡೇರಿಸದೇ ಜನವಿರೋಧಿ ಕಾಯ್ದೆಗಳನ್ನು ಜಾರಿಗೊಳಿಸಿ ಜನರ ಬದುಕನ್ನು ಅತಂತ್ರಗೊಳಿಸಿದೆ. ರಾಜ್ಯದಲ್ಲಿ ಸಂವಿಧಾನ, ಪ್ರಜಾಪ್ರಭುತ್ವ ವಿರೋಧಿ ಸರ್ಕಾರ ಆಡಳಿತ ನಡೆಸುತ್ತಿದೆ. ಹಾಗಾಗಿ ಈ ಬಾರಿಯ ಚುನಾವಣೆಯಲ್ಲಿ ಪ್ರಜಾಪ್ರಭುತ್ವ ಮತ್ತು ಸಂವಿಧಾನ ರಕ್ಷಣೆಗೆ ಬದ್ಧವಾಗಿರುವ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕು. ಹೀಗಾಗಿ ಸಿದ್ದರಾಮಯ್ಯ, ಮಹದೇವಪ್ಪ ಅವರ ಗೆಲುವಿಗೆ ದಸಂಸ ಶ್ರಮಿಸಬೇಕು ಎಂದರು.

ಹಿರಿಯ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಮಾತನಾಡಿ, ದೇಶದಲ್ಲಿ ದಲಿತರಷ್ಟೇ ಅಲ್ಲ ಮಹಿಳೆಯರು, ಹಿಂದುಳಿದವರು, ಅಲೆಮಾರಿ ಹಾಗೂ ಬುಡಕಟ್ಟು ಜನರ ಬದುಕು ಅಪಾಯದಲ್ಲಿದೆ. ಈ ಚುನಾವಣೆ ಬಡವರ ಅಸ್ತಿತ್ವದ ಉಳಿವಿಗಾಗಿ ನಡೆಯುತ್ತಿದೆ. ಹೀಗಾಗಿ ಸಿದ್ದರಾಮಯ್ಯ ಮತ್ತು ಮಹದೇವಪ್ಪ ಅಹಿಂದ ವರ್ಗಗಳ ಗಟ್ಟಿಧ್ವನಿ ಆಗಿರುವುದರಿಂದ ಅವರಿಬ್ಬರನ್ನು ಬೆಂಬಲಿಸಬೇಕು ಎಂದು ಕಾರ್ಯಕರ್ತರು ಹಾಗೂ ಮುಖಂಡರಿಗೆ ಕರೆ ನೀಡಿದರು.

ಸಭೆ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ದಸಂಸ ತಾಲೂಕು ಸಂಚಾಲಕ ಕುಕ್ಕೂರು ರಾಜು ಮಾತನಾಡಿದರು. ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ಸೋಸಲೆ ಮಹೇಶ್, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಶಂಭುಲಿಂಗಸ್ವಾಮಿ, ಮಲ್ಲಹಳ್ಳಿ ನಾರಾಯಣ, ಶಂಕರಪುರ ಮಂಜು, ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ಕುಳುವಾ ಸಂಘದ ಅಧ್ಯಕ್ಷ ರವಿ, ಕೊರಚರ ನಾಯಕ ರಾಜು, ಮುಖಂಡರಾದ ಗಟ್ಟವಾಡಿ ಮಹೇಶ್, ಸರಗೂರು ಮರಿಸ್ವಾಮಿ, ಆಲಗೂಡು ನಾಗರಾಜಮೂರ್ತಿ, ಬನ್ನಹಳ್ಳಿ ಉಮೇಶ್, ಹೆಮ್ಮಿಗೆ ಚಂದ್ರು, ಮುತ್ತತ್ತಿ ನಾಗರಾಜು, ಕುರುಬೂರು ನಾರಾಯಣ್, ಕೆರಟ್ಟಿ ನಾಗೇಶ್, ಕೆತಹಳ್ಳಿ ಮಹದೇವ, ವಾಟಾಳ್ ರಾಚಯ್ಯ, ವರದರಾಜು, ರಂಗಸಮುದ್ರ ನಂಜುಂಡ, ರಂಗಸ್ವಾಮಿ, ಬಿಳಿಗೆರೆ ಯೋಗೇಶ್, ಹಿರಿಯೂರು ಸೋಮಣ್ಣ, ಮಹದೇವ, ಹ್ಯಾಕನೂರು ರಾಚಪ್ಪ, ಸಿದ್ದರಾಜು ಇನ್ನಿತರರಿದ್ದರು.

ಚುನಾವಣೆಯಲ್ಲಿ ಜೆಡಿಎಸ್‌ಗೆ ಬೆಂಬಲ



ಹೆಚ್.ಡಿ.ಕೋಟೆ, ಏ.18– ಈ ಬಾರಿಯ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ನಾಗರಾಜ್ ಬಣದ ದಸಂಸ ಸಂಘಟನೆ ಬೆಂಬಲಿಸಲಿದೆ ಎಂದು ಜಿಲ್ಲಾ ಸಂಚಾಲಕ ಆನಗಟ್ಟಿ ದೇವರಾಜು ತಿಳಿಸಿದರು. ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ಕುಟುಂಬಗಳ ಸರ್ವತೋಮುಖ ಅಭಿವೃದ್ಧಿಗಾಗಿ ಜೆಡಿಎಸ್ ನಿರ್ದಿಷ್ಟ ಯೋಜನೆಗಳನ್ನು ಜಾರಿಗೆ ತರಲು, ರೈತರ ಮಕ್ಕಳ ಮದುವೆಗಾಗಿ 2 ಲಕ್ಷ ರೂ. ನೀಡುವುದಾಗಿ ಘೋಷಿಸಿದೆ. ಗ್ರಾಮೀಣ ವಿದ್ಯಾವಂತ ಯುವಕರನ್ನು ಬಲಪಡಿಸಲು ಸ್ಥಳೀಯ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರ ಪುತ್ರ ಜೆಡಿಎಸ್ ಅಭ್ಯರ್ಥಿ ಜಯಪ್ರಕಾಶ್ ಚಿಕ್ಕಣ್ಣ ಅವರನ್ನು ಚುನಾವಣೆಯಲ್ಲಿ ಬೆಂಬಲಿಸಲಾಗುವುದು ಬೆಂಬಲಿಸುತ್ತೇವೆ ಎಂದರು. ಗೋಷ್ಠಿಯಲ್ಲಿ ಮಲ್ಲಿಕಾರ್ಜುನ್, ಸುರೇಶ್, ಮಹದೇವ್, ಮಹಲಿಂಗಯ್ಯ, ಮಹೇಶ್ ಇತರರಿದ್ದರು.



ವರುಣಾ ವಿಧಾನಸಭಾ ಕ್ಷೇತ್ರದ ತುಮ್ಮನೇರಳೆ ಗ್ರಾಪಂ ವ್ಯಾಪ್ತಿಯ ನುಗುಂದ ಗ್ರಾಮದ ವೀರಶೈವ ಸಮುದಾಯದ ಮುಖಂಡರಾದ ರಾಜೇಂದ್ರ ಪ್ರಸಾದ್, ಆನಂದ, ಪ್ರಸಾದ್ ತಮ್ಮ ಬೆಂಬಲಿಗರೊಂದಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು. ಈ ವೇಳೆ ಗ್ರಾಪಂ ಸದಸ್ಯರಾದ ಮರಡಿಹುಂಡಿ ಬುಲೆಟ್ ಮಹದೇವ್, ಪಿ.ಎನ್.ನಾಗರಾಜ್, ಗ್ರಾಪಂ ಸದಸ್ಯರಾದ ಪುಟ್ಟಸ್ವಾಮಿ, ಮಹೇಶ್, ಜಗ್ಗ, ನಂದೀಶ್, ರಾಜು ಸೇರಿದಂತೆ ಇನ್ನಿತರರಿದ್ದರು.

ಗ್ರೀನ್ ಅಬ್ಬರ: ಮುಂಬೈಗೆ ಹ್ಯಾಟ್ರಿಕ್ ಜಯ

ಹೈದರಾಬಾದ್, ಏ.18– ಕ್ಯಾಮರೂನ್ ಗ್ರೀನ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಮುಂಬೈ ಇಂಡಿಯನ್ಸ್ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 14 ರನ್‌ಗಳ ಜಯ ಸಾಧಿಸಿದೆ. ಆ ಮೂಲಕ ಮುಂಬೈ ಟೂರ್ನಿಯಲ್ಲಿ ಹ್ಯಾಟ್ರಿಕ್ ಗೆಲುವು ದಾಖಲಿಸಿತು.



ಇಲ್ಲಿನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 192 ರನ್ ಪೇರಿಸಿತು. ಮುಂಬೈ ಪರ ಕ್ಯಾಮರೂನ್ ಕ್ರೀನ್ 64, ಇಶಾನ್ ಕಿಶನ್ 38, ರೋಹಿತ್ ಶರ್ಮಾ 28, ತಿಲಕ್ ವರ್ಮಾ 37, ಟೀಮ್ ಡೇವಿಡ್ 16 ರನ್ ಗಳಿಸಿದರು. ಹೈದರಾಬಾದ್ ಪರ ಮಾರ್ಕೋ ಜಾನ್ಸೆನ್ 2, ಟಿ.ನಟರಾಜನ್ ಹಾಗೂ ಭುವನೇಶ್ವರ ಕುಮಾರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. 193 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ ಹೈದರಾಬಾದ್ 19.5 ಓವರ್‌ಗಳಲ್ಲಿ 178 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಮಯಾಂಕ್ ಅಗರ್ವಾಲ್ 48, ಐಡನ್ ಮಾರ್ಕ್ರಾಮ್ 22, ಹೆನ್ರಿಕ್ ಕ್ಲಾಸೆನ್ 36, ವಾಷಿಂಗ್‌ಟನ್ ಸುಂದರ್ 10, ಮಾರ್ಕೋ ಜಾನ್ಸೆನ್ 13 ರನ್ ಗಳಿಸಿದರು. ಮುಂಬೈ ಪರ ಜೇಸನ್ ಬೆಹ್ರೆನ್ಡಾರ್ಫ್, ರಿಲೆ ಮೆರೆಡಿತ್ ಹಾಗೂ ಪಿಯುಷ್ ಚಾವ್ಲಾ ತಲಾ 2, ಅರ್ಜುನ್ ತೆಂಡೂಲ್ಕರ್, ಕ್ಯಾಮರೂನ್ ಗ್ರೀನ್ ಒಂದೊಂದು ವಿಕೆಟ್ ಪಡೆದರು. ಗ್ರೀನ್ ಪಂದ್ಯಪುರುಷ ಪ್ರಶಸ್ತಿ ಪಡೆದರು.

ಮತ್ತೊಮ್ಮೆ ಹೆಚ್‌ಡಿಕೆಯನ್ನು ಸಿಎಂ ಮಾಡಲು ನನ್ನನ್ನು ಬೆಂಬಲಿಸಿ

ಮನೆ ಮನೆಗೆ ಪ್ರಚಾರಕ್ಕೆ ಚಾಲನೆ ನೀಡಿದ ಶಾಸಕ ಎಂ.ಅಶ್ವಿನ್ ಕುಮಾರ್

ತಿ.ನರಸೀಪುರ, ಏ.18– ಈ ಬಾರಿಯ ಚುನಾವಣೆಯಲ್ಲಿ ನನ್ನನ್ನು ಮತ್ತೊಮ್ಮೆ ಶಾಸಕನನ್ನಾಗಿ ಆಯ್ಕೆ ಮಾಡುವ ಮೂಲಕ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಸಹಕರಿಸಿ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಮನವಿ ಮಾಡಿದರು.

ಮಂಗಳವಾರ ಕ್ಷೇತ್ರ ವ್ಯಾಪ್ತಿಯ ಜೇನುಗುಡ್ಡೆ ಹನುಮಂತರಾಯಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಮನೆ ಮನೆ ಮತ ಪ್ರಚಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಹಿಂದೆ ಜಿಪಂ ಚುನಾವಣೆ, 2018ರ ವಿಧಾನಸಭಾ ಚುನಾವಣೆ ಸೇರಿದಂತೆ ಈಗ 2023ರ ಚುನಾವಣೆಯಲ್ಲಿಯೂ ಜೇನುಗುಡ್ಡೆ ಹನುಮಂತರಾಯನಿಗೆ ಪೂಜೆ ಸಲ್ಲಿಸಿ, ನುಗ್ಗೇನಹಳ್ಳಿ ಕೊಪ್ಪಲಿನಲ್ಲಿ ಮತಯಾಚನೆಗೆ ಚಾಲನೆ ನೀಡುತ್ತಾ ಬಂದಿದ್ದು, ಈ ಭಾಗದ ಗ್ರಾಮಸ್ಥರೊಂದಿಗೆ ವಿಶೇಷ ಬಾಂಧವ್ಯವಿದೆ ಎಂದರು.

ನನ್ನ ಅಧಿಕಾರವಧಿಯಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿ ಇಲ್ಲದಿದ್ದರೂ ಸಾಕಷ್ಟು ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿಗೊಳಿಸಿದ್ದೇನೆ. ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲಾಗಲಿಲ್ಲ ಎಂಬ ಕೊರಗಿದೆ. 2 ಕೊರೊನಾ, ಮತ್ತೊಂದು ವರ್ಷ ಪ್ರವಾಹ ಸೇರಿದಂತೆ ಮತ್ತಿತರ ಸಂಕಷ್ಟಗಳ ನಡುವೆಯೂ ಸಾಕಷ್ಟು ಅನುದಾನ ತಂದು ಅಗತ್ಯವಿರುವ ಕಡೆ ಅಭಿವೃದ್ಧಿ ನಡೆಸಲಾಗಿದೆ ಹೀಗಾಗಿ ಮತ್ತೊಂದು ಅವಧಿಗೆ ಮತದಾರರು ಆಶೀರ್ವದಿಸಿದರೇ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುತ್ತೇನೆ. ಕಳೆದ ಬಾರಿ ನಿರೀಕ್ಷೆಗೂ ಮೀರಿ ನೀಡಿದ್ದ ಬೆಂಬಲವನ್ನು ಈ ಬಾರಿ ನೀಡುವ ಮೂಲಕ ಮತ್ತೊಮ್ಮೆ ಗೆಲ್ಲಿಸುವಂತೆ ಮನವಿ ಮಾಡಿದರು.



ಕುಮಾರಸ್ವಾಮಿ ಅವರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಜನತಾ ಪರ್ವ ಕಾರ್ಯಕ್ರಮ ರೂಪಿಸಿದ್ದಾರೆ. ಈ ಕಾರ್ಯಕ್ರಮದಡಿ ಜನತಾ ಜಲಧಾರೆ, ಜನತಾ ಮಿತ್ರ ಮತ್ತು ಪಂಚರತ್ನ ಯೋಜನೆಗಳನ್ನು ರೂಪಿಸಿದ್ದು, ಇವುಗಳು ಜಾರಿಯಾಗಬೇಕಾದರೇ ರಾಜ್ಯದ ಜನತೆಯ ಸಹಕಾರ ಮುಖ್ಯ. ಆದ್ದರಿಂದ ಮತ್ತೊಂದು ಅವಕಾಶ ನೀಡಿ ಎಂದರು.

ಈ ವೇಳೆ ತಾಪಂ ಮಾಜಿ ಸದಸ್ಯ ಶ್ರೀನಿವಾಸ್, ಎಪಿಎಂಸಿ ಮಾಜಿ ಸದಸ್ಯ ರಾಜೇಶ್, ಕಾಂಗ್ರೆಸ್ ಮುಖಂಡ ಎಚ್.ಎನ್.ರವಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡರು.

ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷರಾದ ಸೋಮರಾಜ್, ಬಸವನಹಳ್ಳಿ ರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ವೆಂಕಟೇಶ್, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಬನ್ನೂರು ಹೋಬಳಿ ಅಧ್ಯಕ್ಷ ಅತ್ತಹಳ್ಳಿ ಕುಮಾರಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಹೋಟೆಲ್ ರಾಮಸ್ವಾಮಿ, ಗೊರವನಹಳ್ಳಿ ನಾಗರಾಜು, ಮೇಗಳಕೊಪ್ಪಲು ಜಯರಾಮ್, ಬಾನಗೋಡಿ ನಾರಾಯಣಸ್ವಾಮಿ, ದೇವರಾಜ್ ಮತ್ತಿತರರಿದ್ದರು.

ಶಾಸಕರ ಸರಳ, ಸಜ್ಜನಿಕೆ ಮೆಚ್ಚಿರುವ ಕ್ಷೇತ್ರದ ಜನತೆ ಈ ಬಾರಿ ಅವರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಲಿದ್ದಾರೆ. ಈ ಭಾಗದಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಅಭಿವೃದ್ಧಿ ಶೂನ್ಯ. ಕೇವಲ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗೆ ಅವರು ಸೀಮಿತರಾಗಿದ್ದರು. ಸಾರ್ವಜನಿಕರ ಸಂಪರ್ಕಕ್ಕೆ ಸಿಗದೇ ಅವರು ಎಲ್ಲವನ್ನು ಅವರ ಮಗ ಬೋಸ್‌ಗೆ ವಹಿಸಿದ್ದರು. ಅವರಿಂದ ಕ್ಷೇತ್ರದ ಜನರಿಗೆ ಯಾವುದೇ ರೀತಿಯ ಸ್ಪಂದನೆ ದೊರೆಯದ ಹಿನ್ನೆಲೆಯಲ್ಲಿ ಈ ಬಾರಿಯೂ ಮತ್ತೆ ಜೆಡಿಎಸ್ ಬೆಂಬಲಿಸಲು ನಿರ್ಧರಿಸಿದ್ದಾರೆ. ಅಶ್ವಿನ್ ಕುಮಾರ್ ಕೋಟ್ಯಾಂತರ ರೂ. ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾದರೆ ಅವರಿಗೆ ಸಚಿವರಾಗುವ ಎಲ್ಲ ಸಾಧ್ಯತೆಗಳಿದ್ದು ಅನುದಾನ ಸಾಗರೋಪಾದಿಯಲ್ಲಿ ಹರಿದು ಬರಲಿದೆ ಹಾಗಾಗಿ ನಾವು, ಕ್ಷೇತ್ರದ ಜನತೆ ಅವರನ್ನೇ ಬೆಂಬಲಿಸುತ್ತೇವೆ.

– ರಾಮಸ್ವಾಮಿ, ರಾಜ್ಯ ಜೆಡಿಎಸ್ ಕಾರ್ಯದರ್ಶಿ

ಶಿವನಂಜ ನಿಧನ



ಸರಗೂರು, ಏ.18– ಪಟ್ಟಣದ 4ನೇ ವಾರ್ಡ್ ನಿವಾಸಿ, ಆಟೋ ಡ್ರೈವರ್ ಶಿವನಂಜ(38) ಮಂಗಳವಾರ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಅಂಬೇಡ್ಕರ್ ರುದ್ರಭೂಮಿಯಲ್ಲಿ ಬುಧವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ವಿಧಾನಸಭಾ ಚುನಾವಣೆ
2023
ಚಾಮರಾಜ ಕ್ಷೇತ್ರ
ಮಾನ್ಯರೆ, ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾದ
ಕೆ. ಹರೀಶ್‌ಗೌಡ ಬಿ.ಎ.
ದಿನಾಂಕ 19-4-2023ರ ಬುಧವಾರ ಬೆಳಿಗ್ಗೆ 9.00 ಗಂಟೆಗೆ
ಕೆ.ಜಿ. ಕೊಪ್ಪಲಿನ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ
ಪೂಜೆ ಸಲ್ಲಿಸಿ ಕಾಂಗ್ರೆಸ್ ಮುಖಂಡರು,
ಕಾರ್ಯಕರ್ತರುಗಳು, ಹಿತೈಷಿಗಳು,
ಅಭಿಮಾನಿಗಳ ಜೊತೆಗೂಡಿ ಮೈಸೂರು ಮಹಾನಗರ
ಪಾಲಿಕೆಯವರೆಗೆ ಪಾದಯಾತ್ರೆಯ ಮೂಲಕ
ತೆರಳಿ ನಾಮಪತ್ರ ಸಲ್ಲಿಸಲಾಗುವುದು.
ಕಾರ್ಯಕರ್ತರುಗಳು, ಹಿತೈಷಿಗಳು, ಅಭಿಮಾನಿಗಳು
ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಬೆಂಬಲಿಸಬೇಕಾಗಿ ವಿನಂತಿ.
ಪ್ರಕಟಣೆ: ಕೆ. ಹರೀಶ್‌ಗೌಡ ಸ್ನೇಹ ಬಳಗ
ಚಾಮರಾಜ ವಿಧಾನಸಭಾ ಕ್ಷೇತ್ರ, ಮೈಸೂರು
@bhi design: 9740797701